ಬೆಲೆ: ಎರಡು ಆಣೆ

ವರ್ಗಣಿ ದರ
(ಅಂಚೆವೆಚ್ಚ ಸೇರಿ)
ವರ್ಷಕ್ಕೆ ರೂ. ೬-೪-೦
೬ ತಿಂಗಳಿಗೆ ,, ೩-೪-೦
೩ ತಿಂಗಳಿಗೆ ,, ೧-೧೨-೦
ವ್ಹಿ. ಪಿ. ಮೂಲಕ ತರಿಸಿಕೊಂಡಲ್ಲಿ ೫ ಆಣೆ ಹೆಚ್ಚಿಗೆ ಬೀಳುವದು.

ಕರ್ಮವೀರ

KARMAVEER
WEEKLY
HUBLI
FEB. 18
1946

ಸಂಪಾದಕರು : ಹ. ರಾ. ಪುರೋಹಿತ, ಎಂ. ಎ.

ಅಖಿಲ ಕರ್ನಾಟಕದಲ್ಲಿ ಅತ್ಯಂತ ಜನಪ್ರಿಯ ವಾರಪತ್ರಿಕೆ

Editor : H. R. Purohit, M. A.

ಸಂಪುಟ ೧೭] 卐 ಹುಬ್ಬಳ್ಳಿ ಸೋಮವಾರ ತಾರೀಖು ೧೮ — ೨ — ೧೯೪೬ 卐 [ಸಂಚಿಕೆ ೪೩

ವಿಧ್ವಂಸಕ ಚಟುವಟಿಕೆ ಮತ್ತು ಅಹಿಂಸಾ ತತ್ವ

ಗೋಪ್ಯ, ವಿಧ್ವಂಸ ಮೊದಲಾದ್ದು ಅಹಿಂಸೆಗೆ ಹೊಂದಿಕೆಯಾಗದು
ಅಗಸ್ಟ ವೀರರ ಧೈರ್ಯ ಸಾಹಸ ಅಭಿನಂದನೀಯ — ಆದರೆ
ಪೂರ್ಣ ಅಹಿಂಸಾತ್ಮಕವಾಗಿದ್ದಿದ್ದರೆ ಇನ್ನೂ ಫಲಕಾರಿಯಾಗುತಿತ್ತು

ಮಹಾತ್ಮಾ-ಮಿತ್ರ ಸಂವಾದ .... "ಹರಿಜನ"ದಲ್ಲಿ ಶ್ರೀ. ಪ್ಯಾರೇಲಾಲರಿಂದ

"ತಂತಿಗಳನ್ನು ಕತ್ತರಿಸುವದು ಅಹಿಂಸೆಯ ತತ್ವಕ್ಕೆ ವಿರುದ್ಧವಾಗಿರುವದು ಹೇಗೆ ?" ಎಂದೊಬ್ಬ ಕೆಳೆಯರು ಕೆಲದಿನ ಹಿಂದೆ ಗಾಂಧೀಜಿಯನ್ನು ಕೇಳಿದರು.

ಗಾಂಧೀಜಿಯ ಬಿಡುಗಡೆಯಾದಂದಿನಿಂದಲೂ ಇದೇ ಮಾದರಿಯ ಪ್ರಶ್ನೆಗಳನ್ನು ಅವರಿಗೆ ಅನೇಕರು ಕೇಳಿದ್ದಾರೆ. ಗಾಂಧೀಜಿ ಆಗಾಖಾನ ಅರಮನೆಯನ್ನು ಬಿಟ್ಟು ಬಂದ ಕೆಲಕಾಲಾನಂತರ ಇನ್ನೊಬ್ಬ ಗೆಳೆಯರು ಇದೇ ಪ್ರಶ್ನೆಯನ್ನು ಈ ಬಗೆಯಾಗಿ ಮಂಡಿಸಿದ್ದರು: "ನಮ್ಮ ಯುವಕ ಜನರಲ್ಲಿ ಈಗ ಇಬ್ಬಗೆಯ ವಿಚಾರಧಾರೆಯುಂಟು. ಕ್ರಿಯಾತ್ಮಕ ಕಾರ್ಯಕ್ರಮದ ರೂಪದಲ್ಲಿ ಅಹಿಂಸೆಯೀಗ ಸತ್ವರಹಿತವಾಗಿ ಹೋಗಿದೆಯೆಂದು ಒಂದು ವಿಚಾರಧಾರೆಯ ಹೇಳಿಕೆ. ಜನತೆಯನ್ನು ಜಾಗ್ರತಗೊಳಿಸುವ ತನ್ನ ಕರ್ಮವನ್ನು ಅದು ಮಾಡಿ ಮುಗಿಸಿದೆ ಮತ್ತು ಸ್ವಾತಂತ್ರ್ಯದ ಕೊನೆಯ ಹೋರಾಟಕ್ಕೆ ರಂಗವನ್ನು ಅಣಿಗೊಳಿಸಿದೆ. ಈ ಹೋರಾಟದಲ್ಲಿ ಬಲಪ್ರಯೋಗವನ್ನು ತಿರಸ್ಕರಿಸುವದು ಸಾಧ್ಯವಲ್ಲ. ಇನ್ನೊಂದು ವಿಚಾರ ಧಾರೆಯವರು ಅಹಿಂಸೆಯಲ್ಲಿ ವಿಶ್ವಾಸವನ್ನು ವ್ಯಕ್ತಪಡಿಸುತ್ತಿದ್ದಾರೆ. ಆದರೆ ಅದರ ತಂತ್ರದಲ್ಲಿ ಪರಿವರ್ತನ, ವಿಸ್ತರಣಗಳಿಗೆ ಅವಕಾಶವುಂಟು, ಎಂದು ಅವರ ವಾದ. ನಮ್ಮ ಹೋರಾಟದ ಮುಂದಿನ ಅಂಕದಲ್ಲಿ ವಿಶಾಲ ಪ್ರಮಾಣದ ಸಂಘಟಿತ ವಿಧ್ವಂಸವೇ ಮುಖ್ಯ ಪಾತ್ರವಹಿಸುವದು."

ಗಾಂಧೀಜಿ ಇದನ್ನು ಪ್ರತಿವಾದಿಸಿದರು. ಅಹಿಂಸಾತ್ಮಕ ಕಾರ್ಯಕ್ರಮದಿಂದ ವಿಧ್ವಂಸ ಚಟುವಟಿಕೆ ನಿಷ್ಪನ್ನವಾಗಬಲ್ಲದೆಂಬದನ್ನಾಗಲಿ ಅವರು ಒಪ್ಪಲಿಲ್ಲ. ಯಾರು ಬೇಕೆನ್ನಲಿ ಬೇಡೆನ್ನಲಿ, ವಿಧ್ವಂಸ ಕಾರ್ಯಕ್ರಮ ಉಳಿದೇ ಉಳಿಯುವದೆಂದು ಆ ಗೆಳೆಯರು ಆಗ್ರಹ ಹಿಡಿದರು. "ಹೊಣೆಗೆಟ್ಟ ಭವಿಷ್ಯವಾದದಿಂದ ಏನೂ ಸಿದ್ಧಿಸುವದಿಲ್ಲ," ಎಂದು ನಡುವೆಯೆ ಅಡ್ಡಗಟ್ಟಿದರು ಗಾಂಧೀಜಿ. "ನಿಜವಾದ ಪ್ರಶ್ನೆಯಿದು—ಈ ವಿಷಯದಲ್ಲಿ ನಮ್ಮ ನಿಲುವೆಯೇನು, ನಾವು ಮುಂದೆ ಈ ವಿಷಯ ಯಾವ ಧೋರಣ ವಹಿಸುವೆವು ?"

ಇಮ್ಮಡಿ ಭ್ರಮೆ

ಆ ಗೆಳೆಯರು ಗಾಂಧೀಜಿಯ ಮುಂದೆ ತಮ್ಮ ಸಂದೇಹಗಳನ್ನು ಬಿಚ್ಚಿದರು. ಸರಕಾರಿ ಸೊತ್ತುಗಳನ್ನು ಧ್ವಂಸಮಾಡುವದು ಹಿಂಸೆಯೆ ? "ತನ್ನದಲ್ಲದ ಸೊತ್ತನ್ನು ಧ್ವಂಸಿಸಲು ಯಾರಿಗೂ ಹಕ್ಕಿಲ್ಲವೆಂದು ನೀವನ್ನುವಿರಿ. ಹಾಗಿದ್ದರೆ, ಸರಕಾರಿ ಸೊತ್ತು ನನ್ನ ಸೊತ್ತಲ್ಲವೆ ? ಅದು ನನ್ನದೇ ಸೊತ್ತೆಂದು ನಾನು ಸಾಧಿಸುತ್ತೇನೆ. ಅದುದರಿಂದ ನಾನು ಅದನ್ನು ಧ್ವಂಸಮಾಡಬಲ್ಲೆ."

"ನಿಮ್ಮ ವಾದದಲ್ಲಿ ಇಮ್ಮಡಿ ಭ್ರಮೆಯುಂಟು" ಉತ್ತರಿಸಿದರು ಗಾಂಧೀಜಿ. ಮೊದಲನೆಯದಾಗಿ ಸರಕಾರಿ ಸೊತ್ತು ರಾಷ್ಟ್ರದ ಸೊತ್ತೆಂದು ಭಾವಿಸಿದರೂ—ಅದೀಗ ಹಾಗಿಲ್ಲ—ಸರಕಾರದ ಮೇಲೆ ನನ್ನ ಅಸಂತೋಷವಿದೆಯೆಂದು ನಾನು ಅದರ ಸೊತ್ತು ಧ್ವಂಸಮಾಡಕೂಡದು. ಅದರ ಯಾವದಾದರೊಂದು ಚಟುವಟಿಕೆಯನ್ನು ಒಪ್ಪಲೊಲ್ಲದವರೆಲ್ಲ ಸೇತುವೆಗಳು, ಸಂಪರ್ಕ ಸೌಕರ್ಯಗಳು, ಮಾರ್ಗಗಳೆ ಮೊದಲಾದವುಗಳನ್ನು ಧ್ವಂಸಮಾಡುವ ಹಕ್ಕನ್ನು ಕೇಳಿದರೆ ರಾಷ್ಟ್ರೀಯ ಸರಕಾರವೇ ಆದರೂ ಒಂದು ದಿನ ಸಾಗಲಾರದು. ಮೇಲಾಗಿ ಪಾಪವಿರುವುದು ಸೇತುವೆ ಮಾರ್ಗಗಳೇ ಮೊದಲಾದ ನಿರ್ಜೀವ ವಸ್ತುಗಳಲ್ಲಲ್ಲ; ಮಾನವ ಜೀವಿಗಳಲ್ಲಿ. ಅವರನ್ನೇ ನಾವು ತುಡುಕಬೇಕಾದ್ದು. ಸೇತುವೆ ಮೊದಲಾದವುಗಳನ್ನು ಸ್ಫೋಟಕಗಳ ಮೂಲಕ ನಾಶಗೊಳಿಸುವದರಿಂದ ಈ ಪಾಪವನ್ನು ತುಡುಕುವ ಬದಲಿಗೆ ನಾವು ನಾಶಗೊಳಿಸಬಯಸುವ ಪಾಪದ ಸ್ಥಾನದಲ್ಲಿ ಅದಕ್ಕಿಂತಲೂ ಭಯಾನಕವಾದುದನ್ನು ಪ್ರಕೋಪಿಸಿದಂತಾಗುತ್ತದೆ. "ಪಾಪವಿರುವುದು ನಮ್ಮಲ್ಲಿಯೆ; ಒಳ್ಳೆಯ ಉದ್ದೇಶಕ್ಕಾಗಿ ಹೇಗೊ ಹಾಗೆಯೆ ದುರುದ್ದೇಶಕ್ಕೂ ಬಳಸಬಹುದಾದ ಸೇತುವೆಯಲ್ಲಲ್ಲ-ಇದನ್ನು ನಾನು ಒಪ್ಪುವೆ. ಅದನ್ನು ಹಾರಿಸಿಬಿಡುವದರಿಂದ ಅದಕ್ಕಿಂತ ಭಯಾನಕವಾದ ಪ್ರತಿಹಿಂಸೆಗೆ ಉದ್ದೀಪನ ದೊರೆತಂತಾಗುವದೆಂದೂ ನಾನು ಒಪ್ಪುವೆ: ಆದರೆ ಚಳವಳಿಯ ವಿಜಯಕ್ಕೂ ಜನತೆಯ ಎದೆಗೇಡಿತನವನ್ನು ತಡೆಯುವದಕ್ಕೂ ಗತ್ತುಗಾರಿಕೆಯ ದೃಷ್ಟಿಯಲ್ಲಿ ಅದು ಅವಶ್ಯವಾಗಬಹುದು," ಎಂಬದಾಗಿ ಆ ಗೆಳೆಯರು ಮಾರ್ಕೊಂಡರು.

ವಿಧ್ವಂಸವೂ ಹಿಂಸೆಯೆ

"ಇದೆಲ್ಲ ಆ ಹಳೆಯ ವಾದವೇ" ಗಾಂಧೀಜಿ ಉತ್ತರ ಕೊಟ್ಟರು. "ಹಳೆಗಾಲದಲ್ಲಿ ಭಯೋತ್ಪಾದಕ ಚಳವಳಿಯ ಪರವಾಗಿ ಇದೇ ವಾದವನ್ನು ಮುಂದೊಡ್ಡಲಾಗುತ್ತಿತ್ತು. ವಿಧ್ವಂಸಕ ಚಟುವಟಿಕೆಯೂ ಒಂದು ಬಗೆಯ ಹಿಂಸೆಯೆ. ದೈಹಿಕ ಹಿಂಸೆಯ ನಿರರ್ಥಕತೆಯನ್ನು ಜನರು ಮನಗಂಡಿದ್ದಾರೆ. ಆದರೆ ಕೆಲವರಿಗೆ ಹಿಂಸೆಯನ್ನು ವಿಧ್ವಂಸವೆಂಬ ಬದಲಾದ ಬಗೆಯಲ್ಲಿ ಬಳಸಿದರೆ ಯಶಸ್ಸು ಸಿಕ್ಕೀತೆಂಬ ತಿಳಿವಳಿಯಿದ್ದಂತಿದೆ. ಪೂರ್ಣ ಅಹಿಂಸೆಯ ಕ್ರಿಯೆಯಿದ್ದಿಲ್ಲವಾದರೆ ಇಡಿ ಜನತೆಯೇ ಈ ರೀತಿ ಧೈರ್ಯ ನಿರ್ಭಯತೆಗಳ ಪರಮೋಚ್ಚ ಮಟ್ಟಕ್ಕೆ ಏರುತ್ತಿದ್ದಿಲ್ಲವೆಂದೇ ನನ್ನ ದೃಢವಾದ ನಂಬಿಕೆ. ಅದು ಯಾವ ಬಗೆಯಾಗಿ ಕೆಲಸ ಮಾಡುತಿದೆಯೆಂದು ನಮಗಿನ್ನೂ ಗೊತ್ತಾಗಿಲ್ಲ. ಆದರೆ ಅಹಿಂಸೆಯ ಹಾದಿಹಿಡಿದು, ಹೊರನೋಟಕ್ಕೆ ಸೋಲು ಅಡೆತಡೆಗಳು ಗಂಟುಬಿದ್ದಂತೆ ಕಂಡರೂ—ನಾವು ಲಗುಬಗೆಯಿಂದ ಕಸುವು ಗಳಿಸಿದ್ದೇವೆ. ಅತ್ತ ನೋಡಿದರೆ ಭಯೋತ್ಪಾದ ಕತ್ವದಿಂದ ಎದೆಗೇಡಿತನ ಪರಿಣಮಿಸಿದ್ದನ್ನು ಕಾಣುತ್ತೇವೆ. ಅತುರದಿಂದ ಕಾರ್ಯಹಾನಿಯಾಗುತ್ತದೆ."

ಆ ಗೆಳೆಯರು ಆಗ್ರಹ ತೊಟ್ಟರು: "ಅಹಿಂಸಾತ್ಮಕ ಚಟುವಟಿಕೆಯಲ್ಲಿ ಪಳಗಿದವರು ಅಂಥ ಅನುಭವವಿಲ್ಲದವರಿಗಿಂತಲೂ ನಿಜವಾದ ಅಹಿಂಸೆಯ ಆದರ್ಶಕ್ಕೆ ಹೆಚ್ಚು ಹತ್ತಿರ ಬರುತ್ತಾರೆಂದು ನಮ್ಮ ಅನುಭವ."

"ಹಿಂಸೆಯನ್ನು ಮತ್ತೆ ಮತ್ತೆ ಪ್ರಯೋಗಿಸಿ ವ್ಯರ್ಥವೆಂದು ಅವರು ಮನಗಂಡಿರುತ್ತಾರೆ ಎಂಬ ಅರ್ಥದಲ್ಲಿ ಮಾತ್ರ ನೀವು ಹೇಳುವುದು ಸತ್ಯವಾಗಬಲ್ಲದು. ಅದಕ್ಕಿಂತ ಹೆಚ್ಚೇನೂ ಇಲ್ಲ. ಹಾಗೆಯೆ, ಪಾಪದ ಸವಿಯರಿತವನೇ ಅದರ ಅರಿವಿಲ್ಲದವನಿಗಿಂತ ಹೆಚ್ಚು ಪುಣ್ಯಸಾಮೀಪ್ಯ ಪಡೆಯುತ್ತಾನೆಂದೂ ನೀವು ವಾದಿಸುವಿರಾ? ನಿಮ್ಮ ವಾದದ ಪರಿಣಾಮ ಅಷ್ಟಕ್ಕೇ ಬರುತ್ತದೆ."

ಗೋಪ್ಯ ಚಟುವಟಿಕೆ

ಆ ಮೇಲೆ ಚರ್ಚೆ ಗುಟ್ಟಿನ ಕಡೆ ಹೊರಳಿತು. ವೈಯಕ್ತಿಕ ಗುಟ್ಟಿನಿಂದ ಭೀತಿ ಅಥವಾ ಹೇಡಿತನ ಬೆಳೆಯಬಹುದಾದರೂ ಸಂಘಟಿತವಾದ ಗುಟ್ಟಿನಿಂದ ಪ್ರಯೋಜನವಾದೀತೆಂದು ಆ ಗೆಳೆಯರು ವಾದಿಸಿದರು. "ಸಂಬಂಧಪಟ್ಟ ಮನುಷ್ಯನು ತನ್ನ ಕರ್ಮದ ಫಲವನ್ನು ಧೈರ್ಯದಿಂದ ಎದುರಿಸಲು ಸಿದ್ಧನಾಗಿದ್ದರೆ ಅವನ ಗುಟ್ಟು ಗುಟ್ಟೆನಿಸಲಾರದು. ಅವನು ತನ್ನ ಉದ್ದೇಶಸಾಧನೆಗೋಸ್ಕರ ಗುಟ್ಟನ್ನು ಬಳಸುತ್ತಾನೆ. ಅವನು ತನ್ನ ವಿಚಾರಣೆಯಲ್ಲಿ ಕೇಳಲ್ಪಡಬಹುದಾದ ಪ್ರಶ್ನೆಗಳಿಗೆ ಉತ್ತರ ಕೊಡಲು ನಿರಾಕರಿಸಬಹುದು. ಅವನು ಸುಳ್ಳು ಹೇಳುವದು ಅವಶ್ಯವಿಲ್ಲ."

ಆದರೆ ಗಾಂಧೀಜಿ ಜಗ್ಗಲಿಲ್ಲ. "ಗುಟ್ಟಿನ ಸಂಘಟನೆ ಎಷ್ಟೇ ದೊಡ್ಡದಾಗಿದ್ದರೂ ಏನೂ ಒಳಿತು ಮಾಡಲಾರದು" ಎಂದರವರು. ಗುಟ್ಟುತನದ ಉದ್ದೇಶ ನಮ್ಮ ಸುತ್ತ ಸಂರಕ್ಷಣೆಯ ಕೋಟೆಯನ್ನು ಕಟ್ಟುವದೇ ಆಗಿದೆ. ಅಹಿಂಸೆ ಅಂಥ ಸಂರಕ್ಷಣೆಯೆಂದರೆ ಹೇಸುತ್ತದೆ. ಅದು ಬಹಿರಂಗವಾಗಿ, ಎಣೆಯಿಲ್ಲದ ವಿರೋಧವನ್ನೆದುರಿಸಿ, ಕೆಲಸ ಮಾಡುತ್ತದೆ. ಶತಮಾನ ಶತಮಾನಗಳಿಂದ ಹೇಳಬಾರದ ದಬ್ಬಾಳಿಕೆಯಿಂದ ನುಚ್ಚುನುರಿಯಾಗಿರುವ ವಿಸ್ತಾರವಾದ ಜನತೆಯನ್ನು ನಾವು ಕ್ರಿಯೆಗಾಗಿ ಸಂಘಟಿಸಬೇಕಾಗಿದೆ. ಬಹಿರಂಗ, ಸತ್ಯಶೀಲ ಮಾರ್ಗದಿಂದಲ್ಲದೆ ಬೇರೆ ಬಗೆಯಿಂದ ಈ ಜನತೆಯನ್ನು ಸಂಘಟಿಸುವದು ಸಾಧ್ಯವಲ್ಲ. ಬಾಲ್ಯದಿಂದ ೭೬ ವಯಸ್ಸಿಗೆ ಬೆಳೆದಿರುವ ನಾನು ಯಾವಾಗಲೂ ಗುಟ್ಟೆಂದರೆ ಹೇಸಿಕೆಪಡುತ್ತ ಬಂದಿದ್ದೇನೆ. ಆದರ್ಶವನ್ನು ಎಂದೆಂದೂ ಶಿಥಿಲವಾಗಗೊಡಕೂಡದು. ನಾವು ತತ್ವಕ್ಕೆ ಪೂರ್ಣವಾಗಿ ಅಂಟಿಕೊಂಡ ಹೊರತು ಮುಂದುವರಿಯುವದು ಸಾಧ್ಯವೇ ಇಲ್ಲ.

"ನಾವು ಯಾವಾಗಲೂ ನಮ್ಮ ಆದರ್ಶವನ್ನು ಪೂರ್ಣ ಆಚರಿಸಿಲ್ಲವೆಂದು ನನಗೆ ಗೊತ್ತು. ನಾವು ಅಲ್ಲಲ್ಲಿ ಜಾರಿದ್ದುಂಟು. ನಮ್ಮ ಸಾಧನಗಳು ಇಷ್ಟು ಸದೋಷವಾಗಿರದಿದ್ದ ಪಕ್ಷದಲ್ಲಿ ನಮ್ಮ ಗುರಿಯನ್ನು ಇನ್ನೂ ಸಮೀಪಿಸಬಹುದಾಗಿತ್ತು. ನಮ್ಮ ಆದರ್ಶವನ್ನು ನಾವಿಷ್ಟು ಸಡಿಲಿಸಿದ್ದರೂ ಮೂಕ ಜನಕೋಟಿಯಲ್ಲಿ ಅದು ಸದ್ದಿಲ್ಲದೆ ಹಾಲಿನಲ್ಲಿ ಹೆಪ್ಪಿನಂತೆ ಕೆಲಸ ಮಾಡಿದೆ. ಎಂದೊಡನೆ ನಾವು ಕೊನೆಯವರೆಗೂ ಹೀಗೆಯೇ ಸಾಗಬಹುದೆಂದು ಅರ್ಥವಲ್ಲ. ನಾವು ಜಡವಾಗಿ ಉಳಿಯಲಾರೆವು. ನಾವು ಮುಂದೆ ಸಾಗಬೇಕು ಇಲ್ಲದಿದ್ದರೆ ಹಿಂದೆ ಜಾರುವದು ನಿಶ್ಚಯ."

ಅಗಸ್ಟ ಕ್ರಾಂತಿಯಿಂದ ಸ್ವಾತಂತ್ರ್ಯಕ್ಕೆ ಹಿಂದೇಟು ?

"ಹಾಗಾದರೆ," ಕೇಳಿದರಾ ಗೆಳೆಯರು, "ಅಗಸ್ಟ ಕ್ರಾಂತಿಯಿಂದ ನಮ್ಮ ಸ್ವಾತಂತ್ರ್ಯದ ಹೋರಾಟಕ್ಕೆ ಹಿಂದೇಟು ಬಿತ್ತೆಂದು ನಿಮ್ಮ ತಿಳಿವಳಿಕೆಯೊ? ಆ ಕ್ರಾಂತಿಕಾಲದಲ್ಲಿ ನಮ್ಮ ಜನತೆ ತೋರಿಸಿದ ಎಲ್ಲ ಶೌರ್ಯ ಸಾಹಸಗಳು ವ್ಯರ್ಥವಾದವೆನ್ನುತ್ತೀರಾ?"

"ಇಲ್ಲ," ಎಂದರು ಗಾಂಧೀಜಿ. "ಹಾಗೆ ನಾನು ಹೇಳುವದಿಲ್ಲ. ಐತಿಹಾಸಿಕ ಪರಿವರ್ತನೆಯಲ್ಲಿ ಎಲ್ಲ ಬಗೆಯ ಹೋರಾಟಗಳಿಂದ, ಅಗಸ್ಟ ಗಲಭೆಗಳಿಂದ ಕೂಡ, ಸ್ವಾತಂತ್ರ್ಯದತ್ತ ದೇಶ ಸಾಗಿದ್ದು ಕಂಡುಬಂದೀತು. ನಾನು ಹೇಳುವದಿಷ್ಟೆ- ನಾನು ಪ್ರತಿಪಾದಿಸಿದ ಅಹಿಂಸಾ ಮಾರ್ಗದ ಶೌರ್ಯವನ್ನು ಪ್ರದರ್ಶಿಸಿದ್ದಾದರೆ ಈ ಪರಿವರ್ತನೆ ಇನ್ನೂ ಮಹತ್ತರವಾಗುತ್ತಿತ್ತು. ಈ ದೃಷ್ಟಿಯಿಂದ ವಿಧ್ವಂಸಕ ಚಟುವಟಿಕೆಗಳು ಸ್ವಾತಂತ್ರ್ಯದ ಸಿದ್ಧಿಗೆ ಹಿಂದೇಟು ಹಾಕಿದವು. ಉದಾಹರಣೆಗಾಗಿ, ಜಯಪ್ರಕಾಶ ನಾರಾಯಣರಂಥವರ ಧೈರ್ಯ, ದೇಶಭಕ್ತಿಗಳು ನನ್ನ ಪರಮ ಆದರಕ್ಕೆ ಪಾತ್ರವಾಗಿವೆ. ಆದರೂ ಜಯಪ್ರಕಾಶರು ನನ್ನ ಆದರ್ಶ ವ್ಯಕ್ತಿಯಾಗಲಾರರು. ಶೌರ್ಯಕ್ಕಾಗಿ ನಾನೊಂದು ಪದಕವನ್ನು ಅರ್ಪಿಸಬೇಕಾಗಿದ್ದರೆ ಅದು ಜಯಪ್ರಕಾಶರಿಗೆ ಹೋಗದೆ ಅವರ ಹೆಂಡತಿಗೆ ಹೋಗುತಿತ್ತು. ಅವಳು ಸರಳ ಮತ್ತು ರಾಜಕಾರಣದಲ್ಲಿ ಅನಭಿಜ್ಞ ವ್ಯಕ್ತಿಯಾಗಿದ್ದರೂ ಸತ್ಯಾಗ್ರಹದ ಅತ್ಯಂತ ಪರಿಶುದ್ಧ ಸ್ವರೂಪ ಅವಳ ರೂಪದಲ್ಲಿ ಪ್ರತ್ಯಕ್ಷವಾಗಿದೆ. ಅದರ ಮುಂದೆ ಜಯಪ್ರಕಾಶರೂ ಮಣಿಯಲೇ ಬೇಕು. ನಾನು ಅಗಸ್ಟ ಕ್ರಾಂತಿಯನ್ನು ಕುರಿತು ಅಂದದ್ದು ಆಗಿ ಹೋದದ್ದರ ಮೇಲಿನ ತೀರ್ಪಲ್ಲ. ಅದನ್ನು ಖಂಡಿಸಲು ನಾನು ಯಾವಾಗಲೂ ನಿರಾಕರಿಸುತ್ತ ಬಂದಿದ್ದೇನೆ. ಆದರೆ ಇದು ಭವಿಷ್ಯತ್ತಿಗೊಂದು ಸೂಚನೆ ಅಷ್ಟೆ."

"ನಮ್ಮ ಜನರಿಗೆ ಅಹಿಂಸೆಯಲ್ಲಿ ವಿಶ್ವಾಸವುಂಟು" ಎಂದು ಆ ಗೆಳೆಯ ಕೊನೆಗೆ ಒಪ್ಪಿದರು. "ಆದರೆ ಅದನ್ನು ಚೈತನ್ಯಯುಕ್ತವಾಗಿ ಮಾಡುವ ಬಗೆ ಅವರಿಗೆ ತಿಳಿಯದು. ಈ ಅಯಶಸ್ವಿತೆಗೆ ಕಾರಣವೇನು ?"

"ವರ್ಷವರ್ಷಗಳ ಯಾತನಾಮಯ ಪುನಶ್ಚರಣೆಯ ನಂತರ ಅಹಿಂಸೆಯಲ್ಲಿ ಸತ್ವವಿದೆಯೆಂದು ಜನರಿಗೆ ಅರಿವಾಗಹತ್ತಿದೆ. ಆದರೆ ಅದರ ಸಮಗ್ರ ಸೌಂದರ್ಯ ಪರಿಪೂರ್ಣತೆಗಳನ್ನು ಅವರಿನ್ನೂ ಕಂಡಿಲ್ಲ. ಅಹಿಂಸೆಯ ಪರಿಣಾಮಕರ ಸಂಘಟನೆಗಾಗಿ ಅವಶ್ಯವಿರುವ ಎಲ್ಲ ಕೃತಿಗಳಿಗೆ ಅವರು ಬೆಂಬಲವಿತ್ತಿದ್ದರೆ, ಹದಿನೆಂಟು ಬಗೆಯ ವಿಧಾಯಕ ಕಾರ್ಯಕ್ರಮವನ್ನು ಸಾಂಗವಾಗಿ ಪೂರೈಸಿದ್ದರೆ, ನಮ್ಮ ಚಳವಳಿ ನಮ್ಮನ್ನು ನಮ್ಮ ಗುರಿಗೊಯ್ದು ಮುಟ್ಟಿಸುತ್ತಿತ್ತು. ಆದರೆ ಇಂದು ನಮ್ಮ ಬುದ್ಧಿ ಮಂಕಾಗಿಬಿಟ್ಟಿದೆ, ಏಕೆಂದರೆ ವಿಧಾಯಕ ಕಾರ್ಯದಲ್ಲಿರುವ ನಮ್ಮ ವಿಶ್ವಾಸ ಬಹಳ ದುರ್ಬಲವಾಗಿದೆ. ಅಡಚಣಿಗಳಿಂದ ಎದೆಗುಂದದೆ ನಾವು ಮುನ್ನುಗುತ್ತ ಹೋಗಬೇಕೆಂದು ನನಗೆ ಗೊತ್ತು," ಎಂದು ಗಾಂಧಿಜೀ ಮುಗಿಸಿದರು.

ಜ್ಞಾನ-ವಿಜ್ಞಾನ ಪ್ರಪಂಚದ ಪ್ರದಕ್ಷಿಣೆ

ಬಾಗಿಲುಕೋಟೆ ಬಸವೇಶ್ವರ ಕಾಲೇಜದಲ್ಲಿ ಹತ್ತು ಪ್ರಸಾರೋಪನ್ಯಾಸಗಳು

ಕಳೆದ ವರುಷ ದೊರೆತ ಪ್ರೋತ್ಸಾಹ, ವಿಜಯಗಳಿಂದ ಹುರುಪುಗೊಂಡು ಈ ಸಲವೂ ಕಾಲೇಜದ ಚರ್ಚಾಕೂಟದ ಪರವಾಗಿ ವ್ಯಾಖ್ಯಾನ ಮಾಲೆಯೊಂದನ್ನು ಏರ್ಪಡಿಸಲಾಗಿತ್ತು. ಬಹು ತರವಾಗಿ ಕಾಲೇಜದ ಪ್ರಾಧ್ಯಾಪಕರೆಲ್ಲರೂ ಇದರಲ್ಲಿ ಭಾಗವಹಿಸಿರುವರು. ಕಳೆದ ವರುಷದಂತೆ ಈ ಸಲವೂ ಬಾಗಿಲಕೋಟೆಯ ನಾಗರಿಕರು ಈ ಭಾಷಣಗಳ ಕಡೆಗೆ ಹೆಚ್ಚು ಅಭಿರುಚಿಯನ್ನು ತೋರಿಸುತ್ತಿರುವರು.

ಅಶೋಕನ ಆದರ್ಶ

ಮಾಲೆಯು ಜಾನೇವರಿ ೨೦ ನೆಯ ತಾರೀಖು ರವಿವಾರ ದಿವಸ ಪ್ರಿ. ಡಾ. ಎಸ್. ಸಿ. ನಂದಿಮಠ ಎಮ್. ಎ., ಪಿ. ಎಚ್. ಡಿ. (ಲಂಡನ್) ಅವರಿಂದ ಪ್ರಾರಂಭವಾಯಿತು. ಅಂದು ಅವರು 'ಅಶೋಕ' ಎಂಬ ವಿಷಯವನ್ನಾಯ್ದುಕೊಂಡು ಒಳ್ಳೆ ವಿಚಾರಪರಿಪ್ಲುತವಾದ ಭಾಷಣ ಮಾಡಿದರು. ಮೌರ್ಯಸಾಮ್ರಾಟನ ಜೀವನ ಕಾಲಗಳನ್ನು ವಿಚಾರಿಸಿದರು. ತಂದೆ ಬಿಂದುಸಾರ, ಅಜ್ಜ ಮೌರ್ಯ ಚಂದ್ರಗುಪ್ತ ಮತ್ತು ಸುಪ್ರಸಿದ್ಧ ಗ್ರಂಥವಾದ ಅರ್ಥಶಾಸ್ತ್ರದ ಕರ್ತೃವಾದ ಕೌಟಿಲ್ಯ (ಚಾಣಕ್ಯ) ಇವರು ನೆಟ್ಟ ತಳಹದಿಯ ಮೇಲೆ ಅಶೋಕನು ತನ್ನ ರಾಜ್ಯಮಂದಿರವನ್ನು ಕಟ್ಟಿದನು. ಕಲಿಂಗ ದೇಶದೊಡನೆ ನಡೆದ ಯುದ್ಧದಲ್ಲಿ ವಿಜಯ ದೊರೆತರೂ ಅಲ್ಲಿ ಮಡಿದ ಗಾಯಗೊಂಡ, ಸೆರೆಸಿಕ್ಕ ಲಕ್ಷಾವಧಿ ಜನರನ್ನು ನೋಡಿ ಕನಿಕರಪಟ್ಟು ಯುದ್ಧವನ್ನೇ ತ್ಯಜಿಸಬೇಕೆಂದು ಸಂಕಲ್ಪಿಸಿದನು. ವಿಜಯ ದೊರೆತ ಮರುನಿಮಿಷದಲ್ಲಿಯೇ ಬೇರೆ ಯುದ್ಧಗಳ ಕಡೆಗೆ ಬೆನ್ನು ತಿರುವಿ ಶಾಂತಿಯ ಸಾಧನಗಳನ್ನು ಸಂಪಾದಿಸಿ, ಭಗವಾನ್ ಬುದ್ಧದೇವನ ದಯೆಯ ಉಪದೇಶದಿಂದ ಜನತೆಯ ಹೃದಯವನ್ನು ಜಯಿಸಬೇಕೆಂದು ನಿಶ್ಚಯಿಸಿದನು. ಹೀಗೆ ಜಾಗತಿಕ ಇತಿಹಾಸದಲ್ಲಿ ಅಶೋಕನ ಹೆಸರು ಏಕಮೇವಾದ್ವಿತೀಯವಾಗಿ ಮೆರೆಯುತ್ತಲಿದೆ. ಡಾಕ್ಟರ ನಂದಿಮಠರವರು ಅಶೋಕ ಕಾಲದ ಬ್ರಾಹ್ಮೀ ಲಿಪಿಯನ್ನು ಕೂಲಂಕಷವಾಗಿ ವಿಚಾರಿಸಿ, ಇಂದು ಭರತಖಂಡದಲ್ಲಿ ಕಾಣುವ ಅನೇಕ ಲಿಪಿಗಳಿಗೆ ಈ ಬ್ರಾಹ್ಮೀ ಲಿಪಿಯೆ ನಿಜವಾದ ಮಾತೆಯೆಂದು ವಿವರಿಸಿದರು. ಅಶೋಕನ ಆ ಶಾಸನಗಳಲ್ಲಿ ಕಂಡುಬರುವ ಉದಾತ್ತ ಹಾಗೂ ವಿಶಾಲವಾದ ಸಂದೇಶವನ್ನು ಸಭೆಗೆ ತಿಳಿಸಿದರು. ಪೌರಸ್ತ್ಯ, ಪಾಶ್ಚಾತ್ಯ ವಿದ್ವಾಂಸರೆಲ್ಲರೂ ಅಶೋಕನ ಹೆಚ್ಚುಗಳವನ್ನು ಮುಕ್ತಕಂಠದಿಂದ ಹೊಗಳಿರುವರು. ಎಚ್. ಜಿ. ವೆಲ್ಸರು ಅಶೋಕನು ಧ್ರುವನಕ್ಷತ್ರದಂತೆ ಮಿನುಗುವ ಸಾಮ್ರಾಟನೆಂದಿರುವರು. ಇಂದು ವಿಜಯಶಾಲಿಗಳಾಗಿರುವವರು ಅಶೋಕನ ಹಾದಿಯನ್ನು ತುಳಿದರೆ ಜಗತ್ತು ನಿಜವಾಗಿಯೂ ಆನಂದದ ಆಗರವಾಗಿ ಜನತೆಯು ಶಾಂತಿಯ ತತ್ತ್ವವನ್ನರಿಯುವುದು, ದಯೆಯು ಮತ್ತೆ ಜಗತ್ತನ್ನಾಳುವುದು ಎಂದು ಹೇಳಿ ಡಾಕ್ಟರರು ತಮ್ಮ ಭಾಷಣವನ್ನು ಮುಗಿಸಿದರು.

ಆಯುರ್ವೇದ ಮತ್ತು ಎಲೋಪಥಿ

ಸೋಮವಾರ ೨೧ ನೆಯ ತಾರೀಖಿನ ದಿವಸ ಪ್ರೊ. ಬಿ. ಎಚ್. ಯಲಬುರ್ಗಿ ಎಮ್. ಎಸ್‌ಸಿ. ಅವರು 'ಆಯುರ್ವೇದ ಹಾಗೂ ಎಲೋಪಥಿ' ಎಂಬ ವಿಷಯದ ಮೇಲೆ ಮಾತನಾಡಿದರು. ಮೊದಲು ರೋಗಗಳನ್ನು ಎರಡು ಭಾಗಗಳಾಗಿ ವಿಭಾಗಿಸಿ, ಎಲೋಪಥಿಯ ಚಿಕಿತ್ಸೆಯು ಕೇವಲ ತಾತ್ಕಾಲಿಕ ಗುಣಕೊಡುವುದೆಂದೂ ಆಯುರ್ವೇದವಾದರೊ ರೋಗದ ಬೇರನ್ನೇ ಕಿತ್ತು ಮನಸ್ಸು ಹಾಗೂ ದೇಹ ಇವುಗಳಿಗೆ ಹೆಚ್ಚಿನ ನೆಮ್ಮದಿಯನ್ನೀಯುವುದೆಂದೂ ಉಸುರಿದರು. ಆಯುರ್ವೇದದ ಔಷಧಗಳು ಒಂದೆ ಒಂದು (Compound) ಕಂಪೌಂಡಿನಿಂದೊಡಗೂಡಿರುವುದರಿಂದ ದೇಹದಲ್ಲಿ ಅವು ಬಹುಕಾಲ ಉಳಿಯುವವೆಂದೂ ಅದಕ್ಕೆ ಪ್ರತಿರೂಪವಾಗಿದ್ದ ಎಲೋಪಥಿಯ ಔಷಧಗಳು ಸ್ವಲ್ಪಕಾಲ ಮಾತ್ರ ದೇಹದಲ್ಲಿ ಉಳಿದು ಮುಂದೆ ಹೊರಬೀಳುವವೆಂದೂ ಅವರು ಅಭಿಪ್ರಾಯಪಟ್ಟರು. ಭಾಷಣವು ಒಳ್ಳೇ ಮಹತ್ವದ್ದಾದುದರಿಂದ ಊರೊಳಗಿನ ಡಾಕ್ಟರರೆಲ್ಲರೂ ಅಂದು ಸಭೆಗೆ ಆಗಮಿಸಿ ಹೆಚ್ಚಿನ ಆಸಕ್ತಿ ಅಭಿರುಚಿಗಳನ್ನು ತೋರಿದರು.

ಏಕೀಕರಣವಿಲ್ಲದೆ ಮುನ್ನಡೆಯಿಲ್ಲ

ಮರುದಿನ ಅಂದರೆ ಜಾನೇವರಿ ೨೨ ನೆಯ ತಾರೀಖಿನ ಸೋಮವಾರ ಪ್ರೊ. ಆರ್. ಸಿ. ಹಿರೇಮಠ ಎಮ್. ಎ. ಅವರು 'ಕನ್ನಡ ಸಂಸ್ಕೃತಿ'ಯ ಬಗೆಗೆ ಮಾತನಾಡಿದರು. ಸಂಸ್ಕೃತಿಯೆಂದರೇನೆಂಬುದನ್ನು ವಿವೇಚಿಸಿ ಕರ್ನಾಟಕದ ಗತವೈಭವವನ್ನು ವಿವರಿಸಿದರು. ಸೂಕ್ತವಾಗಿ ಉದಾಹರಿಸುತ್ತ ಪ್ರಾಚೀನ ಕರ್ನಾಟಕದ ವಿಸ್ತಾರವನ್ನು ವಿಸ್ತರಿಸಿದರು. ರಾಜಕೀಯ ದೃಷ್ಟಿಯಿಂದ ಕನ್ನಡಿಗರು ಭರತಖಂಡದ ಒಳಹೊರಗೆ ಪಡೆದ ಕೀರ್ತಿಯನ್ನು ವಿವರಿಸಿ ಅನೇಕ ಕಲೆಗಳಲ್ಲಿ ಕನ್ನಡಿಗರ ಕೈ ಮೇಲಾದುದನ್ನು ತಿಳಿಸಿದರು. ಕನ್ನಡನಾಡು ಹಲವು ಧರ್ಮಗಳಿಗೆ ತವರುಮನೆಯಾಗಿ ಮತ್ತೆ ಕೆಲವು ಧರ್ಮಗಳಿಗೆ ಆಶ್ರಯವನ್ನಿತ್ತಿದೆ. ಸಾಹಿತ್ಯ, ಸಂಗೀತ, ಶಿಲ್ಪ ಮೊದಲಾದ ಕಲೆಗಳಲ್ಲಿ ಕನ್ನಡಿಗರ ವಿಶಾಲವಾದ ಮನಸ್ಸು ಒಡಮೂಡಿದ ಬಗೆಯನ್ನು ವಿವರಿಸಿ ಕರ್ನಾಟಕವು ಜಾಗತಿಕ ಸಂಸ್ಕೃತಿಗೆ ತನ್ನ ಕಾಣಿಕೆಯನ್ನು ಸಲ್ಲಿಸಿದೆ ಎಂದರು. ಹರಿದು ಹಂಚಿದ ಕರ್ನಾಟಕವು ಒಂದಾಗುವ ವರೆಗೆ ಕನ್ನಡವು ಮುಂದಾಗದು ಎಂದು ಉಸುರಿ ಮಾತು ಮುಗಿಸಿದರು.

ಶೂನ್ಯ

೨೩ ನೆಯ ತಾರೀಖಿನ ದಿವಸ ಪ್ರೊ. ಆಯ್. ಭಾವನಾಚಾರ್ಯಲು ಎಮ್. ಎಸ್‌ಸಿ. ಇವರು 'ಶೂನ್ಯ' ಎಂಬ ವಿಷಯದ ಮೇಲೆ ಮಾತನಾಡುತ್ತ ಇಂದಿನ ವಿಜ್ಞಾನದ ಅನೇಕ ಸಂಶೋಧನಗಳನ್ನು ಶೂನ್ಯ ೦ ಈ ಚಿತ್ರದಿಂದ ಚಿತ್ರಿಸಬಹುದೆಂದು ಹೇಳಿದರು. ಸತ್ಯಸಂಗತಿಗಳು ಅನೇಕ ಸಲ ಮಾಯವಾಗಿ ಮತ್ತೆ ಬೆಳಕಿಗೆ ಬರುತ್ತವೆ. ಕತ್ತಲೆ ಬೆಳಕುಗಳು ಒಂದನ್ನೊಂದು ಹಿಂಬಾಲಿಸುತ್ತಿವೆ ಇಂದಿನ ಅನೇಕ ಸಂಶೋಧನಗಳನ್ನು ಭಾರತೀಯರು ಅರಿತಿದ್ದರು. ಆದರೆ ಅವೆಲ್ಲ ಕಥೆ, ಪುರಾಣಗಳ ರೂಪದಲ್ಲಿ ಮಾತ್ರ ಹೊರಗೆ ಬಂದು ಜನಸಾಮಾನ್ಯರಿಗೆ ಸಂತೋಷವನ್ನೀಯುತ್ತಿದ್ದವು. ಇಂದಿನ ಸಂಶೋಧಕರು ಹೊಸ ಶೋಧಗಳನ್ನು ಹುಡುಕುವ ಪ್ರಯತ್ನದಲ್ಲಿ ಹಿಂದಿನ ಋಷಿಗಳು ಅಂತರ್ಜ್ಞಾನದಿಂದ ಕಂಡುಹಿಡಿದ ಸತ್ಯಸಂಗತಿಗಳ ಕಡೆಗೆ ಹೋಗಬೇಕಾಗುತ್ತದೆ. ಭಾಷಣಕಾರರು ಜ್ಯೋತಿಷ್ಯ ಮೊದಲಾದ ಅನೇಕ ಶಾಸ್ತ್ರಗಳ ಉದಾಹರಣೆಗಳನ್ನು ಉದಾಹರಿಸಿದರು.

ವೇದದ ಕಾಲ

ಮರುದಿನ ಅಂದರೆ ಜಾನೇವರಿ ೨೪ ನೆಯ ತಾರೀಖಿನ ದಿವಸ ಪ್ರೊ. ಗರ್ಗೆ ಎಮ್. ಎ. ಅವರು 'ಹಿಂದುಸ್ತಾನದಲ್ಲಿ ಸಂಸ್ಕೃತ ಅಭ್ಯಾಸ' ಎಂಬ ವಿಷಯದ ಮೇಲೆ ಮಾತನಾಡಿದರು. ಒಡೆಯಲಾಗದ ಕೆಲವು ಸಮಸ್ಯೆಗಳನ್ನು ಹೊಸ ಸಂಶೋಧಕರ ದೃಷ್ಟಿಯಿಂದ ಚರ್ಚಿಸಿದರು. ವೇದದ ಕಾಲವು ಸುಮಾರು ೬೦೦೦ ವರ್ಷ ಪೂರ್ವವಾದುದೆಂಬ ಲೋಕಮಾನ್ಯ ಟಿಳಕರ ಅಭಿಪ್ರಾಯಕ್ಕೆ ತಮ್ಮ ಒಪ್ಪಿಗೆಯನ್ನಿತ್ತರು. ಹೀಗೆ ಮಾಡುವಲ್ಲಿ ದೀಕ್ಷಿತ, ಟಿಳಕ, ಜಾಕೋಬಿ ಮೊದಲಾದವರು ಕಂಡುಹಿಡಿದ ಜ್ಯೋತಿಷ್ಯದ ಸಿದ್ಧಾಂತಗಳನ್ನು ಉದಾಹರಿಸಿದರು. ಐದಾರು ಸಾವಿರ ವರುಷಗಳ ಹಿಂದಿನ ಜನಾಂಗದ ರಾಜಕೀಯ ಹಾಗೂ ಸಾಮಾಜಿಕ ಜೀವನದ ಮೇಲೆ ವೇದಗಳು ಬೆಳಕನ್ನು ಚೆಲ್ಲುವುದಲ್ಲದೆ, ಭರತಖಂಡಕ್ಕೂ ಪರ್ಸಿಯಾ ಗ್ರೀಸ ಮೊದಲಾದ ಹೊರಗಣ ದೇಶಗಳಿಗೂ ಇದ್ದ ಫಲಪ್ರದವಾದ ಸಂಬಂಧವನ್ನು ಸೂಚಿಸುತ್ತವೆ ಎಂದು ಹೇಳಿದರು. ಭಾರತೀಯರು ಸಂಸ್ಕೃತ ಅಭ್ಯಾಸವನ್ನು ಮರೆಯಲಾಗದು ಎಂದು ನುಡಿದು ತಮ್ಮ ಭಾಷಣ ಮುಗಿಸಿದರು.

ಜಾನೇವರಿ ೨೫ ನೆಯ ತಾರೀಖಿನ ದಿವಸ ಪ್ರೊ. ಎಸ್. ಎಲ್. ನಾರಾಯಣ ಎಮ್. ಎಸ್‌ಸಿ. ಅವರು ಭಾಷಣ ಮಾಲೆಯ ಪೂರ್ವಾರ್ಧದ ಕೊನೆಯ ಭಾಷಣ ಮಾಡಿದರು. ಅವರು 'ಸ್ಮಟ್ಸ ಮತ್ತು ರಸ್ಟ್ಸ' ಎಂಬ ವಿಷಯವನ್ನು ತೆಗೆದುಕೊಂಡು ಅವು ಸಸ್ಯಾದಿಗಳಿಗೆ ತಗಲುವ ಒಂದು ಬಗೆಯ ರೋಗಗಳೆಂದು ತಿಳಿಸಿದರು. ಈ ರೋಗಗಳ ಮೂಲ ಕಾರಣವನ್ನೂ ಅವುಗಳಿಂದಾದ ಸಸ್ಯಾದಿಗಳ ಹಾನಿಯನ್ನೂ ವಿವರಿಸಿದರು. ಇವುಗಳ ನಿವಾರಣೆಯ ದೃಷ್ಟಿಯಿಂದ ಮಾಡಬೇಕಾದುದೇ ಬಹಳ; ಮಾಡಿದುದು ತೀರ ಸ್ವಲ್ಪ. ಹಿಮಾಲಯದಲ್ಲಿ ಸಸ್ಯಾದಿಗಳನ್ನು ಬೆಳೆಯುವುದನ್ನು ಮೂರುನಾಲ್ಕು ವರ್ಷಗಳ ವರೆಗೆ ನಿಲ್ಲಿಸಿದರೆ ಈ ರೋಗಗಳ ಪ್ರತಿಬಂಧವಾಗುವುದೆಂದು ನುಡಿದರು. ರಾಜಕೀಯ ಸೂತ್ರ ನಮ್ಮ ಕೈಯಲ್ಲಿ ಬಂದ ಮೇಲಾದರೂ ಈ ಉಪಾಯವನ್ನು ಕೈಕೊಳ್ಳಬೇಕೆಂದು ಆಶಿಸಿದರು.

ಈ ಭಾಷಣ ಮಾಲೆಯ ಉತ್ತರಾರ್ಧದಲ್ಲಿಯೂ ಐವರು ಪ್ರಾಧ್ಯಾಪಕರು ವಿವಿಧ ವಿಷಯಗಳ ಮೇಲೆ ಮಾತನಾಡಿದರು.

ಸಂಸ್ಕೃತದಲ್ಲಿ ಗದ್ಯ

ಪ್ರಸಾರೋಪನ್ಯಾಸಗಳ ಎರಡನೆಯ ಭಾಗವು ಜನವರಿ ೨೭ ನೆಯ ರವಿವಾರ ಪ್ರೊ॥ ಕೆ. ಕೃಷ್ಣಮೂರ್ತಿ, ಎಂ. ಎ., ಬಿ. ಟಿ. ಯವರ 'ಸಂಸ್ಕೃತ ಗದ್ಯ ಕಾವ್ಯಗಳು' ಎಂಬ ಭಾಷಣದಿಂದ ಪ್ರಾರಂಭವಾಯಿತು. ಸಂಸ್ಕೃತದಲ್ಲಿ ಗದ್ಯದ ಪ್ರಯೋಗವು ಹಲವು ವಿಧವಾಗಿ ವೇದ, ವೇದಾಂಗ, ಶಾಸ್ತ್ರ, ಪುರಾಣ, ಇತಿಹಾಸ ಮತ್ತು ಅವುಗಳ ವ್ಯಾಖ್ಯಾನಗಳಲ್ಲಿ ನಿದರ್ಶನಕ್ಕೆ ಬಂದಿರುವುದನ್ನು ಸೂಚಿಸಿ ಸಾಹಿತ್ಯದಲ್ಲಿ ಗದ್ಯವು ತನ್ನದೇ ಆದ ಒಂದು ಸ್ಥಾನವನ್ನು ಹೇಗೆ ಸಂಪಾದಿಸಿತೆಂಬುದನ್ನು ಸಕಾರಣವಾಗಿ ಭಾಷಣಕಾರರು ನಿರೂಪಿಸಿದರು. ಅನಂತರ ಸಂಸ್ಕೃತ ಗದ್ಯ ಸಾಹಿತ್ಯದಲ್ಲಿ ಹೆಚ್ಚು ಪ್ರಖ್ಯಾತಿಯನ್ನು ಪಡೆದ ದಂಡಿಯ 'ದಶಕುಮಾರ ಚರಿತೆ' ಸುಬಂಧುವಿನ 'ವಾಸವದತ್ತೆ' ಮತ್ತು ಬಾಣನ 'ಕಾದಂಬರಿ' ಹಾಗು ಹರ್ಷ ಚರಿತೆಗಳ ವಿಷಯವಾಗಿ ಕವಿ, ಕಾಲ, ಕಥೆ ಪಾತ್ರನಿರೂಪಣೆ, ಶೈಲಿ, ಮೊದಲಾದುವನ್ನು ಕುರಿತು ಸುದೀರ್ಘವಾಗಿ ವಿಮರ್ಶೆಮಾಡಿ ಉಪಯುಕ್ತವಾದ ಉದಾಹರಣೆಗಳಿಂದ ತಮ್ಮ ಅಭಿಪ್ರಾಯಗಳನ್ನು ಸಮರ್ಥಿಸಿದರು. ಸಂಸ್ಕೃತ ಗದ್ಯದ ಅಭ್ಯಾಸವು ಬಹಳ ಕ್ಲೇಶಜನಕವೂ ವ್ಯರ್ಥವೂ ಆದುದೆಂಬ ಕೆಲವರ ಆರೋಪಗಳನ್ನು ಯುಕ್ತರೀತಿಯಲ್ಲಿ ಖಂಡಿಸಿ ಸಂಸ್ಕೃತ ಗದ್ಯ ಸಾಹಿತ್ಯದ ಅನ್ಯಾದೃಶವಾದ ಭವ್ಯತೆಯನ್ನೂ ಅದರ ಅಭ್ಯಾಸದಿಂದಾಗುವ ಲಾಭಗಳನ್ನೂ ಹೃದಯಂಗಮವಾಗಿ ವಿವರಿಸಿದರು.

ಸಂತಾನ ಶಾಸ್ತ್ರ

೨೮ ನೆಯ ತಾರೀಖು ಪ್ರೊ॥ ಎಸ್. ವ್ಹಿ. ಕೃಷ್ಣಮೂರ್ತಿ, ಬಿ. ಎಸ್‌ಸಿ. (ಆನರ್ಸ್) ಆವರು 'ಜೀನಿಕ್ ವಂಡರ್‌ಲ್ಯಾಂಡ್' ಎಂಬ ವಿಷಯವನ್ನು ಕುರಿತು ಮಾತನಾಡುತ್ತಾ ಅನೇಕ ಚಿತ್ರಪಟಗಳ ಮತ್ತು ನಕ್ಷೆಗಳ ಸಹಾಯದಿಂದ ಅನುವಂಶೀಯತೆಯ ಸೂಕ್ಷ್ಮ ಪರಿಚಯವನ್ನು ಸಭಿಕರಿಗೆ ಮಾಡಿಕೊಟ್ಟರು. ಮೆಂಡೆಲನ ನಿಯಮವೇ ಮೊದಲಾದ ತತ್ವಗಳನ್ನು ಸಂಗ್ರಹಿಸಿದರು. ಯೂಜೆನಿಕ್ಸ್ ಅಥವಾ ಉತ್ತಮ ಸಂತಾನ ಶಾಸ್ತ್ರವು ಭವಿಷ್ಯ ಮಾನವ ಜನಾಂಗದ ಉದ್ಧಾರಕ್ಕಾಗಿಯೇ ಇರುವುದೆಂದೂ ಅಂತೆಯೇ ವರ್ತಮಾನದಲ್ಲಿ ಮಾತ್ರ ಮಾನವನ ಪುರೋಭಿವೃದ್ಧಿಯನ್ನು ಬಯಸುವ ಯೂಥೆನಿಕ್ಸ್ ಶಾಸ್ತ್ರಕ್ಕಿಂತ ಇದು ಶ್ರೇಷ್ಠವಾದುದೆಂದೂ ಅಭಿಪ್ರಾಯಪಟ್ಟರು.

ಯೋಗಾಭ್ಯಾಸವೇ ಮದ್ದು

ಮುಂದೆ ೨೯ ನೆಯ ತಾರೀಖಿನ ದಿವಸ 'ವ್ಯಕ್ತಿತ್ವದ ಪುನರ್ಘಟನೆ' ಎಂಬ ವಿಷಯದ ಮೇಲೆ ಪ್ರೊ. ವ್ಹಿ. ಎಮ್. ಕುಲಕರ್ಣಿ, ಎಂ. ಎ. ಯವರ ಭಾಷಣವಾಯಿತು. ಆಟಂ ಬಾಂಬ್ ಮುಂತಾದ ಭೀಕರ ಸಂಶೋಧಗಳ ಪರಿಣಾಮವಾಗಿ ನಾಗರಿಕತೆಯ ಅಸ್ತಿತ್ವಕ್ಕೇ ಸಂಚಕಾರ ಬಂದಿರುವುದನ್ನು ತೋರಿಸಿ, ಮಾನವ ಕುಲೋದ್ಧಾರಕ್ಕೆ ಇರುವ ಒಂದೇ ಮಾರ್ಗವೆಂದರೆ ವ್ಯಕ್ತಿತ್ವದ ಪುನರ್ಘಟನೆಯೆಂದರು. ಚಿತ್ತಶುದ್ಧಿಯು ಅತ್ಯಗತ್ಯವೆಂದೂ ಅದಕ್ಕೆ ನಮ್ಮಲ್ಲಿ ಮೊದಲಿನಿಂದಲೂ ಪ್ರಚಾರದಲ್ಲಿರುವ ಯೋಗಾಭ್ಯಾಸವೇ ಸಾಧನವೆಂದೂ ನಿರೂಪಿಸಿದರು. ಯೋಗದ [illegible] ಗಳನ್ನೂ, ಪ್ರಾಣಾಯಾಮ, ಧ್ಯಾನ, ಧಾರಣೆಗಳ ಮಹಿಮೆಯನ್ನೂ ತಿಳಿಸಿದರು. ಬಾಹ್ಯ ವಿಪ್ಲವಗಳ ಸೆಳೆತದಲ್ಲಿ ಸಿಕ್ಕಿ ಸೊರಗಿದ ಪಾಶ್ಚಾತ್ಯರಿಗೆ ನಾವು ಕರುಣಿಸಬೇಕಾದುದು ಈ ಯೋಗ ಸಂದೇಶವೊಂದೇ ಎಂದು ಹೇಳಿ ಮುಗಿಸಿದರು.

ಪ್ರಜಾಪ್ರಭುತ್ವದ ಹಿಂದುಮುಂದು

೩೦ ನೆಯ ತಾರೀಖು ಬುಧವಾರ ಪ್ರೊ. ಡಾ. ಕೆ. ಆರ್. ಶ್ರೀನಿವಾಸ ಅಯ್ಯಂಗಾರ, ಎಂ. ಎ. ಡಿ. ಲಿಟ್., ಅವರು "ಪ್ರಜಾಪ್ರಭುತ್ವ-ನಿನ್ನೆ,

—೧೬ ನೇ ಪುಟ ನೋಡಿರಿ

ಕಾವ್ಯ ತರಂಗಿಣಿ

ಬಾಪೂಜಿ ದರ್ಶನ

ಹತ್ತು ಸಾಸಿರ ಮಂದಿ ದರ್ಶನೋತ್ಕಂಠರಿರೆ
ಕಣ್‌ತಣಿಸೆ, ಮನತಣಿಸೆ, ಎದೆಯ ತಣಿಸೆ,
ಮೆಲುನಡೆಯ ಪದಭಂಗಿಯಿಂದ ಬಂದೆಯಲ!
ಮೆಲುನುಡಿಯ ರಸದುಣಿಸ ಜನಕೆ ಇತ್ತೆಯಲ!
ಎಂದಿನಿಂದಲೊ ನಿನ್ನ ಕಾಣ್ಕೆವಡೆಯುವ ಬಯಕೆ
ಮನದಂತರದಿ ನೆಲಸಿ ಹರಡಿರ್ದುದು,
ಸಾಧಿಸುವ ದಿನವಿನಿತು ದೂರವಿದ್ದರು ಕೂಡ
ರಸನಿಮಿಷ ದೊರೆತುದೇ ಸಾಲದೇನು?
ವೇದಿಕೆಯನೇರಿದನೆ! ಸಮದೃಷ್ಟಿ ಬೀರಿದನೆ!
ಬೆರಳೊಂದು ಮೇಲೇರೆ ಜನವೆಲ್ಲ ಸ್ತಬ್ಧ-
ಎಂಥ ಮೌನತೆಯಾಗ ಸಭೆಯನಾವರಿಸಿತ್ತು!
ಹತ್ತು ಸಾಸಿರ ಜನದ ಶುದ್ಧ ಮೌನ!
ರಾಷ್ಟ್ರಭಾಷೆಯ ಮೇಲೆ ರಾಷ್ಟ್ರಪುರುಷನ ದನಿಯು
ವಾಣಿವೀಣೆಯ ನುಡಿಸಿದಂತೆ ಸುಮಧುರವು
ಮನದಣಿಯೆ ಮಾತುಗಳ ಸವಿಯನ್ನೆ ಉಂಡು
ಭಾವಲಹರಿಗಳನ್ನು ಮನದೊಳಗೆ ಕೊಂಡು
'ಜೈ ಬಾಪು' ಎಂದಂದು ಹೊರಟೆ ನಾ ಮನೆಗೆ;
ಧನ್ಯತೆಯು ಯುಗಪುರುಷನನ್ನು ಕಂಡೆನಗೆ.

—ಕು. ಶಿ. ಹರಿದಾಸಭಟ್ಟ

* * *

ಕಿರುದಾರಿ

ಸಿರಿಯಾಡುತಿಹಳೆನ್ನ ಸೆರಗಿನಲ್ಲಿ
ಹಿರಿಸಂಖ್ಯೆ ಜನರೆನ್ನ ಬಸಿರಿನಲ್ಲಿ
ಸರಿಗಟ್ಟದಾ ಸರಸ ಸಾಹಿತ್ಯವಿಹುದು
ಧರೆಯ ವೀರರ ಮಿಗಿಪ ಸತ್ಪುತ್ರರಿಹರು

ಮೂಡು ತೆಂಕಣ ಪಡುವಲೊಳು ಕಡಲ ನೀರು
ಬಡಗು ಬಿಳಿಮಂಜು ಮುಗಿಲೋಳಿಯುಂದು
ನಾಡು ಚಿನ್ನದ ಗಣಿಯು ಬೀಡು ಅರಮನೆಯು
ಈಡು ಸರಿಯಿಲ್ಲೆನ್ನ ಕಾಳಿನಃ ತೆನೆಯು

ಉಂಡು ಆಳುತ ಮರೆತರೈಕ್ಯತನವಾ
ಕಂಡು ಬೀರಿದರಲ್ಲಿ ಜಾತಿಮತವಾ
ಹಿಂಡುಹಿಂಡಾಗಿ ಹುಟ್ಟಿದವು ಜಾತಿ
ಹಿಂಡಿದರು ತಮ್ಮವರ ಐಕ್ಯನೀತಿ

ಪರನಾಡ ಭಟರಿದನು ಅರಿತು ನುಗ್ಗಿದರು
ಮೆರೆದ ನಾಡನು ಆಳಿ ಬಗೆಗೆ ಹಿಗ್ಗಿದರು
ಬಂತು ಅವನತಿ ಕಾಲ ಭಾರತಕೆ ಇಂದು
ನಿಂತು ಬಡವರ ಗೋಣು ಮುರಿಯುತಿಹರಿಂದು

ಏಳಿ ಮಕ್ಕಳೆ ಎಲ್ಲರೊಂದಾಗಿ ಮುಂದೆ
ಸೀಳಿ ಪರರೊಡೆತನವ ತಳ್ಳಿ ಹಿಂದೆ
ಒಮ್ಮೆ ತೋರಿರಿ ಜಗದಿ ಹಿಂದ ಧ್ವಜವ
ಹಿಮ್ಮೆಡದೆ ತೆಗೆದೊಗೆದು ಜಾತಿಮತವಾ

ತಾಳಲಾರೆನು ನೋವ ಪರರ ಬಿಗಿತ
ಬಾಳಲಾರೆನು ತಡೆದು ಕಂಬನಿಯ ಸಿಡಿತ
ಹಿಂದು ಸೀಖರು ತುರುಕರೆಲ್ಲರೊಂದಾಗಿ
ಸಂಧಿ ಸಾಧಿಸಿ ತಳ್ಳಿರಾಂಗ್ಲರನು ತೂಗಿ

ಜಯಹಿಂದ ವಂದೇಮಾತರಮ್ ಮಂತ್ರ
ಜಯಭೇರಿ ಪಡುವಣರ ಹೊರಡಿಸುವ ತಂತ್ರ

--ಕೆ. ಎನ್. ರಾವ್, ಸಿರ್ಸಿ

ಸಂಪಾದಕೀಯ

ಟೀಕೆ-ಟಿಪ್ಪಣೆಗಳು

ಕಾಂಗ್ರೆಸ್ಸಿಗೇ ಮತಕೊಡಿರಿ

ಮುಂಬಯಿ ಶಾಸನ ಸಭೆಯ ಸಾರ್ವತ್ರಿಕ ಚುನಾವಣೆಗಳು ಸಮೀಪಿಸಿದವು. ಮಾರ್ಚ ೧೧ ಕ್ಕೆ ಸಾಮಾನ್ಯ ಮತದಾರ ಸಂಘಗಳಲ್ಲಿ ಹಾಗೂ ೨೫ ಕ್ಕೆ ಮುಸ್ಲಿಂ ಮತದಾರ ಸಂಘಗಳಲ್ಲಿ ಮತದಾನ ನಡೆಯುತ್ತದೆ. ಮೊನ್ನೆ ತಾ ೧೧ ಕ್ಕೆ ಹುರಿಯಾಳುಗಳು ನಾಮಪತ್ರ ಕೊಟ್ಟಿದ್ದಾರೆ. ಮುಂಬಯಿ ಕರ್ನಾಟಕದ ನಾಲ್ಕೂ ಜಿಲ್ಲೆಗಳಲ್ಲಿರುವ ಎಲ್ಲ ಸಾಮಾನ್ಯ ಮತದಾರ ಸ್ಥಳಗಳಿಗೂ ಕಾಂಗ್ರೆಸು ತನ್ನ ಹುರಿಯಾಳುಗಳನ್ನು ನಿಲ್ಲಿಸಿರುವದಲ್ಲದೆ, ಬೆಳಗಾವಿ ಮತ್ತು ಧಾರವಾಡ ಜಿಲ್ಲೆಗಳಲ್ಲಿ ಒಬ್ಬೊಬ್ಬ ಮುಸ್ಲಿಂ ಹಾಗೂ ವಿಜಾಪೂರ ಉತ್ತರ ಭಾಗದಲ್ಲಿ ಓರ್ವ ಹರಿಜನ ಹೀಗೆ ಮೂವರು ವಿಶಿಷ್ಟ ಹುರಿಯಾಳುಗಳನ್ನೂ ನಿಲ್ಲಿಸಿರುತ್ತವೆ. ಇವರೆಲ್ಲರನ್ನೂ ಆರಿಸಿ ತರುವದು ಸ್ವಾತಂತ್ರ್ಯಪ್ರಿಯರ ಆದ್ಯ ಕರ್ತವ್ಯವಾಗಿರುವದು. ಹುರಿಯಾಳುಗಳ ಆಯ್ಕೆ ವಿಷಯದಲ್ಲಿ ಮತಭೇದವಾಗಿರಬಹುದು; ನಿರಾಕೃತ ಹುರಿಯಾಳುಗಳು ನೊಂದುಕೊಂಡಿರಬಹುದು. ಆದರೆ ಕಾಂಗ್ರೆಸದಂಥ ವಿಶಾಲವಾದ ಪ್ರಜಾಸತ್ತಾತ್ಮಕ ಸಂಸ್ಥೆಗಳಲ್ಲಿ ಇಂಥ ಮತಭೇದಗಳು ಸಹಜವಾದವುಗಳು. ಒಮ್ಮೆ ನಿರ್ಣಯವಾದನಂತರ ಅದರಂತೆ ವರ್ತಿಸುವದು ಸಂಸ್ಥೆಯ ಶಿಸ್ತಿನ ಮತ್ತು ಶಕ್ತಿಯ ದೃಷ್ಟಿಯಿಂದ ಅವಶ್ಯವಿರುವದು. ಅದುದರಿಂದ ಕನ್ನಡಿಗರು ಈಗ ಮತಭೇದ ಮತ್ತು ವೈಯಕ್ತಿಕ ದ್ವೇಷಾಸೂಯೆಗಳನ್ನು ಮರೆತು ಕಾಂಗ್ರೆಸ ಹುರಿಯಾಳುಗಳನ್ನು ಪ್ರಚಂಡ ವಿಜಯದಿಂದ ಆರಿಸಿ ತರುವರೆಂದು ನಾವು ವಿಶ್ವಾಸಪೂರ್ವಕವಾಗಿ ಆಶಿಸುತ್ತೇವೆ.

೧೯೪೩ ರ ಪುನರಾವೃತ್ತಿ?

ದಿನಗಳು ಕಳೆದಂತೆ ಆಹಾರ ಪರಿಸ್ಥಿತಿ ಹೆಚ್ಚೆಚ್ಚು ಗಂಭೀರವಾಗುತ್ತಿರುವದು. ಕಳೆದ ವಾರ ನಾವು ಈ ವಿಷಯವನ್ನು ಪ್ರಸ್ತಾಪಿಸಿದ್ದೆವು. ಆದರೆ ಈ ೭-೮ ದಿನಗಳಲ್ಲಿ ಆಹಾರ ರಂಗವು ಅಲ್ಲೋಲಕಲ್ಲೋಲವಾಗಿ ಬಿಟ್ಟಿದೆ. ವ್ಹಾಯಿಸರಾಯ ಲಾರ್ಡ ವೇವೆಲ್ಲರು ಮೈಸೂರ ಮತ್ತು ಮದ್ರಾಸ ಪ್ರಾಂತದ ಬರಗಾಲ ಪ್ರದೇಶಗಳನ್ನು ಸಂಚರಿಸಿ ಬಂದನಂತರ ಒಳ್ಳೇ ಗಡಬಡಿಸುತ್ತಿರುವರು. ಮಹಾತ್ಮಾ ಗಾಂಧಿಯವರ ಕಡೆಗೆ ತಮ್ಮ ಆಪ್ತ ಕಾರ್ಯದರ್ಶಿಯನ್ನು ಓಡಿಸಿ ಸಹಕಾರ ಕೇಳಿದರು. ದಿಲ್ಲಿಯಲ್ಲಿ ಬ್ಯಾ. ಜಿನ್ನಾರನ್ನು ಕರೆಸಿಕೊಂಡು ವಿಚಾರವಿನಿಮಯ ಮಾಡಿದರು. ಲಂಡನಕ್ಕೆ ಹೋಗಲಿದ್ದ ಶಿಷ್ಟಮಂಡಲದವರು ಒಬ್ಬೊಬ್ಬರಾಗಿ ಹೊರಟಿದ್ದಾರೆ. ವಿಲಂಬನಾದರೆ ಘಾತವಾದೀತೆಂದು, ಬಂದವರು [illegible]ರದವರು ಬಿಡಲಿ ಎಂದು ಕೆಲವರು ಈಗ ಮುಂ[illegible] ಕಳಿಸಲ್ಪಟ್ಟಿರುವರು. ಶಿಷ್ಟ ಮಂಡಲದ ಮುಂದಾಳುಗಳಾಗಿ ನೇಮಕರಾದ ಆಹಾರ ಮಂತ್ರಿ ಸರ ಜ್ವಾಲಾ ಪ್ರಸಾದ ಶ್ರೀವತ್ಸವರು ಅನಾರೋಗ್ಯದ ಮೂಲಕ ಹಿಂದುಳಿದಿರುವರು. ವ್ಹಾಯಿಸರಾಯರು ತಮ್ಮ ತಂಪಾದ ಅರಮನೆಯಲ್ಲಿ ಕುಳಿತುಕೊಂಡು ಲಂಡನ ಮತ್ತು ವಾಶಿಂಗಟನಗಳ ಕಡೆಗೆ ಶೂನ್ಯ ದೃಷ್ಟಿಯಿಂದ ನೋಡುತಿದ್ದಾರೆ. ಸರಕಾರದ ಈ ಪ್ರಯತ್ನವು ಗಡ್ಡಕ್ಕೆ ಬೆಂಕಿ ಹತ್ತಿದಾಗ ಬಾವಿ ತೋಡಲು ಪ್ರಾರಂಭಿಸುವವರಂತಿದೆ. ಇಷ್ಟು ವರ್ಷ ಕುಂಭಕರ್ಣನಂತೆ ನಿದ್ರಿಸಿ ಈಗ ಹುಚ್ಚು ಹಿಡಿದವರಂತೆ ಓಡಾಡಿದರೆ ಬರುವದೇನು? ಹಿಂದುಸ್ತಾನದಲ್ಲಿ ಈಗ ೩೦ ಲಕ್ಷ ಟನ್ನ ಆಹಾರಕೊರತೆಯಾಗಬಹುದೆಂದು ಅಂದಾಜಿದೆ. ಹಿಂಗಾರಿ ಬೆಳೆ ಕೆಲವು ಕಡೆ ಬರದಿದ್ದರೆ ಕೊರತೆ ೪೦ ಲಕ್ಷಕ್ಕೆ ಏರಬಹುದು. ಇಂಥ ಪರಿಸ್ಥಿತಿ ಬರಬಹುದೆಂದು ಮೂರು ತಿಂಗಳ ಹಿಂದೆ ನಮ್ಮ ಮಂತ್ರಿಗಳ ಕನಸು ಮನಸಿನಲ್ಲಿ ಸಹ ಇದ್ದಿಲ್ಲ. ಸರ್ ಜ್ವಾಲಾ ಪ್ರಸಾದರು ೧೯೪೫ [illegible]ವಂಬರ ೧೧ಕ್ಕೆ ಮಾಡಿದ ಒಂದು ಭಾಷಣದಲ್ಲಿ [illegible]ಗ ಕೊಡುವಷ್ಟು ಸೀದಾವನ್ನು ತಪ್ಪದೇ ಕೊಡಲಾಗುವದೆಂದು ಜಂಭ ಕೊಚ್ಚಿಕೊಂಡಿದ್ದರು. ಆದರೆ ಈಗ? ಪರರಾಷ್ಟ್ರಗಳು ಕೊಡ ಮಾಡಿದ ನಿತ್ಯ ವೆಚ್ಚಕ್ಕೆ ೧೦ ಲಕ್ಷ ಟನ್ ಮತ್ತು ಆಪತ್[illegible]ಧಿಗೆ [illegible] ಲಕ್ಷ ಟನ್ ಆಹಾರವನ್ನು ಇವರಿಗೆ ದೊರಕಿಸುವದಾಗಿಲ್ಲ. ಸರ್ ಜ್ವಾಲಾ[illegible]ಾದರು ಎಲ್. ಎಸ್. ಅಮೇರಿಗೆ ಶಿಫಾರಸ[illegible]ತ್ರ ಕೊಡುವಾಗ ಈ ಪರಿಸ್ಥಿತಿಯನ್ನು ಗಮನಕ್ಕೆ ತಂದುಕೊಂಡಂತಿಲ್ಲ. ೧೯೪೩ ರಲ್ಲಿ ಅಧಿಕಾರಿಗಳ ಅದೂರ ದೃಷ್ಟಿ ಹಾಗೂ ಅಸಾಮರ್ಥ್ಯಗಳ ಮೂಲಕ ಬಂಗಾಲದಲ್ಲಿ ಬರಗಾಲವಾಯಿತು. ಈಗ ಅದರ ಪುನರಾವೃತ್ತಿಯಾಗುವ ಭಯವುಂಟಾಗಿದೆ. ಹಿಂದುಸ್ತಾನ ಸರಕಾರವು ಸಾವಿನೊಡನೆ ಸರಸವಾಡುತ್ತಿರುವಂತೆ ತೋರುತ್ತದೆ.

ಇನ್ನಾದರೂ ಕಣ್ದೆರೆಯಿರಿ

ಈಗಂತೂ ಪರಿಸ್ಥಿತಿ ಕೈಮೀರಿದೆ. ವ್ಹಾಯಿಸರಾಯರು ಈಗಲಾದರೂ ಕಣ್ದೆರೆಯುವರೆಂದು ನಾವು ಆಶಿಸುತ್ತೇವೆ. ಅವರು ಏನು ಮಾಡಬೇಕೆಂಬದು ಸ್ಪಷ್ಟವಿದೆ. ಮಹಾತ್ಮಾ ಗಾಂಧಿಯವರು ಅದನ್ನು ಪುನಃ ನಿಃಸಂದಿಗ್ಧವಾಗಿ ಹೇಳಿದ್ದಾರೆ. ರಾಷ್ಟ್ರವು ಜೀವಂತ ಉಳಿಯಬೇಕಾದರೆ ಮೊದಲು ಈಗಿನ ನಿರ್ಜೀವ, ನಿರ್ವೀರ್ಯ ಹಾಗೂ ನಿಷ್ಕ್ರಿಯ ಮಂತ್ರಿಗಳು ಹೊರಬೀಳಬೇಕು. ಅವರ ಸ್ಥಳದಲ್ಲಿ ಸಮರ್ಥವಾದ ಹಾಗೂ ಲೋಕಾಭಿಪ್ರಾಯಕ್ಕೆ ತಲೆಬಾಗಿ ವರ್ತಿಸುವ ಸರಕಾರವನ್ನು ಸ್ಥಾಪಿಸಬೇಕು. ಸರಕಾರವು ಅಸಮರ್ಥವಿರುವದರಿಂದ ಅಧಿಕಾರಿಗಳಲ್ಲಿ ಲಂಚಗುಳಿತನ ಮನೆ ಮಾಡಿದೆ. ಈ ಲಂಚಗುಳಿಗಳ ಸಹಾಯದಿಂದ ಕಳ್ಳಪೇಟೆ ದಿನದಿನಕ್ಕೆ ವೃದ್ಧಿಯಾಗುತ್ತಿದೆ. ಇವುಗಳನ್ನು ಬೇರು ಸಹಿತ ಕಿತ್ತಿ ಹಾಕುವದು ಅತ್ಯಂತ ಅವಶ್ಯವಿರುವದು. ರಾಷ್ಟ್ರೀಯ ಸರಕಾರದಿಂದ ಮಾತ್ರ ಇದು ಸಾಧ್ಯ. ಬರಗಾಲ ನಿವಾರಣೆಗೆ ಜನತೆಯ ಸಹಕಾರ ಅವಶ್ಯ-ಅತ್ಯಗತ್ಯವೆಂಬದನ್ನು ನಾವು ಹೇಳಬೇಕಾಗಿಲ್ಲ ಸ್ವತಃ ವ್ಹಾಯಿಸರಾಯರು ಅದನ್ನು ಒಪ್ಪಿರುವರು. ಆದರೆ ಜನತೆಯ ಸಹಕಾರ ಜನತಾ ಸರಕಾರಕ್ಕೆ ಮಾತ್ರ ದೊರೆಯುವದಲ್ಲದೆ, ಹೊಣೆಗೆಟ್ಟ ಮತ್ತು ತಾಳ ತಪ್ಪಿದ ಸರಕಾರಕ್ಕಲ್ಲ. ಲಾರ್ಡ ವೆವೆಲರು ಈ ಸಂಗತಿಗಳನ್ನು ಮನದಂದು ಧೃಢನಿರ್ಧಾರದಿಂದ ಮುಂದಿನ ಹೆಜ್ಜೆ ಇಡುವರೆಂದು ನಾವು ಹಾರೈಸುತ್ತೇವೆ.

ಇನ್ನೊಂದು ಮಾತು. ಮಂತ್ರಿಮಂಡಲ ಬದಲಾವಣೆಯಂತೆ ಇದ್ದ ಆಹಾರವನ್ನು ಜತನದಿಂದ ಕಾಪಾಡುವದು, ಹಂಚುವದು ಹಾಗೂ ಹೊಸ ಆಹಾರ ಬೆಳೆಯುವದು— ಈ ವಿಷಯಗಳು ಸಹ ಅಷ್ಟೇ ಮಹತ್ವದವಾಗಿರುತ್ತವೆ. ನಮ್ಮಲ್ಲಿ ಆಹಾರ ಹೆಚ್ಚಾಗಿದ್ದಾಗ ಅದು ಕೊಳೆತು ಹೋದರೂ ಅಧಿಕಾರಿಗಳು ಕಣ್ಣೆತ್ತಿ ನೋಡುವದಿಲ್ಲ. ಕಡಿಮೆಯಾಗುವ ಪ್ರಸಂಗ ಬಂದರೆ, ಸೀದಾ ಕತ್ತರಿಸುವದಕ್ಕೆ ಸಹ ಹಿಂದೆ ಮುಂದೆ ನೋಡುವದಿಲ್ಲ. ಸೀದಾ ಕತ್ತರಿಸುವದೆಂದರೆ ಉಪವಾಸ ಸಾಯುವದಕ್ಕೆ ಸರಕಾರದವರೇ ಅಪ್ಪಣೆ ಕೊಟ್ಟಂತಾಗುವದು. ನಿಜವಾಗಿ ನೋಡಿದರೆ ಅತ್ಯಂತ ಕಠಿಣ ಪರಿಸ್ಥಿತಿಯಲ್ಲಿಯೂ ಸೀದಾ ಕತ್ತರಿಸಬಾರದು. ಒಂದುವೇಳೆ ಅಂಥ ಪ್ರಸಂಗ ಬಂದರೆ, ಶ್ರಮದ ಕೆಲಸಗಾರರಿಗೆ ಕೊಡುತ್ತಿರುವ ಅಧಿಕ ಪ್ರಮಾಣವನ್ನು ಮೊದಲು ಕತ್ತರಿಸುವದು ಯೋಗ್ಯವೆಂದು ತೋರುತ್ತದೆ. ಟ್ರೇಡ ಯುನಿಯನುಗಳು ನಮ್ಮ ಸೂಚನೆಯನ್ನು ಪ್ರತಿಭಟಿಸಬಹುದು. ಆದರೆ ಹಾಗೆ ಪ್ರತಿಭಟಿಸುವ ಮೊದಲು ನೆರೆಮನೆಯಲ್ಲಿ ಪ್ರಾರಂಭವಾಗಬಹುದಾದ ನಿತ್ಯ ಏಕಾದಶಿಯನ್ನು ಅವರು ನೆನೆಯಬೇಕೆಂದು ನಾವು ಸೂಚಿಸದಿರಲಾರೆವು.

ಸಿಂಧ ಗವ್ಹರನರರ ಅಕ್ರಮ ಮಾರ್ಗ

ಅನೇಕ ತರ್ಕಗಳನ್ನು ಮೀರಿ ಸಿಂಧದಲ್ಲಿ ಲೀಗ ಮಂತ್ರಿ ಮಂಡಲವು ಸ್ಥಾಪಿತವಾಯಿತು. ಸಿಂಧ ಗವ್ಹರನರರಾದ ಸರ್ ಫ್ರಾನ್ಸಿಸ್ ಮುಡಿಯವರ ಬಹುಮತ ಪಕ್ಷದ ಧುರೀಣರಾದ ಶ್ರೀ. ಜಿ. ಎಂ. ಸೈಯ್ಯದರನ್ನು ಮಂತ್ರಿಮಂಡಲ ರಚಿಸುವದಕ್ಕೆ ಆಮಂತ್ರಿಸದೆ, ಅಲ್ಪ ಮತದ ಲೀಗ ಧುರೀಣರಾದ ಸರ್ ಗುಲಾಮ ಹುಸೇನ ಹಿದಾಯತುಲ್ಲಾರವರಿಗೆ ಒಪ್ಪಿಸಿದರು. ಶ್ರೀ. ಜಿ. ಎಂ. ಸೈಯ್ಯದರ ಸಮ್ಮಿಶ್ರ ಪಕ್ಷದಲ್ಲಿ ೩೯ ಮತ್ತು ಲೀಗದಲ್ಲಿ ೨೮ ಸದಸ್ಯರಿರುವರೆಂಬದು ಈಗ ನಿಃಸಂದೇಹವಾಗಿದೆ. ಸ್ವತಂತ್ರರಾದ ಶ್ರೀ. ನಾರಾಯಣದಾಸ ಬೇಚಾರರು ತ್ರಯಸ್ಥರೆಂದು ಗವ್ಹರನರರು ಲೆಕ್ಕ ಹಿಡಿದಿದ್ದರು. ಶ್ರೀ. ನಾರಾಯಣದಾಸರೇ ಹೇಳಿಕೆ ಕೊಟ್ಟು ಗವ್ಹರನರರ ತರ್ಕವನ್ನು ಖಂಡಿಸಿರುತ್ತಾರೆ. ಇಷ್ಟಾದರೂ ಗವ್ಹರನರರಿಗೆ ಲೀಗವನ್ನು ಪಟ್ಟಕ್ಕೆ ಕುಳ್ಳಿರಿಸಲು ಕ್ರಮಬದ್ಧ ಮಾರ್ಗ ಸಿಗದ್ದರಿಂದ ಕೊನೆಗೆ ಅಕ್ರಮ ಮತ್ತು ವಾಮ ಮಾರ್ಗವನ್ನು ಅನುಸರಿಸಿದರು. ಬಹುಮತದ ಬೆಂಬಲವಿದ್ದವರಿಗೇ ಅಧಿಕಾರ ಒಪ್ಪಿಸಬೇಕೆಂದು ಅರಸರ ನಿರ್ದೇಶ ಸ್ಪಷ್ಟವಿದ್ದರೂ ಅಧಿಕಾರ ಲೋಲುಪರಾದ ಸರ್ ಫ್ರಾನ್ಸಿಸರು ಅದನ್ನು ಕಾಲ್ಕಸ ಮಾಡಿದರು. ಬಹುಮತದವರಾಗಿ ಆರಿಸಿ ಬಂದವರನ್ನು ಬಿಟ್ಟು ಬಹುಮತದವರಾಗಿ ಚುನಾವಣೆಗೆ ನಿಂತು ಸೋತವರನ್ನು ಮಂತ್ರಿ ಪಟ್ಟಕ್ಕೆ ಕರೆತಂದರು. ಇದು ಪ್ರಜಾಸತ್ತೆಯ ಅಪಹಾಸ್ಯವಲ್ಲದೆ ಮತ್ತೇನು? ಸರ್ ಫ್ರಾನ್ಸಿಸರಂಥ ನಿರಂಕುಶಪ್ರಿಯ ಅಧಿಕಾರಿಗಳು ಈ ದೇಶದಲ್ಲಿ ತುಂಬಿದ್ದರಿಂದ ಪ್ರಜಾಸತ್ತೆಯ ಹೆಸರಿನಲ್ಲಿ ಅಧಿಕಾರಿಗಳ ಸತ್ತೆ ನಡೆಯುತ್ತಿದೆ. ಸಿಂಧ ಗವ್ಹರ್ನರರು ಇಲ್ಲಿಗೇ ಸುಮ್ಮನಾಗಿಲ್ಲ. ಈ ಅಸ್ಥಿರ ಮಂತ್ರಿಮಂಡಲವನ್ನು ಸ್ಥಿರಗೊಳಿಸಲು ವಾಮ ಮಾರ್ಗಕ್ಕೆ ಕೈ ಹಾಕಿರುವರು ಅಥವಾ ತಮ್ಮ ಮಂತ್ರಿಗಳನ್ನು ಆ ಮಾರ್ಗದಲ್ಲಿ ಪ್ರೋತ್ಸಾಹಿಸುತ್ತಿರುವರು. ತೆರವಿದ್ದ ಎರಡು ಸ್ಥಳಗಳಿಗೆ ಹಿಂದೂ ಮಂತ್ರಿಗಳಂತೂ ಸಿಕ್ಕಲಿಲ್ಲ. ಈಗ ಮುಸ್ಲಿಮರ ಬಹುಮತವನ್ನಾದರೂ ಮಾಡಿಕೊಳ[illegible]ಕೆಂದು ಲೀಗ ಪಕ್ಷದವರು ವಿಚಾರಿಸುತಿದ್ದಾರೆ. ಇದು ಸಹ ಅಶಕ್ಯಕೋಟಿಯದಾಗಿರುವದರಿಂದ ಸಮ್ಮಿಶ್ರ ಪಕ್ಷದಲ್ಲಿರುವ ೭ ಜನ ಮುಸಲ್ಮಾನ ಸದಸ್ಯರು ಲೀಗ ಸೇರುವಂತೆ ಒತ್ತಾಯಪಡಿಸುವದಕ್ಕೆ ಅವರ ಮನೆ ಮುಂದೆ ಪಿಕೆಟಿಂಗ ಪ್ರಾರಂಭಿಸುವರಂತೆ. ಅಲ್ಲದೆ ಹಿಂಸೆಯ ಬೆದರಿಕೆಯನ್ನೂ ಪ್ರಯೋಗಿಸುತ್ತಿರುವರು. ಬ್ರಿಟಿಶ್ ಆಡಳಿತೆಯ ಮಾದರಿ ಇದು. ಸಿಂಧದಲ್ಲಿ ಮುಸಲ್ಮಾನರು ಬಹುಸಂಖ್ಯಾಕರಿರುವದರಿಂದ ಅವರಿಗೇ ಅಧಿಕಾರ ಕೊಡುವದುಚಿತವೆಂದು ಕೆಲವು ಆಂಗ್ಲೋ ಇಂಡಿಯನ್ ಪತ್ರಿಕೆಗಳು ವಾದಿಸಿರುತ್ತವೆ. ಈ ತತ್ವವನ್ನು ಅವರು ಯಾವ ಗ್ರಂಥದಲ್ಲಿ ಶೋಧಿಸಿದರೋ ನಮಗೆ ತಿಳಿಯದು. ಲೋಕಪ್ರತಿನಿಧಿಗಳಿಗೆ ಅಧಿಕಾರ ಪ್ರಾಪ್ತವಾಗುವದಲ್ಲದೇ, ಜಾತಿಪ್ರತಿನಿಧಿಗಳಿಗಲ್ಲ. ಆಸಾಮದಲ್ಲಿ ಲೀಗ ಮಂತ್ರಿಮಂಡಲ ಸ್ಥಾಪಿತವಾದಾಗ ಈ ತತ್ವವೇತ್ತರು ಒಬ್ಬರೂ ಮುಂದೆ ಬರಲಿಲ್ಲ. ಸರ್ ಫ್ರಾನ್ಸಿಸರು ಈ ಅಕ್ರಮ ವರ್ತನೆಯಿಂದ ಗವ್ಹರ್ನರ ಪದವಿಯಂಥ ಹೊಣೆಗಾರ ಹುದ್ದೆಗೆ ಅನರ್ಹರಾಗಿರುವರೆಂದು ಹೇಳಿದರೆ ತಪ್ಪಾಗಲಾರದೆಂದು ನಮ್ಮ ಭಾವನೆ.

ಬಂದರು—ಹೋದರು

ಬ್ರಿಟಿಶ್ ಶಿಷ್ಟರು ಬಂದರು ಮತ್ತು ಹೋದರು. ಈ ದೇಶದ ಒಂದು ತಿಂಗಳ ಸಂಚಾರದಲ್ಲಿ ಅವರು ಅದೆಷ್ಟು ಜ್ಞಾನ ಸಂಪಾದಿಸಿರುವರೋ ನಾವು ಕಾಣೆವು. ಜ್ಞಾನ ಸಂಪಾದಿಸುವದಂತೂ ಇರಲಿ, ಕೆಲವು ಕಡೆ ಅಜ್ಞಾನ ಮತ್ತು ಅಸಭ್ಯತನವನ್ನು ವ್ಯಕ್ತಪಡಿಸಿದರೆಂದು ಕೇಳಿದ್ದೇವೆ. ಕಲಕತ್ತೆಯಲ್ಲಿ ಡಾ. ಬಿಧನಚಂದ್ರರಾಯರೊಡನೆ ನಡೆದ ಸಂದರ್ಶನವು ಈ ಶಿಷ್ಟರ ಅಸಭ್ಯತನದ ಪರಿಣಾಮವಾಗಿ ಜಗಳದಲ್ಲಿ ಪರಿಣಮಿಸಿತು. 'ಹಿಂದುಸ್ತಾನವನ್ನು ತಿಳಿದುಕೊಳ್ಳುವ ಆಸ್ಥೆ ಇವರಲ್ಲಿ ಇದ್ದಂತಿಲ್ಲ. ಕ್ರಿಪ್ಸರು ಇವರಿಗಿಂತ ಬೇಕು' ಎಂದು ಶ್ರೀ ಭರತನ್ ಕುಮಾರಪ್ಪನವರು ಈ ಮಹನೀಯರ ಬಗ್ಗೆ ಅಭಿಪ್ರಾಯಪಟ್ಟರು. ಇರಲಿ, ಹಿಂದುಸ್ತಾನದ ಒಳಗಿನ ಆಗುಹೋಗುಗಳು ಇವರಿಗೆ ತಿಳಿದಿರಲಿಕ್ಕಿಲ್ಲ. ಆದರೆ ಈ ದೇಶದಲ್ಲಿಯ ಸ್ವಾತಂತ್ರ್ಯದ ಕೂಗು ಮಾತ್ರ ಅವರ ಕರ್ಣ ರಂಧ್ರವನ್ನು ಪ್ರವೇಶಿಸಿರುವದು. "ಹಿಂದೀಯರು ಸ್ವಾತಂತ್ರ್ಯಕ್ಕೆ ಅರ್ಹರಾಗಿದ್ದಾರೆ. ಅದು ಅವರಿಗೆ ಬೇಗನೇ ದೊರೆಯಬೇಕು" ಹಲವು ಸದಸ್ಯರು ಇಲ್ಲಿಂದ ಹೊರಡುವ ಮೊದಲು ಅಭಿಪ್ರಾಯಪಟ್ಟರು. ಲಂಡನ ಮುಟ್ಟಿದ ಮೇಲೆ ಈ ಮಾತನ್ನು ಅವರು ಮರೆಯದಿದ್ದರೆ ಸಾಕು. ಈ ಶಿಷ್ಟರಲ್ಲಿ ಶ್ರೀ ಸೊರೆನಸೇನರು ಸ್ವಲ್ಪ ಜನಪ್ರಿಯರೆಂದು ಹೇಳಬಹುದು. ಅವರು ಅಲ್ಲಲ್ಲಿ ಹಳ್ಳಿಗಳಿಗೆ ಹೋಗಿ ಹಿಂದೀ ಜನಜೀವನದ ಪ್ರತ್ಯಕ್ಷ ಪರಿಚಯ ಮಾಡಿಕೊಳ್ಳಲು ಯತ್ನಿಸಿದರು. ಈ ದೇಶದಿಂದ ಹೋಗುವಾಗ ಅವರು ಪಾಕಿಸ್ತಾನದ ಬಗ್ಗೆ ವ್ಯಕ್ತಮಾಡಿದ ಅಭಿಪ್ರಾಯವು ಮನನೀಯವಾಗಿದೆ. ಧರ್ಮ ಬದಲಾವಣೆಯಿಂದ ಕೂಡಲೇ ಪ್ರತ್ಯೇಕ ರಾಷ್ಟ್ರದ ಹಕ್ಕು ಪ್ರಾಪ್ತವಾಗುವದೆಂಬವಾದವನ್ನು ಅವರು ತೀವ್ರವಾಗಿ ಖಂಡಿಸಿರುತ್ತಾರೆ. ಅಲ್ಲದೆ ವಿಚ್ಛೇದನೆಯಿಂದ ರಾಷ್ಟ್ರದ ಶಕ್ತಿಯೂ ಕುಗ್ಗುವದು. ಬ್ಯಾ. ಜಿನ್ನಾರಂತೆ ಮರುಳಾಗಿ ತುರ್ಕಸ್ತಾನ ಮತ್ತು ಅರಬಸ್ತಾನದಿಂದ ಸಿಡಿದುಹೋದ ಚಿಕ್ಕಪುಟ್ಟ ಮುಸ್ಲಿಂ ರಾಷ್ಟ್ರಗಳ ಹಣೆಬರಹ ಏನಾಗಿದೆಯೆಂಬದನ್ನು ಲೀಗದ ಬಂಧುಗಳು ಗಮನಿಸಬೇಕು. ಪಾಕಿಸ್ತಾನವು ಹುಚ್ಚರ ಯೋಜನೆಯೆಂದು ಸ್ವತಃ ಬ್ಯಾ. ಜಿನ್ನಾರು ಈ ಮೊದಲು ಹೇಳಿದ್ದರು. ಆದರೆ ಈಗ ಅದರ ಪ್ರತಿಪಾದಕರಿಗೆ ನಾವು ಏನೆಂದು ಕರೆಯಬೇಕು?

ಹುರುಳಿಲ್ಲದ ಕೊಡುಗೆ

ಅಂತೂ ೫ ತಿಂಗಳ ನಂತರ ಡಚ್‌ರು ಇಂಡೋನೇಶಿಯಕ್ಕೆ ಒಂದು ಕೊಡುಗೆಯನ್ನು ಕೊಡಮಾಡಿದ್ದಾರೆ. ಅದರ ವಿವರಗಳನ್ನು ಬೇರೆ ಕಡೆ ಪ್ರಸಿದ್ಧಿಸಿರುವೆವು. ಈ ಕೊಡುಗೆ ತ್ಯಾಜ್ಯವೆಂದು ಸಕೃದ್ದರ್ಶನಕ್ಕೇ ಹೇಳಬಹುದು. ಯಾಕಂದರೆ ಇಂಡೋನೇಶಿಯನರು ಕೇಳುವ ಸ್ವಾತಂತ್ರ್ಯವೂ ಅದರಲ್ಲಿಲ್ಲ ಅಥವಾ ಸಾಮ್ರಾಜ್ಯದ ಬಿಗುವೂ ಸಡಿಲಾಗಿಲ್ಲ. ಸಾಮ್ರಾಜ್ಯಕ್ಕೆ ಇನ್ನೊಂದು ಬಣ್ಣವನ್ನು ಕೊಟ್ಟು ಜನರು ಮರುಳಾಗುವಂತೆ ಆಕರ್ಷಕ ಮಾಡಿರುತ್ತಾರೆ ಇಂಡೋನೇಶಿಯನರಿಗೆ ಅವರು ಕೊಡಮಾಡಿದುದು— ಮಿತವಾದ ಸಾಮಂತ ಸ್ವರಾಜ್ಯ, ಅನಂತರ ನೀದರಲಂಡ್ಸ ರಾಜ್ಯದಲ್ಲಿ ಪಾಲುಗಾರಿಕೆ. ಹೀಗೆ ಕೆಲವು ವರ್ಷ ಏಕತ್ರ ಸಂಸಾರ ಮುಗಿದ ನಂತರ ಇಂಡೋನೇಶಿಯನರು ತಮಗೆ ಅವಶ್ಯವೆನಿಸಿದರೆ, ಮನಸಿಗೆ ಬಂದಂತೆ ತಮ್ಮ ರಾಜಕೀಯ ಭವಿತವ್ಯವನ್ನು ನಿರ್ಧರಿಸಿಕೊಳ್ಳಬಹುದು. ಭವಿತವ್ಯ ನಿರ್ಣಾಯಕ ಸ್ವಾತಂತ್ರ್ಯ ಕೊಟ್ಟವರು ವರಲ್ಲ ಎಂದು ಅನೇಕರು ವಾದಿಸಬಹುದು. ಆದರೆ ಆ ಒಟ್ಟು ಸಂಸಾರದ ಕರಾರು ಬಹಳ ವಿಘಾತಕವಿದೆ. ಆ ಅವಧಿಯಲ್ಲಿ ಪ್ರತಿಗಾಮಿ ಶಕ್ತಿಗಳನ್ನು ಪ್ರೋತ್ಸಾಹಿಸಿ ಸ್ವಾತಂತ್ರ್ಯಾಭಿಲಾಷೆಯನ್ನು ಹಿಂಡಿ ಹಿಪ್ಪಿ ಮಾಡುವ ಗತ್ತು ಸಾಮ್ರಾಜ್ಯವಾದಿಗಳಿಗೆ ಚಿರಪರಿಚಿತವಿರುವದು. ಇಂಡೋನೇಶಿಯವನ್ನು ಆಳುವ ಸಾಮರ್ಥ್ಯವನ್ನು ಕಳೆದುಕೊಂಡ ನೀದರಲಂಡ್ಸ ಸರಕಾರವು ಇನ್ನೂ ಸಾಮ್ರಾಜ್ಯ ಮೋಹ ಬಿಡದಿರುವದು. ಆಶ್ಚರ್ಯಕರವಾಗಿದೆ. ಇದು ಸ್ವಾತಂತ್ರ್ಯ ಯುಗವೆಂಬದನ್ನು ಅವರು ಮರೆತಿರುತ್ತಾರೆ. ಹಿಂದಕ್ಕೆ ಅನೇಕ ಸಾಮ್ರಾಜ್ಯಗಳು ಬೆಳೆದಿವೆ, ಅಳಿದಿವೆ. ಹೊಸ ಸಾಮ್ರಾಜ್ಯಗಳ ಅಳಿಗಾಲ ಇದೀಗ ಪ್ರಾರಂಭವಾಗಿರುವದು. ಅವು ತಲೆ ಕೆಳಗೆ ಮಾಡಿಕೊಂಡು ನಿಂತು ಭಗೀರಥ ಪ್ರಯತ್ನ ಮಾಡಿದರೂ ದಾಸ ರಾಷ್ಟ್ರಗಳು ಇನ್ನು ಕೆಲವು ವರ್ಷಗಳಲ್ಲಿ ಸ್ವತಂತ್ರವಾಗುವದು ನಿಶ್ಚಿತ. ಕಾಲಮಾನ ಪರಿಸ್ಥಿತಿಗನುಸರಿಸಿ ನೀದರಲಂಡ್ಸ ಸರಕಾರವು ವರ್ತಿಸಬೇಕಾಗಿತ್ತು ಇರಲಿ, ಈ ಕೊಡುಗೆ ಸಹ ಮನಃಪೂರ್ವಕರಾಗಿ ಕೊಡಲ್ಪಟ್ಟದೆಯೆಂದು ನಮಗನಿಸುವದಿಲ್ಲ. ಇಂಡೊನೇಶಿಯದ ಪ್ರಶ್ನೆ ಈಗ ಜಾಗತಿಕ ಭದ್ರತಾ ಮಂಡಲದಲ್ಲಿ ಚರ್ಚಿಸಲ್ಪಡುತ್ತಿರುವದರಿಂದ ಅವರ ಬಾಯಿಗೆ ಬೀಗ ಹಾಕಲು ಈ ಆಟವನ್ನು ಹೂಡಿರಬಹುದೆಂದೂ ತರ್ಕಿಸಬಹುದು. ಯಾಕಂದರೆ ಮೊನ್ನೆಯ ಚರ್ಚೆಯಲ್ಲಿ ಈ ವಿಷಯ ಹೊರಟಾಗ ಸಾಮ್ರಾಜ್ಯವಾದಿಗಳು ಈ ಕೊಡುಗೆಯನ್ನು ಮುಂದೆ ಮಾಡಿ ರಶಿಯನರು ಅಂತರರಾಷ್ಟ್ರೀಯ ವಿಚಾರಣೆ ಸಮಿತಿ ಕಳಿಸಬೇಕೆನ್ನುವ ಸೂಚನೆಯನ್ನು ಮೂಲೆಗೊತ್ತಿದರು. ಹೊಯ್ದಾಡುತ್ತಿರುವ ಡಚ್ ಸಾಮ್ರಾಜ್ಯವನ್ನು ಸ್ಥಿರಪಡಿಸಲು ಬ್ರಿಟಿಶರಿಗೆ ಇದೊಂದು ದೊಡ್ಡ ಅನುಕೂಲವಾಯಿತೆಂದೇ ಹೇಳಬಹುದು. ಸಾಮ್ರಾಜ್ಯವು ಸ್ಥಿರವಾದ ನಂತರ ಡಚ್‌ರು ಇಂಡೊನೇಶಿಯನರನ್ನು ಬೇಕಾದಹಾಗೆ ಬಗ್ಗುಬಡಿಯಬಹುದು. ಆದುದರಿಂದ ಇಂಡೋನೇಶಿಯನರು ಪೂರ್ಣ ವಿಚಾರ ಮಾಡಿ ಈ ಕೊಡುಗೆಯನ್ನು ನಿರಾಕರಿಸಿ ಸಾಮ್ರಾಜ್ಯವಾದಿಗಳಿಗೆ ಬುದ್ಧಿ ಕಲಿಸುವರೆಂದು ಆಶಿಸುತ್ತೇವೆ.

ಆಸಾಂದಲ್ಲಿ ಕಾಂಗ್ರೆಸ ಮಂತ್ರಿಮಂಡಲದ ಸ್ಥಾಪನೆ

ಸಿಂಧದಲ್ಲಿ ಲೀಗನ್ನು ಉರುಳಿಸಲು ಪ್ರಯತ್ನ— ಲೀಗ ಮುಂದಾಳುಗಳು ಹಿಂಸಾಚಾರದ ಬೆದರಿಕೆ ಹಾಕಿದ್ದಾರೆ! —

ಆಹಾರ ಪರಿಸ್ಥಿತಿಯ ಬಗ್ಗೆ ಮಹಾತ್ಮರಿಗೆ ವಾಯಿಸರಾಯರ "ತ್ರಾಹಿ ತ್ರಾಹಿ!"

ಹಿಂದುಸ್ತಾನದ ಆಹಾರ ಪರಿಸ್ಥಿತಿಯ ಸಂಬಂಧದಲ್ಲಿ ಪಂ. ಜವಾಹರಲಾಲ ನೆಹರೂರವರು ಬ್ರಿಟಿಶ ಸರಕಾರಕ್ಕೆ ಎಚ್ಚರಿಕೆ ಕೊಟ್ಟಿರುವರು. ದೇಶದಲ್ಲಿ ಇನ್ನೊಮ್ಮೆ ಬರಗಾಲ ತಲೆದೋರಿದರೆ ಕ್ರಾಂತಿ ಉಂಟಾಗುವದೆಂದೂ ತಾವು ಬಂಡೆಬ್ಬಿಸಲು ಜನರನ್ನು ಹುರಿದುಂಬಿಸುವದಾಗಿಯೂ ಪಂ. ನೆಹರುಗಳು ಯುಕ್ತ ಪ್ರಾಂತದಲ್ಲಿ ಬಾಹರಾಯಿಚ ಎಂಬ ಹಳ್ಳಿಯಲ್ಲಿ ಭಾಷಣ ಮಾಡುತ್ತ ಹೇಳಿದರು. ೧೯೪೩ ರ ಬರಗಾಲದಲ್ಲಿಯಂತೆ ಈ ಸಲ ಜನರು ಹುಳಗಳಂತೆ ಪಟ ಪಟ ಜೀವ ಬಿಡುವದಿಲ್ಲೆಂದೂ ಬರಗಾಲವನ್ನು ಅವರು ಸಹಿಸುವದಿಲ್ಲೆಂದೂ ಸ್ಪಷ್ಟವಾಗಿ ನುಡಿದಿರುವರು.

ಅನ್ನಭಿಕ್ಷೆಗಾಗಿ ಪರದೇಶಗಳಿಗೆ ಹಿಂದುಸ್ತಾನದಿಂದ ಶಿಷ್ಟಮಂಡಳವೊಂದನ್ನು ಕಳಿಸಬೇಕೆಂದು ಕೇಂದ್ರ ಶಾಸನ ಸಭೆಯಲ್ಲಿ ನಿಶ್ಚಯವಾಗಿತ್ತಷ್ಟೆ. ಆ ಪ್ರಕಾರ ಆಹಾರ ಮಂತ್ರಿ ಸರ್ ಜ್ವಾಲಾ ಪ್ರಸಾದ ಶ್ರೀ ವಾಸ್ತವರ ಧುರೀಣತ್ವದಲ್ಲಿ ಒಂದು ಶಿಷ್ಟಮಂಡಳವು ಲಂಡನ್ನಿಗೆ ತೆರಳಿದೆ. ಅದರಲ್ಲಿ ಮೈಸೂರಿನ ದಿವಾನ ಮಾಧವರಾಯರು, ಮದ್ರಾಸದ ಸರ್ ಎಸ್. ವಿ. ರಾಮಮೂರ್ತಿಯವರು, ಮುಂಬೈಯ ಶ್ರೀ ಎ. ಡಿ. ಗೋರವಾಲಾರೂ ಕೇಂದ್ರ ಆಹಾರ ಖಾತೆಯ ಡಾ. ವಿಜಯೀಂದ್ರರಾಯರೂ ಸರಕಾರೀ ಪ್ರತಿನಿಧಿಗಳಾಗಿ ಬಂಗಾಲ ಬರಗಾಲಕ್ಕೆ ಕಾರಣರಾದ ದೊಡ್ಡ ಹೊಟ್ಟೆಯ ಸರ್ ನಾಜಿಮುದ್ದೀನರು ಫಜಲ ರಹಮುತುಲ್ಲಾರು ಹಾಗು ಕೇಂದ್ರ ಶಾಸನಸಭೆಯ ಲೀಗ ಪಕ್ಷದ ಇಬ್ಬರು ಸದಸ್ಯರು ಸರಕಾರೇತರ ಸದಸ್ಯರಾಗಿ ಇರುವರು. ಈ ಶಿಷ್ಟಮಂಡಳವು ಲಂಡನ್ನಿನಿಂದ ಅಮೇರಿಕೆ ಕೆನಡಾಗಳಿಗೂ ತೆರಳಿ ಹಿಂದುಸ್ತಾನದ ೩೦ ಲಕ್ಷ ಟನ್ನು ಆಹಾರ ಧಾನ್ಯಗಳ ಕೊರತೆಯನ್ನು ನೀಗಿಸಲೆತ್ನಿಸುವದು. ಈ ಮೊದಲು ಕಳಿಸಲ್ಪಟ್ಟ ಆಹಾರ ಖಾತೆಯ ಸರ್ ರಾಬರ್ಟ ಹಚಿಂಗ್ಸರ ಪ್ರಯತ್ನವು ನಿಷ್ಫಲವಾಗಿರುವದೆಂಬದನ್ನು ಯಾರೂ ಅಲ್ಲಗಳೆಯಲಾರರು. ಇನ್ನು ಈ ಶಿಷ್ಟಮಂಡಳವು ಎಷ್ಟರ ಮಟ್ಟಿಗೆ ಯಶಸ್ವಿಯಾಗುವದೋ ನೋಡಬೇಕಾಗಿದೆ.

ಹಿಂದುಸ್ತಾನದ ಆಹಾರ ಪರಿಸ್ಥಿತಿಯನ್ನು ನೋಡಿ ವೈಸರಾಯರಿಗೂ ದಿಗಲುಂಟಾಗಿದೆ. ಅವರು ಮೊನ್ನೆ ದಕ್ಷಿಣ ಭಾರತಕ್ಕೆ ಬಂದು ಮೈಸೂರ ಹಾಗು ಇತರ ಪ್ರದೇಶಗಳಿಗೆ ಭೆಟ್ಟಿ ಕೊಟ್ಟರು. ಪ್ರಮುಖ ರಾಜಕೀಯ ಪಕ್ಷಗಳ ಸಹಕಾರವಿಲ್ಲದೆ ಈ ಸಮಸ್ಯೆ ಬಿಡಿಸಲಶಕ್ಯವೆಂದು ಅವರಿಗನಿಸಿತು. ಕೂಡಲೆ ಅವರು ಬ್ಯಾ. ಜಿನ್ನಾರನ್ನು ತಮ್ಮಲ್ಲಿಗೆ ಕರೆಸಿ ಅವರೊಡನೆ ಚರ್ಚಿಸಿದರು. ಮಹಾತ್ಮಾ ಗಾಂಧಿಯವರಿಗೆ ಅನಾರೋಗ್ಯದ ಮೂಲಕ ದಿಲ್ಲಿಗೆ ಬರಲಾಗದ್ದರಿಂದ ವಾಯಿಸರಾಯರು ತಮ್ಮ ಕಾರ್ಯದರ್ಶಿಯನ್ನು ಅವರೆಡೆಗೆ ಕಳಿಸಿದರು. ಇಂದಿನ ಸರಕಾರದ ಬದಲು ಕೇಂದ್ರದಲ್ಲಿ ರಾಷ್ಟ್ರೀಯ ಸರಕಾರ ಕೂಡಲೆ ಸ್ಥಾಪಿಸಲ್ಪಡಬೇಕು. ಕೇಂದ್ರ ಶಾಸನ ಸಭೆಯ ಸದಸ್ಯರೆ ಅದರಲ್ಲಿರಬೇಕು. ಹೀಗಾದರೆ ಮಾತ್ರ ಎಲ್ಲವೂ ಸರಿಹೋಗುವದು ಎಂದು ಮಹಾತ್ಮರು ವಾಯಿಸರಾಯರಿಗೆ ಸಲಹೆ ಕೊಟ್ಟರು. ಕಾಂಗ್ರೆಸ ಅಧ್ಯಕ್ಷ ಮೌಲಾನಾ ಅಝಾದರನ್ನೂ ವಾಯಿಸರಾಯರು ಆಮಂತ್ರಿಸಿದ್ದು ಅಝಾದರು ವಾಯಿಸರಾಯರನ್ನು ಭೆಟ್ಟಿಯಾಗಲು ಒಪ್ಪಿರುವರು. ಗಾಂಧೀಜಿಯ ಸಲಹೆಯಂತೆ ನಡೆದುಕೊಳ್ಳಲು ವಾಯಿಸರಾಯ ವೇವಲ್ಲರು ಸಾಹಸಪಡುವರೆ?

ಆಸಾಮದಲ್ಲಿ ಕಾಂಗ್ರೆಸ ಸರಕಾರ

ಆಸಾಮ ಶಾಸನಸಭೆಯ ಕಾಂಗ್ರೆಸ ಪಕ್ಷದ ಸದಸ್ಯರಾದ ಶ್ರೀ ಗೋಪೀನಾಥ ಬಾರ್ದಲಾಯರು ತಾ. ೯ ಕ್ಕೆ ಹೊಸ ಮಂತ್ರಿಮಂಡಳ ರಚಿಸಿದರು. ಈ ಮಂತ್ರಿಮಂಡಳದಲ್ಲಿ ೯ ಸ್ಥಳಗಳಿದ್ದು ೭ನ್ನು ಮಾತ್ರ ಈಗ ತುಂಬಲಾಗಿದೆ. ಈ ೭ ಮಂತ್ರಿಗಳಾರೆಂದರೆ ಶ್ರೀ ಗೋಪಿನಾಥ ಬಾರ್ದಲಾಯ (ಮುಖ್ಯ ಮಂತ್ರಿ) ವಸಂತ ಕುಮಾರ ದಾಸ, ವಿಷ್ಣುರಾಮ ಮೇಧಿ, ವೈದ್ಯನಾಥ ಮುಕರ್ಜಿ, ರೆವರೆಂಡ ನಿಕೋಲ್ಸ ರಾಯ, ರಾಮನಾಥ ದಾಸ ಮತ್ತು ಅಬ್ದುಲ ಮತಲಬ ಮಜುಮದಾರ.

ಮಂತ್ರಿ ಮಂಡಳದ ರಚನೆಯ ಕಾಲದಲ್ಲಿ ಕಾಂಗ್ರೆಸ ಅಧ್ಯಕ್ಷರಾದ ಮೌಲಾನಾ ಅಜಾದರು ಶಿಲಾಂಗದಲ್ಲಿದ್ದರು. ಲೀಗ ಪಕ್ಷವು ಇಷ್ಟಪಟ್ಟರೆ ಸಮ್ಮಿಶ್ರ ಸರಕಾರ ಸ್ಥಾಪಿಸಲು ತಮಗೆ ಆಕ್ಷೇಪವಿಲ್ಲೆಂದೂ ಎಲ್ಲ ಪಕ್ಷ ಪಂಗಡಗಳಿಗೆ ಮಂತ್ರಿ ಮಂಡಳದಲ್ಲಿ ಯೋಗ್ಯ ಪ್ರಾತಿನಿಧ್ಯ ಕೊಡಲಾಗುವದೆಂದೂ ಮೌಲಾನಾ ಅಜಾದರು ಸಾರಿದರು. ಅದರಂತೆ ಅವರು ಹಿಂದಿನ ಮುಖ್ಯ ಮಂತ್ರಿಗಳಾದ ಸರ್ ಸಾದುಲ್ಲಾರ ಬಿನ್ನಹದ ಮೇರೆಗೆ ಅವರನ್ನು ಭೆಟ್ಟಿಯಾಗಿ ಮಾತುಕತೆಯಾಡಿದರು. ಸರ್ ಸಾದುಲ್ಲಾರು ಇನ್ನೂ ಯಾವ ನಿರ್ಧಾರಕ್ಕೂ ಬಂದಿಲ್ಲವಾದ್ದರಿಂದ ಮಂತ್ರಿ ಮಂಡಳದಲ್ಲಿ ಎರಡು ಸ್ಥಳಗಳನ್ನು ಖಾಲಿ ಬಿಡಲು ಅಜಾದರು ಶ್ರೀ ಬಾರ್ದಲಾಯರಿಗೆ ತಿಳಿಸಿದರು.

ಆಸಾಮ ಶಾಸನಸಭೆಯಲ್ಲಿ ೧೦೮ ಸ್ಥಾನಗಳಲ್ಲಿ ಕಾಂಗ್ರೆಸ್ಸಿಗೆ ೫೮ ಸ್ಥಾನಗಳು ದೊರಕಿವೆ. ೩ ಮುಸ್ಲಿಂ ಸದಸ್ಯರು ಕಾಂಗ್ರೆಸ್ಸಿಗೆ ಬೆಂಬಲವೀಯಲು ವಚನವಿತ್ತಿರುವದರಿಂದ ಕಾಂಗ್ರೆಸ ಪಕ್ಷದ ಸದಸ್ಯರ ಸಂಖ್ಯೆಯು ೬೧ ಕ್ಕೆ ಬಂದಿದೆ. ಕಾಂಗ್ರೆಸ್ಸಿಗೇ ನಿಚ್ಚಳ ಬಹುಮತವಿದೆಂಬುದು ಇದರಿಂದ ಸ್ಪಷ್ಟವಾಗುವದು. ಇದು ಕಾಂಗ್ರೆಸ್ಸಿನ ಪ್ರಥಮ ಸರಕಾರ. ಆಸಾಮವು ಲೀಗದ ಕೈಬಿಟ್ಟಿತು. ಪಾಕಿಸ್ತಾನದಲ್ಲಿ ಆಸಾಮವು ಸೇರಬಹುದೆಂದು ಎಣಿಸಿದ್ದ ಜಿನ್ನಾರಿಗೆ ಇದರಿಂದ ಎದೆಯೊಡೆದಿರಲಿಕ್ಕೆ ಸಾಕು.

ಸಿಂಧ ಗವರ್ನರರ ಕುತಂತ್ರ

ಸಿಂಧ ಗವರ್ನರರು ಪ್ರಜಾಭಿಪ್ರಾಯಕ್ಕೆ ವಿರುದ್ಧವಾಗಿ ವರ್ತಿಸಿರುವರು. ಸಿಂಧ ಶಾಸನಸಭೆಯಲ್ಲಿ ಬಹುಮತ (೨೯) ಪಡೆದಿರುವ ಸಯ್ಯದ-ಮೌಲಾಬಕ್ಷ-ಕಾಂಗ್ರೆಸ ಸಮ್ಮಿಶ್ರ ಪಕ್ಷದ ಬದಲು ಲೀಗ ಪಕ್ಷದ (೨೮) ಜನರ ಕೈಗೆ ಅಧಿಕಾರ ಸೂತ್ರ ಒಪ್ಪಿಸಿರುವರು. ಲೀಗ ಪಕ್ಷದ ಧುರೀಣರಾದ ಸರ್ ಗುಲಾಮ ಹುಸೇನ ಹಿದಾಯತುಲ್ಲಾರನ್ನು ಮಂತ್ರಿ ಮಂಡಳ ರಚಿಸಲು ಆಮಂತ್ರಿಸುವಾಗ ಸಿಂಧ ಗವರ್ನರರಾದ ಸರ್ ಫ್ರಾನ್ಸಿಸ ಮುಡಿಯವರು ಸ್ವತಂತ್ರ ಕೂಲಿಕಾರ ಸದಸ್ಯರಾದ ಶ್ರೀ ಬೇಚಾರರು ಸಮ್ಮಿಶ್ರ ಪಕ್ಷಕ್ಕೆ ಬೆಂಬಲವೀಯಲು ವಚನವಿತ್ತಿದ್ದನ್ನು ಬೇಕೆಂದೇ ಗಣನೆಗೆ ತಂದುಕೊಳ್ಳಲಿಲ್ಲ. ಲೀಗ-ಸಮ್ಮಿಶ್ರ ಪಕ್ಷಗಳಿಗೆ ಸಮಬಲ (೨೮-೨೮) ವಿರುವದರಿಂದ ಮತ್ತು ನಾಲ್ವರು ಸದಸ್ಯರು (೩ ಯುರೋಪಿಯನ, ೧ ಸ್ವತಂತ್ರ ಕೂಲಿಕಾರ) ತಟಸ್ಥವುಳಿದಿರುವದರಿಂದ ಚುನಾವಣೆಯಲ್ಲಿ ಸ್ಪರ್ಧಿಸಿದ ಬಹುಮತ ಪಕ್ಷದ ಧುರೀಣರ ಕೈಗೆ ಅಧಿಕಾರ ಸೂತ್ರ ಒಪ್ಪಿಸಲು ತಾವು ನಿರ್ಧರಿಸಿದರೆಂದು ಗವರ್ನರರೊಂದು ಪ್ರಕಟನೆ ಹೊರಡಿಸಿರುವರು. ಆದರೆ ತಾವು ಸಮ್ಮಿಶ್ರ ಪಕ್ಷಕ್ಕೆ ಬೆಂಬಲ ಕೊಡುವ ವಿಷಯ ಗವರ್ನರರಿಗೆ ಅವರು ಪ್ರಕಟನೆ ಹೊರಡಿಸುವ ಮೊದಲೆ ತಿಳಿಸಲಾಗಿತ್ತೆಂದು ಶ್ರೀ ಬೇಚಾರರೇ ಒಂದು ಹೇಳಿಕೆ ಕೊಟ್ಟಿರುವರು.

ಇತ್ತ ಹೊಸ ಮುಖ್ಯ ಮಂತ್ರಿ ಸರ್ ಗುಲಾಮರು ಮಂತ್ರಿ ಮಂಡಳದಲ್ಲಿ ನಾಲ್ವರು ತಮ್ಮ ಪಕ್ಷದವರನ್ನು ಸೇರಿಸಿಕೊಂಡು ಉಳಿದೆರಡು ಸ್ಥಳಗಳಿಗೆ ಹಿಂದುಗಳನ್ನು ನೇಮಿಸಲು ಕಾಂಗ್ರೆಸ ಪಕ್ಷದ ಪ್ರೊ. ಘನಶ್ಯಾಮರನ್ನು ಕೇಳಿಕೊಂಡರು. ಪ್ರೊ ಘನಶ್ಯಾಮರಾದರೂ ಈ ಆಮಂತ್ರಣವನ್ನು ಸ್ವೀಕರಿಸದೆ, ಮುಖ್ಯ ಮಂತ್ರಿಯ ನೇಮಕವನ್ನೆ ತಾವು ಮಾನ್ಯ ಮಾಡುವದಿಲ್ಲೆಂದೂ ನಿಜವಾಗಿ ಮಂತ್ರಿ ಮಂಡಳ ರಚಿಸುವ ಅಧಿಕಾರವು ಸಮ್ಮಿಶ್ರ ಪಕ್ಷಕ್ಕೊಂದೇ ಇದೆಯೆಂದೂ ಸಿಂಧದ ಹಿತದ ದೃಷ್ಟಿಯಿಂದ ಸರ್ ಗುಲಾಮರು ರಾಜೀನಾಮೆ ಕೊಟ್ಟು ಅಧಿಕಾರ ಸೂತ್ರವನ್ನು ಸಮ್ಮಿಶ್ರ ಪಕ್ಷದ ಧುರೀಣರಾದ ಶ್ರೀ ಸಯ್ಯದರಿಗೊಪ್ಪಿಸಬೇಕೆಂದೂ ಬುದ್ಧಿವಾದ ಹೇಳಿರುವರು.

ಆದರೂ ಸಿಂಧ ಗವರ್ನರರಾಗಲಿ ಸರ್ ಗುಲಾಮರಾಗಲಿ ಜುಮ್ಮೆಂದಿಲ್ಲ. ಇದನ್ನು ನೋಡಿ ಸಮ್ಮಿಶ್ರ ಪಕ್ಷದ ಶ್ರೀ ಸಯ್ಯದರು ವಾಯಿಸರಾಯರು ಹಾಗು ಭಾರತ ಮಂತ್ರಿಗಳ ಕಡೆಗೆ ಮೊರೆ ಹೋಗಿರುವರು. ಗವರ್ನರರ ಕೃತಿಯು ಘಟನೆಗೆ ವಿರುದ್ಧವಿದೆಂದೂ ಹೊಸ ಸರಕಾರದ ವಿರುದ್ಧ ಅವಿಶ್ವಾಸ ಠರಾವನ್ನು ಮಂಡಿಸಲಾಗಿದೆಂದೂ ಸಮ್ಮಿಶ್ರ ಪಕ್ಷದಲ್ಲಿ ಒಡಕು ಹುಟ್ಟಿಸುವ ಬಗ್ಗೆ ಮುಂಗಡ ಪತ್ರಿಕೆಯ ಅಧಿವೇಶನವನ್ನು ಗವರ್ನರರು ಮುಂದೂಡಿರುವರೆಂದೂ ಮುಖ್ಯ ಮಂತ್ರಿಗಳು ಸಮಿಶ್ರ ಪಕ್ಷದವರಿಗೆ ಹಿಂಸಾಚಾರದ ಬೆದರಿಕೆ ಹಾಕಿರುವರೆಂದೂ ಈ ಸಮಸ್ಯೆಯಲ್ಲಿ ಕೈಹಾಕಿ ಸಿಂಧದ ಆಡಳಿತೆಯು ಸುಗಮವಾಗಿ ಸಾಗುವಂತೆ ಮಾಡಬೇಕೆಂದೂ ಸಯ್ಯದರು ಅವರಿಗೆ ತಂತಿ ಕಳಿಸಿರುವರು.

ಸಮ್ಮಿಶ್ರ ಪಕ್ಷದಲ್ಲಿ ಸೇರಿದ ಮುಸ್ಲಿಮ ಸದಸ್ಯರು ಲೀಗ ಸೇರುವ ವರೆಗೆ ಅವರ ಮನೆ ಮುಂದೆ ಪಿಕೆಟಿಂಗ ಮಾಡಲಾಗುವದೆಂದು ನವಾಬಜಾದಾ ಲಿಯಾಕತರು ಹೇಳಿದ್ದರೆ, ಗುಲಾಮ ಹುಸೇನರು ತಮ್ಮ ಮಂತ್ರಿ ಮಂಡಲವನ್ನುರುಳಿಸಿದರೆ ಸಿಂಧದಲ್ಲಿ ರಕ್ತಪಾತವಾಗುವದೆಂದು ಹೆದರಿಸಿದ್ದಾರೆ. ಖಾ. ಬ. ಖುರ್ರೋ ಅವರಂತೂ ಸಿಂಧ ಶಾಸನ ಸಭೆಯ ಸದಸ್ಯತ್ವವನ್ನು ೬೦ ರಿಂದ ೧೨೦ ಕ್ಕೇರಿಸಿ ಮುಸ್ಲಿಂ ಲೀಗದ ಆಳಿಕೆಯನ್ನು ಹಿಂದೂಗಳ ಹಂಗಿಲ್ಲದೆ ಸಾಗಿಸುವಂತೆ ಬ್ರಿಟಿಶ ಸರಕಾರವನ್ನು ಒಲಿಸಲಾಗುವದೆಂದು ಹೇಳಿದ್ದಾರೆ.

ಅಂತೂ ಜಿನ್ನಾರಿಗೇನೊ ದುರ್ದೆಶೆ ತಿರುಗಿದೆ. ಬ್ರಿಟಿಶ ಆಳರಸರ ಸಹಾಯದಿಂದ ಸಿಂಧದಲ್ಲಿ ನಿರ್ಮಿಸಲಾದ ಪಾಕಿಸ್ತಾನ ದುರ್ಗದ ಅಡಿಗಲ್ಲು ಭದ್ರವಾಗಿದ್ದಂತೆ ತೋರುವದಿಲ್ಲ. ಯಾವ ಕ್ಷಣಕ್ಕೂ ಈ ದುರ್ಗವು ನೆಲಸಮವಾಗಬಹುದು.

ಮುಂಬೈ ಶಾಸನಸಭೆ ಚುನಾವಣೆ ಹೋರಾಟ

ಕಾಂಗ್ರೆಸ್ಸಿನ ಮುರಾರಜಿ, ಲೀಲಾವತಿ ಮೊದಲಾದ ೧೪ ಜನರ ಅವಿರೋಧ ಆಯ್ಕೆ

ಕರ್ನಾಟಕದಲ್ಲಿ ಕಾಂಗ್ರೆಸ್ಸಿನೊಡನೆ ಕಂಬಳಿ, ಪಾಟೀಲ ಶ್ರೀಮತಿ ಸರದಾರರ ಸ್ಪರ್ಧೆ

ಮುಂಬಯಿ ೧೫— ಮುಂಬಯಿ ಶಾಸನ ಸಭೆಗೆ ನಾಮಪತ್ರಗಳನ್ನು ಕೊಡುವ ಕೊನೆಯ ದಿನವು ಮೊನ್ನೆ ೧೧ ನೇ ತಾರೀಖಿಗಿತ್ತು. ಮುಂಬಯಿ ಶಾಸನ ಸಭೆಯಲ್ಲಿ ಒಟ್ಟು ೧೭೫ ಸ್ಥಳಗಳಿದ್ದು ನಾಮಪತ್ರಗಳ ಪರಿಶೀಲನೆ ನಂತರ ೨೯ ಜನರು ಅವಿರೋಧ ಆರಿಸಿ ಬಂದರು. ಕಾಂಗ್ರೆಸ್ಸಿಗೆ ೧೪ ಸ್ಥಳಗಳು ಅವಿರೋಧ ದೊರೆತಿದ್ದು ಮುಸ್ಲಿಂ ಲೀಗಿಗೆ ೬ ಯುರೋಪಿಯನರಿಗೆ ೬, ಆಂಗ್ಲೊ-ಇಂಡಿಯನರಿಗೆ ೧, ಸ್ವತಂತ್ರರಿಗೆ ೨ ಸ್ಥಳಗಳು ಸಿಕ್ಕಿವೆ. ಅವಿರೋಧ ಆರಿಸಿ ಬಂದವರು ಕೆಳಗಿನಂತಿರುವರು.

ಕಾಂಗ್ರೆಸ

೧. ಲೀಲಾವತಿ ಮುನಸಿ ಮುಂಬಯಿ ಸ್ತ್ರೀಸ್ಥಳ, ೨. ತಾರಾಬಾಯಿ ಮೋಡಕ ಮುಂಬಯಿ ಸ್ತ್ರೀಸ್ಥಳ, ೩. ಛೋಟುಭಾಯಿ ಎಸ್. ಪಟೀಲ ಹಿಂದೀ ವ್ಯಾಪಾರಿ ಸಂಘ ಮುಂಬಯಿ, ೪. ಆರ್. ಎ. ಪೋದಾರ ಈಸ್ಟ ಇಂಡಿಯಾ ಕಾಟನ್ ಅಸೋಸಿಯೇಶನ್ ಮುಂಬಯಿ, ೫. ಮುರಾರಜಿ ದೇಸಾಯಿ ಹಿಂದಿನ ಕಂದಾಯ ಮಂತ್ರಿಗಳು (ಸುರತ ಜಿಲ್ಲೆ), ೬. ಮುರಾರಜಿ ಪಟೀಲ ಸುರತ ಜಿಲ್ಲೆ, ೭. ಲಲ್ಲೂಭಾಯಿ ಮಕಂಜಿ ಪಟೀಲ ಸುರತ ಜಿಲ್ಲೆ, ೮. ಛೋಟುಭಾಯಿ ಭಾಯಿದಾಸ ಮಾರ್ಫತಿಯಾ ಸುರತನಗರ, ೯. ಲಕ್ಷ್ಮೀದಾಸ ಎಂ. ಶ್ರೀಕಾಂತ ಪಂಚಮಹಾಲ ಪೂರ್ವಭಾಗ, ೧೦. ವಾಮನ ಮುಕದಮ ಪಂಚಮಹಾಲ ಪಶ್ಚಿಮಭಾಗ, ೧೧ ಮಣೆಕಲಾಲ ಎಂ. ಗಾಂಧಿ ಪಂಚಮಹಾಲ ಪಶ್ಚಿಮಭಾಗ, ೧೨. ಕುಮಾರಿ ಇಂದುಮತಿ ಚಿಮಣಲಾಲ ಸೇಟ ಅಹಮ್ಮದಾಬಾದ ನಗರ ಸ್ತ್ರೀಸ್ಥಳ, ೧೩. ಸೇಟ ಚಂದೂಲಾಲ ಪೀತಾಂಬರದಾಸ ಪರೇಖ ಅಹಮ್ಮದಾಬಾದ ಗಿರಣಿಕಾರ ಸಂಘ, ೧೪. ಮಣಿಕಲಾಲ ಚುನಿಲಾಲ ವಕೀಲ ಅಹಮ್ಮದಾಬಾದ ಜಿಲ್ಲೆ ದಕ್ಷಿಣ ಭಾಗ.

ಮುಸ್ಲಿಂ ಲೀಗ

೧. ಖಾದೀಜಾ ಶಾಫಿ ತಯ್ಯಬಜಿ ಮುಂಬಯಿ ಸ್ತ್ರೀಸ್ಥಳ, ೨. ಅಬ್ದುಲ ಸತ್ತಾರ ಗಾಂಧಿ ಸುರತ ಜಿಲ್ಲೆ, ೩. ಖಾನಸಾಹೇಬ ಡಾ. ಅಲೀಭಾಯಿ ಪಟೇಲ ಭಡೋಚ ಜಿಲ್ಲೆ. ೪. ಅಹಮ್ಮದ ಎ. ಪಟೇಲ ಭಡೋಚ ಜಿಲ್ಲೆ, ೫. ಅಹಮ್ಮದಮಿಯಾ ಸಾರುಮಿಯಾ ಶೇಖ ಅಹಮ್ಮದಾಬಾದ ಗ್ರಾಮ ಮುಸಲ್ಮಾನ ಮತದಾರ ಸಂಘ, ೬. ಡಬ್ಲ್ಯು. ಎ. ಪಾರಕಾ ರತ್ನಾಗಿರಿ ಜಿಲ್ಲೆ.

ಸ್ವತಂತ್ರರು

೧. ಸರ್ ಸೊರಬಜಿ ಡಿ. ಸಕಲತವಾಲಾ ಮುಂಬಯಿ ಗಿರಣಿ ಒಡೆಯರ ಸಂಘ, ೨. ಡಾ. ಮೋರೇಶ್ವರ ನಾರಾಯಣ ನಾತು ದಕ್ಷಿಣ ಸರದಾರ, ಇನಾಮದಾರ ಹಾಗು ಜಮೀನದಾರ ಮತದಾರ ಸಂಘ.

ಯುರೋಪಿಯನ್ನರು

೧. ಸಿ. ಆರ್. ಶಾರ್ಪ, ೨. ಡಬ್ಲ್ಯು. ಎಂ. ಮಾರ್ಟಿನ, ೩. ಎಸ್. ಜೆ. ಮ್ಯಾಕನನ್ (ಮೂವರೂ ವಾಣಿಜ್ಯ ಸಂಘ ಹಾಗೂ ಇಲಾಖಾ ಟ್ರೇಡ್ಸ ಅಸೋಸಿಯೇಶನ್) ೪. ಪೀಟರ ಜಾನಸನ್, ೫. ಸಿ. ಪಿ. ಬ್ರಾಂಬಲ, ೬. ಸಿ. ಬಿ. ಕೋಕೇನ (ವ[illegible] ರೂ ಯುರೋಪಿಯನ್ ಮತದಾರ ಸಂಘ).

ಆಂಗ್ಲೋ ಇಂಡಿಯನ್

೧ ಎಸ್. ಎಚ್. ಪ್ರೇಟರ ಅಂಗ್ಲೋ-ಇಂಡಿಯನ್ ಮತದಾರ ಸಂಘ.

ಮುಂಬಯಿ ನಗರ ಹಾಗು ಉಪನಗರಗಳ ೯ ಸಾಮಾನ್ಯ ಸ್ಥಳಗಳಿಗೆ ಇಬ್ಬರು ಹರಿಜನರನ್ನೊಳಗೊಂಡು ೯ ಕಾಂಗ್ರೆಸ್ಸಿಗರು, ಮೂವರು ಹಿಂದೂ ಮಹಾಸಭೆಯವರು, ಇಬ್ಬರು ಅಂಬೇಡಕರ ಪಕ್ಷದವರು, ಇಬ್ಬರು ಸ್ವತಂತ್ರರು ಕಣಕ್ಕಿಳಿದಿರುವರು ೪ ಮುಸಲ್ಮಾನ ಸ್ಥಳಗಳಿಗೆ ೧೨ ಜನರು ಹುರಿಯಾಳುಗಳಿದ್ದು ಅವರಲ್ಲಿ ೪ ಜನರು ಲೀಗ, ೬ ಜನರು ಸ್ವತಂತ್ರ, ಒಬ್ಬರು ಅಹರಾರ ಹಾಗು ಒಬ್ಬರು ಕಾಂಗ್ರೆಸ್ ಇರುವರು.

ಹಿಂದಿ ಕ್ರಿಶ್ಚಿಯನ ಮತದಾರ ಸಂಘದ ೧ ಸ್ಥಳಕ್ಕೆ ಡಾ. ಅಲ್ಬನ್ ಡಿಸೋಜಾ ಮೇಯರ, ಡಾ. ಜಿ. ಎಂ ಕೊಲ್ಯಾಸೊ ಹಿಂದಿನ ಮೇಯರ, ಹಾಗು ಆರ್ ಅದ್ವೈಡೆ ಅವರು ನಿಂತಿದ್ದಾರೆ.

ಖೇರ--ಭಿಡೆ ಸ್ಪರ್ಧೆ

ಹಿಂದಿನ ಮುಖ್ಯ ಮಂತ್ರಿಗಳಾದ ಶ್ರೀ ಬಿ. ಜಿ. ಖೇರರು ಮುಂಬಯಿ ವಿಶ್ವವಿದ್ಯಾಲಯ ಮತದಾರ ಸಂಘದ ೧ ಸ್ಥಳಕ್ಕೆ ಕಾಂಗ್ರೆಸದಿಂದ ನಿಂತಿದ್ದು ಹಿಂದು ಮಹಾಸಭೆಯ ಶ್ರೀ ಎ. ಎಸ್. ಭಿಡೆಯವರು ಅವರನ್ನು ವಿರೋಧಿಸಿರುವರು.

ಮುಂಬಯಿ ಜವಳಿ ಕೂಲಿಕಾರ ಸಂಘದ ೧ ಸ್ಥಳಕ್ಕೆ ಕಾಂಗ್ರೆಸದಿಂದ ಹಿಂದಿನ ಮಂತ್ರಿಗಳಾದ ಎಂ. ವಾಯ ನೂರಿಯವರನ್ನು ನಿಲ್ಲಿಸಿದ್ದು ಕಮ್ಯುನಿಸ್ಟರಾದ ಎಸ್. ಎ. ಡಾಂಗೆಯವರು ಅವರನ್ನು ವಿರೋಧಿಸಿರುವರು.

—೧೩ನೇ ಪುಟ ನೋಡಿರಿ

ಹಾವೂ ಸಾಯಲಿಲ್ಲ ಕೋಲೂ ಮುರಿಯಲಿಲ್ಲ

ಯುಕ್ತ ರಾಷ್ಟ್ರಗಳ ಭದ್ರತಾ ಮಂಡಲದಲ್ಲಿ ರಶಿಯನ್ ಉಪವಿದೇಶಮಂತ್ರಿ ವಿಶಿನಿಸ್ಕಿಯವರ ಉದಾತ್ತ ಧಿಕ್ಕಾರ ಮತ್ತು ಬ್ರಿಟಿಶ ವಿದೇಶಮಂತ್ರಿ ಬೆವಿನ್ನರ ಸಾತ್ವಿಕ ಕೋಪಕ್ಕೆ ಕಾರಣವಾದ ಗ್ರೀಕ್ ಪ್ರಶ್ನೆ ಕಡೆಗೊಮ್ಮೆ ಉಭಯ ಪಕ್ಷಗಳಿಗೂ ಸಮಂಜಸವೆನಿಸುವಂತೆ ಬಿಡಿಸಲ್ಪಟ್ಟಿತು. ಹಲವಾರು ಪಂಚರಾಷ್ಟ್ರೀಯ ಗೋಪ್ಯ ಸಭೆಗಳ ನಂತರ ಇಬ್ಬ ಮೂಗೂ ಮೇಲಾಗುವ ಹಾದಿ ಸಿಕ್ಕಿತು. ವಿದೇಶಮಂತ್ರಿ ಬೆವಿನ್ನರು ಬ್ರಿಟಿಶ ಸೈನ್ಯಗಳು ಗ್ರೀಸದಲ್ಲಿರುವದರಿಂದ ಜಾಗತಿಕ ಶಾಂತಿಭಂಗವಾಗುವ ಸಂಭವ ಇದೆ ಅಥವಾ ಇಲ್ಲವೆಂಬ ನೇರವಾದ ನಿರ್ಣಯವನ್ನು ಕೊಡಬೇಕೆಂಬ ಛಲವನ್ನು ಬಿಟ್ಟರು. ವಿಶಿನಿಸ್ಕಿಯವರು ಬ್ರಿಟಿಶ ಸೇನೆಗಳನ್ನು ಒಡನೆ ಹಿಂದೆ ತೆರಿಸಬೇಕೆಂಬ ನಿರ್ಣಯ ಮಾಡಬೇಕೆಂದು ತಾವು ಒತ್ತಾಯ ಪಡಿಸುವದಿಲ್ಲವೆಂದರು. ಅಮೇರಿಕೆಯೆ ಮೊದಲಾದ ಬ್ರಿಟಿಶ ಪಕ್ಷಪಾತಿ ರಾಷ್ಟ್ರಗಳು ಆಗಲೇ ರಶಿಯಾದ ವಿರುದ್ಧ ಅಭಿಪ್ರಾಯ ವ್ಯಕ್ತ ಮಾಡಿದ್ದವು. ಗ್ರೀಸದ ಬಗ್ಗೆ ಬ್ರಿಟಿಶ ವಿದೇಶಮಂತ್ರಿಗಳು ಮಾಡಿದ ಹೇಳಿಕೆಯನ್ನೂ ಅಮೇರಿಕೆ ಮೊದಲಾದ ರಾಷ್ಟ್ರಗಳು ವ್ಯಕ್ತಗೊಳಿಸಿದ ಅಭಿಪ್ರಾಯಗಳನ್ನೂ ಭದ್ರತಾಮಂಡಲ ಕೇಳಿಕೊಂಡಿದೆ. ಈ ವಿಷಯ ಇಷ್ಟಕ್ಕೆ ಮುಕ್ತಾಯವಾಯಿತು, ಎಂದು ಸಭಾಧ್ಯಕ್ಷರು ಹೇಳಿಕೆಯಿತ್ತರು. ಹೀಗೆ ಹಾವೂ ಸಾಯಲಿಲ್ಲ ಕೋಲೂ ಮುರಿಯಲಿಲ್ಲವಾಗಿ, ಇಬ್ಬರೂ ಉಗ್ರ ಪ್ರತಿಭಟರು ಶಾಂತರಾಗಿ ಹಸ್ತಲಾಘವವಿತ್ತು ಮತ್ತೆ ಗೆಳೆಯರಾದರು.

ಇಂಡೋನೇಶಿಯಾ ಪ್ರಶ್ನೆ

ಈ ಪರಿ, ಬ್ರಿಟಿಶ ಸಾಮ್ರಾಜ್ಯದ ಸ್ವಾಭಿಮಾನವೂ ರಶಿಯನ್ ಕ್ರಾಂತಿಕಾರರ ವಿಶ್ವಬಂಧುತ್ವವೂ ಒಂದೇ ಉಸಿರಿಗೆ ಸಂತೃಪ್ತವಾಗುತ್ತಲೇ ಮುಳ್ಳಿನ ಕೋಟಿಯಾದ ಇಂಡೋನೇಶಿಯನ್ ಪ್ರಶ್ನೆ ಬಂದು ಪುನಃ ವಾತಾವರಣವನ್ನು ಕಲಕಿಸಿತು. ಆದರೆ ಈ ಪ್ರಶ್ನೆಯನ್ನು ಭದ್ರತಾಮಂಡಲದ ಮುಂದೆ ಮಂಡಿಸಿದ ಯುಕ್ರೇನಿಯನ್ ಪ್ರತಿನಿಧಿ ಡಾ. ಮಾನ್ಯುಲಸ್ಕಿಯವರು ಇಂಡೋನೇಶಿಯಾದಲ್ಲಿರುವ ಬ್ರಿಟಿಶ ಸೈನ್ಯವನ್ನು ಕುರಿತು ಉಸಿರೆತ್ತದಿರುವಷ್ಟು ಜಾಣತನ ತೋರಿಸಿದರು. ಅದುವರಿಂದ ಪರಿಸ್ಥಿತಿ ಮೊದಲಿನಷ್ಟು ಬಿಸಿಯೇರಲಿಲ್ಲ. ಇಂಡೋನೇಶಿಯನ್ನರು ಯುದ್ಧಾವಸಾನದಲ್ಲಿ ಅಟ್ಲಾಂಟಿಕ ಘೋಷಣೆಯನ್ವಯ ತಮಗೆ ಸ್ವಾತಂತ್ರ್ಯ ದೊರೆಯುವದೆಂದು ಆಶಿಸಿದ್ದರು. ಆದರೆ ಅದು ನಿರಾಶೆಯಾಯಿತು. ಈಗ ಅವರ ರಾಷ್ಟ್ರೀಯ ಚಳವಳಿಯೇ [illegible]ಲ್ಪಡುತ್ತಿದೆ, ಎಂಬುದಾಗಿ ಹಲವು ಪತ್ರಿಕಾ ವರದಿಗಳ ರಾಶಿಯನ್ನು ಸಭೆಯ ಮುಂದೆ ಒಟ್ಟಿದರು. ಅವರು ಬ್ರಿಟಿಶ ಸೈನಿಕರ ಅಸ್ತಿತ್ವದ ವಿರುದ್ಧ ಡಾಕ್ಟರ ಸಾಹೇಬರ ಆಕ್ಷೇಪವೇನೂ ಇಲ್ಲದ್ದರಿಂದ ತಮಗೆ ಈ ಬಗ್ಗೆ ಏನು ಹೇಳಬೇಕೆಂದೇ ತೋಚದಾಗಿದೆಯೆಂದರು ಬೆವಿನ್. ಆದರೂ ಜಪಾನೀಯರ ನಿಶ್ಶಸ್ತ್ರೀಕರಣ, ಯುದ್ಧ ಕೈದಿಗಳ ಜೀವರಕ್ಷಣೆ —ಇವೇ ಜಾವಾಕ್ಕೆ ಹೋಗುವ ಉದಾತ್ತ ಕಾರಣಗಳ ಹೊರತು ರಾಷ್ಟ್ರೀಯ ಚಳವಳಿಯನ್ನು ಹತ್ತಿಕ್ಕುವದಕ್ಕಲ್ಲ, ಎಂದು ಅವರು ಸಾರಿದರು. ಡಚ್ ಪ್ರತಿನಿಧಿ ವಾನ್ ಕ್ಲೆಫೆನ್ಸರು ಇದಕ್ಕೆ 'ಸೋ' ಎಂದರು. ಆದರೆ ಡಾ. ಮ್ಯಾನುಲುಸ್ಕಿಯವರು ಇಂಡೋನೇಶಿಯಾಕ್ಕೆ ಯುಕ್ತರಾಷ್ಟ್ರ ವಿಚಾರಣಾ ಮಂಡಲವನ್ನು ಕಳಿಸಬೇಕೆಂಬ ಬೇಡಿಕೆಯನ್ನು ಮಂಡಿಸಿದೊಡನೆ "ಸ್ವಾತಂತ್ರ್ಯಪ್ರೇಮಿ" ರಾಷ್ಟ್ರಗಳ ಒಳ ಅಂತರಂಗ ಬೆಳಕಿಗೆ ಬಂತು. ಬೆವಿನ್ನರು ಬ್ರಿಟಿಶ ಸೈನಿಕರ ಅಪ್ರಿಯ ಕರ್ತವ್ಯದಲ್ಲಿ ಅಡಚಣೆಯೊಡ್ಡೀತು ಈ ವಿಚಾರಣೆ, ಎಂದು ಅದನ್ನು ವಿರೋಧಿಸಿದರು; ಅಮೇರಿಕನ್ ಪ್ರತಿನಿಧಿಗೂ ವಿಚಾರಣೆಯ ಮಾತು ಒಗ್ಗಲಿಲ್ಲ. ಈಗಾಗಲೇ ಪ್ರಾರಂಭವಾಗಿರುವ ಡಚ್ — ಇಂಡೋನೇಶಿಯನ್ ಮಾತುಕತೆಗಳಿಗೆ ಈ ವಿಚಾರಣೆಯಿಂದ ನಷ್ಟ ತಟ್ಟೀತೆಂದು ಅವನ ನೆವ.

ವಿಚಾರಣಾ ಮಂಡಲದ ಬೇಡಿಕೆಯನ್ನು ಬೆಂಬಲಿಸುತ್ತ ಹೇಳಿದರು ರಶಿಯನ್ ಪ್ರತಿನಿಧಿ ವಿಶಿನಿಸ್ಕಿ: ಇಂಥ ಅಪಾಯಕರ ಪರಿಸ್ಥಿತಿಯಲ್ಲಿ ಕೈಯಿಕ್ಕುವ ಹಕ್ಕಿಲ್ಲದಿದ್ದರೆ ಈ ಭದ್ರತಾ ಮಂಡಲ, ಈ ಯುಕ್ತರಾಷ್ಟ್ರ ಸಭೆ, ಇರುವದಾದರೂ ಏಕೆ? ಅದು ಹಳೆಯ ರಾಷ್ಟ್ರಸಂಘದಂತೆಯೆ ಆದೀತು.

ಅಂತರ್ ರಾಷ್ಟ್ರೀಯ

ಈ ಬಾರಿ ಇಜಿಪ್ತದ ಪ್ರತಿನಿಧಿ ತ್ರಾತನಾಗಿ ಬಂದ, ಅವನು ಮಧ್ಯಮಾರ್ಗವೊಂದನ್ನು ಸೂಚಿಸಿ, ಡಚ್-ಇಂಡೋನೇಶಿಯನ್ ಮಾತುಕತೆಗಳನ್ನನುಲಕ್ಷಿಸಿ ವಿಷಯವನ್ನು ತಡೆಹಿಡಿಯಬೇಕು, ಆ ಮಾತುಕತೆ ಮುರಿದರೆ ಈ ವಿಷಯವನ್ನು ಪುನಃ ಎತ್ತಿಕೊಳ್ಳುವ ಹಕ್ಕು ಕಾದಿರಿಸಲ್ಪಡಬೇಕೆಂದು ಹೇಳಿದನು. ಆ ವರೆಗೆ ಬ್ರಿಟಿಶ ಸೈನಿಕರು ಸ್ವಾತಂತ್ರ್ಯ ಚಳವಳಿಯನ್ನು ಹತ್ತಿಕ್ಕುವದಿಲ್ಲೆಂದು ಮಾತು ಕೊಡಬೇಕು. ಈ ವಿಷಯದಲ್ಲಿ ಮಾಸ್ಕೋದಿಂದ ಪುನಃ ಸಲಹೆ ತರಿಸಿಕೊಳ್ಳುವ ಸಲುವಾಗಿ ವಿಶಿನಿಸ್ಕಿಯ ಸೂಚನೆಯಂತೆ ಸಭೆಯನ್ನು ಮುಂದುವರಿಸಲಾಯಿತು.

ವಿಶ್ವಸ್ತ ಮಂಡಲ

ಆದಿಷ್ಟ ವಸಾಹತುಗಳ ವಿಶ್ವಸ್ತಿಕೆಯ ಬಗ್ಗೆ ಯೋಗ್ಯ ವ್ಯವಸ್ಥೆಯಾಗುವ ವರೆಗೆ ಯುಕ್ತರಾಷ್ಟ್ರ ವಿಶ್ವಸ್ತ ಮಂಡಲ ಸಮಿತಿ ತಾತ್ಪೂರ್ತಿಕ ನಿಯಂತ್ರಣ ಯೋಜನೆಯೊಂದನ್ನು ಸೂಚಿಸಬೇಕೆಂಬ ಬ್ರಿಟಿಶ ಸೂಚನೆಯನ್ನು ರಶಿಯನ್ನರು ವಿರೋಧಿಸಿ ಈ ತಾತ್ಪೂರ್ತಿಕ ವ್ಯವಸ್ಥೆಯಿಂದ ಶಾಶ್ವತ ವ್ಯವಸ್ಥೆಯನ್ನು ಮುಂದೆ ತಳ್ಳಲು ಅವಕಾಶವಾಗುತ್ತದೆಂದು ಆಕ್ಷೇಪಿಸಿದರು. ಈ ಕಾರಣದಿಂದ ಬ್ರಿಟಿಶರ ವಿಲಂಬಕ ತಂತ್ರ ಸೋತುಹೋಯಿತು. ಆ ಮೇಲೆ ಅಮೇರಿಕನ್ ಪ್ರತಿನಿಧಿ ಜಾನ್ ಡುಲ್ಲೀಸರು ಯುಕ್ತರಾಷ್ಟ್ರ ಮಹಾಸಭೆಯಲ್ಲಿ ಒಂದು ಗೊತ್ತುವಳಿ ಮಂಡಿಸಿ, ಆದಿಷ್ಟ ವಸಾಹತುಗಳ ವಿಷಯದಲ್ಲಿ ವಿಶ್ವಸ್ತಿಕೆಯ ಒಪ್ಪಂದಗಳನ್ನು ಆದಿಷ್ಟ ವಸಾಹತು ರಾಜ್ಯಗಳು ಸಪ್ಟಂಬರಕ್ಕೆ ಮುಂಚಿತವಾಗಿ ಸಿದ್ಧಗೊಳಿಸಿ ಯುಕ್ತರಾಷ್ಟ್ರಗಳ ಮುಂದೆ ಸಾದರಪಡಿಸಬೇಕೆಂದು ಬೇಡಿದ್ದಲ್ಲದೆ ಎಲ್ಲ ಅಸ್ವತಂತ್ರ ರಾಜ್ಯಗಳೂ ಯುಕ್ತರಾಷ್ಟ್ರ ವಿಶ್ವಸ್ತಿಕೆಯ ಅಧಿಕಾರಕಕ್ಷೆಯೊಳಗೆ ಸೇರಬೇಕು ಮತ್ತು ಈ ಅಸ್ವತಂತ್ರ ರಾಜ್ಯಗಳ ಪ್ರಜೆಗಳು ಸ್ವರಾಜ್ಯ ಪಥದಲ್ಲಿ ಮಾಡಿರುವ ಮುನ್ನಡೆಯನ್ನು ವರ್ಷಕ್ಕೊಮ್ಮೆ ಆ ರಾಜ್ಯಗಳನ್ನು ಆಳುವವರು ಯುಕ್ತರಾಷ್ಟ್ರಸಂಘಕ್ಕೆ ವರದಿಮಾಡಬೇಕು, ಎಂದು ಸೂಚಿಸಿದರು. ಇದನ್ನು ಯುಕ್ತರಾಷ್ಟ್ರ ಮಹಾಸಭೆ ಸರ್ವಾನುಮತದಿಂದ ಅಂಗೀಕರಿಸಿದ್ದರಿಂದ ವಿಶ್ವಸ್ತ ಮಂಡಲಕ್ಕೆ ಎಲ್ಲ ಪರಾಧೀನ ರಾಷ್ಟ್ರಗಳ ವಿಷಯದಲ್ಲಿ ಕೈಹಾಕಲು ಅವಕಾಶ ದೊರೆತಂತಾಯಿತು.

ಫ್ರಾಂಕೋಗೆ ಪ್ರವೇಶವಿಲ್ಲ

ಪನಾಮಾ (ಅಮೇರಿಕಾ) ಪ್ರತಿನಿಧಿ ಮಂಡಿಸಿದ ಒಂದು ಗೊತ್ತುವಳಿಯನ್ನು ೪೭ ಮತಗಳಿಂದ ಯುಕ್ತರಾಷ್ಟ್ರ ಮಹಾಸಭೆಯವರು ಅಂಗೀಕರಿಸಿ ಜನರಲ್ ಫ್ರಾಂಕೋನ ಸೈನ್ಯಬಲದಿಂದ ಸ್ಥಾಪಿತವಾದ ಸರಕಾರಕ್ಕೆ ಯುಕ್ತರಾಷ್ಟ್ರದಲ್ಲಿ ಪ್ರವೇಶ ಕೊಡಬಾರದೆಂದು ನಿರ್ಧರಿಸಿದರು. ಕಟ್ಟುನಿಟ್ಟಾದ ಈ ಗೊತ್ತುವಳಿಯಿಂದ ಸ್ಪೇನದಲ್ಲಿ ಫ್ರಾಂಕೋನ ಸಿಂಹಾಸನ ತತ್ತರಿಸತೊಡಗಿದೆ. ಅರಸುಪಟ್ಟಕ್ಕೆ ಕೈಯೊಡ್ಡಿರುವ ಡಾನ್ ಜುವಾನನ ಕನಸು ನನಸಾಗಬಹುದೆಂದೂ ಸ್ಪೇನದಲ್ಲಿ ರಾಜಸತ್ತೆಯನ್ನು ಘೋಷಿಸಿ ಫ್ರಾಂಕೋ ರಾಜೀನಾಮೆ ಕೊಡುವದು ಕೇವಲ ಕೆಲ ವಾರಗಳೊಳಗಿನ ಮಾತೆಂದೂ ಬ್ರಿಟಿಶ ತಜ್ಞರ ಅಭಿಮತ. ಫ್ರಾಂಕೋ ಸೋಲಿಸಿದ ಪ್ರಜಾರಾಜ್ಯ ಸರಕಾರದ ಮಂತ್ರಿಗಳು ಯುರೋಪದಲ್ಲಿ ತಮ್ಮ ಚಟುವಟಿಕೆಗಳನ್ನು ತೀವ್ರತರವಾಗಿ ಪ್ರಾರಂಭಿಸಿದ್ದಾರೆ.

ಆಹಾರದ ಕೂಗು

ಜಾಗತಿಕ ಆಹಾರ ಕೊರತೆಯ ಕೂಗು ಇದೀಗ ಎಲ್ಲ ಘಟನೆಗಳನ್ನೂ ಹಿಂದೆ ತಳ್ಳಿ ತಾನೇ ತಾನಾಗಿ ಮೆರೆಯುತೊಡಗಿದೆ. ಯು[illegible]ಕ್ತರಾಷ್ಟ್ರ ಸಭೆಯ [illegible] ಕಚ್ಚಾಟಗಳು ಕೂಡ ಈಗ [illegible]ದೂ[illegible]ಟ್ಟವೆ. ಪಾರ್ಲಮೆಂಟಿನಲ್ಲಿ ಬ್ರಿಟನದಲ್ಲಿ ರೊಟ್ಟಿಯ ಪೂರೈಕೆಯ ಕಡಿತವಾಗುವದೆಂಬ ಹೇಳಿಕೆ ಕೊಡಲ್ಪಟ್ಟಿತು. ಬ್ರಿಟಿಶ ಪತ್ರಿಕೆಗಳು ಈ ಆಹಾರ ಕೊರತೆಗೆ ಮಹತ್ವವಿತ್ತು ಲೇಖನಗಳನ್ನು ಬರೆಯುತ್ತಿರುವರಲ್ಲದೆ ಹಿಂದೀ ಆಹಾರ ಪರಿಸ್ಥಿತಿಯ ಮೇಲೆ ಬಹಳ ಬೆಳಕು ಚಲ್ಲತೊಡಗಿವೆ. ಅಮೇರಿಕನ್ ಅಧ್ಯಕ್ಷ ಟ್ರೂಮನ್ನರು ಆಹಾರದ ಮಿತವ್ಯಯಕ್ಕಾಗಿ ಒಂಭತ್ತು ಮುದ್ದೆಗಳ ಕಾರ್ಯಕ್ರಮವೊಂದನ್ನು ಸಿದ್ಧಗೊಳಿಸಿದ್ದು ಗೋದಿಯಿಂದ ಮಾದಕ ದ್ರವ್ಯಗಳನ್ನು ಸಿದ್ಧಗೊಳಿಸುವದನ್ನು ಸೀಮಿತಗೊಳಿಸಬೇಕೆಂದು ವಾದಿಸಿದ್ದಾರೆ. ಬ್ರಿಟಿಶರ ಪ್ರಯತ್ನದಿಂದ ಯುಕ್ತರಾಷ್ಟ್ರ ಸಭೆಯಲ್ಲಿಯೂ ಈ ಪ್ರಶ್ನೆ ಎತ್ತಲ್ಪಟ್ಟಿದ್ದು, ಜಾಗತಿಕ ಆಹಾರ ಸಮಸ್ಯೆಯನ್ನೆದುರಿಸಲು ಯುಕ್ತರಾಷ್ಟ್ರ ಸಂಘ ಮುಂದಾಗಬೇಕೆಂದು ಪ್ರಾರ್ಥಿಸಲ್ಪಟ್ಟಿದೆ.

ಡಚ್ಚರ ಕೊಡುಗೆ

ಯುಕ್ತರಾಷ್ಟ್ರ ಭದ್ರತಾಮಂಡಲದಲ್ಲಿ ಇಂಡೊನೇಶಿಯಾದ ಪ್ರಶ್ನೆ ಮಂಡಿಸಲ್ಪಟ್ಟಾಗಲೆ ಮತ್ತು ಜಾವಾದ ಡಚ್ ಗವರ್ನರ ವಾನ್ ಮೂಕರು ಇಂಡೊನೇಶಿಯಾದಲ್ಲಿ ಪ್ರಜಾರಾಜ್ಯ ಸರಕಾರದ ಪ್ರತಿನಿಧಿಗಳೊಡನೆ ಮಾತುಕತೆ ಆರಂಭಿಸಿದ ಹೊತ್ತಿಗೇ ಡಚ್ ಸರಕಾರದವರು "ಘೋಷಣೆಯ ಹೇಳಿಕೆ"ಯೊಂದನ್ನು ಹೊರಡಿಸಿ ಇಂಡೊನೇಶಿಯಾಕ್ಕೆ "ಕೊಡುಗೆ"ಯೊಂದನ್ನು ಕೊಡಮಾಡಿದ್ದಾರೆ.

ಇಂಡೊನೇಶಿಯಾದ ಪ್ರಜೆಗಳಿಗೆ ಒಡನೆ ಸಾಮಂತ ಸ್ವರಾಜ್ಯವನ್ನೂ ನದರ್ಲಂಡ್ಸ (ಡಚ್) ಸರಕಾರದೊಡನೆ ಪಾಲುಗಾರಿಕೆಯನ್ನೂ ಕೊಡಬೇಕೆಂದು ನಿರ್ಧರಿಸಿದ್ದಾಗಿ ಆ "ಹೇಳಿಕೆ" ಉಸುರುತ್ತದೆ.

"ಇಂಡೊನೇಶಿಯಾದ ಜನರನ್ನು" ತಮ್ಮ ರಾಜಕೀಯ ಭವಿತವ್ಯವನ್ನು ಸ್ವೇಚ್ಛೆಯಿಂದ ನಿರ್ಣಯಿಸಿಕೊಳ್ಳಲು ಸಮರ್ಥರನ್ನಾಗಿ ಮಾಡಬೇಕೆಂದು ಸರಕಾರದ ಅಭಿಪ್ರಾಯ" ಎಂದು ಆ ಹೇಳಿಕೆ ಹೇಳಿ ಅದಕ್ಕಾಗಿ ಏಳು ಮುದ್ದೆಗಳ ಕಾರ್ಯಕ್ರಮವನ್ನು ಸೂಚಿಸುತ್ತದೆ.

ಈ ಭವಿತವ್ಯ ನಿರ್ಣಯದ "ಸಾಮರ್ಥ್ಯ" ಈಗಲೆ ಬಂದಿದೆಯೆಂದಲ್ಲ. ಆ ಸಾಮರ್ಥ್ಯ ಬರುವವರೆಗೆ ನದರ್ಲಂಡ್ಸ ಸರಕಾರ ಮತ್ತು ಇಂಡೊನೇಶಿಯಾದ "ಪ್ರಜಾತಂತ್ರಾತ್ಮಕ ಪಾಲುಗಾರಿಕೆ"ಯ ತಳಹದಿಯಲ್ಲಿ ಇಂಡೊನೇಶಿಯಾದ ಆಡಳಿತೆಗೆ ಒಂದು "ಪದ್ಧತಿ"ಯನ್ನು ಇಂಡೊನೇಶಿಯನ್ ಪ್ರಮುಖರ ಸಹಕಾರದಿಂದ ಸಿದ್ಧಗೊಳಿಸಲಾಗುವದು. ಈ ಮಧ್ಯಾಂತರ ಅವಧಿಯೆಷ್ಟೆಂದು ಆ ಹೇಳಿಕೆಯಲ್ಲಿ ಉಕ್ತವಾಗಿಲ್ಲ. ಆ ಅವಧಿ ಮುಗಿದ ನಂತರ ಡಚ್ಚರೊಡನೆ ಇದೇ ಸಂಬಂಧವನ್ನುಳಿಸಿಕೊಳ್ಳಬೇಕೋ ಬೇಡವೋ ಸ್ವೇಚ್ಛೆಯಿಂದ ನಿರ್ಣಯಿಸುವ ಕಾಲ ಬಂದಿದೆಯೋ ಇಲ್ಲವೊ ಎಂಬುದನ್ನು ಪರಸ್ಪರ ವಿಚಾರದಿಂದ ಅಥವಾ ಬೇರೆಯವರ ಮಧ್ಯಸ್ಥಿಕೆಯಿಂದ ನಿರ್ಣಯಿಸಬಹುದು.

ಮೇಲೆ ಹೇಳಿದ "ಆಡಳಿತ ಪದ್ಧತಿ"ಯನ್ನೇ ೭ ಮುದ್ದೆಗಳು ವಿವರಿಸುತ್ತವೆ. ಇಂಡೊನೇಶಿಯನ್ ಜನರ ಬಹುಮತವುಳ್ಳ ಪ್ರಜಾತಂತ್ರಾತ್ಮಕ ಪ್ರಾತಿನಿಧಿಕ ಸಂಸ್ಥೆಯ ನಿರ್ಮಾಣ, ಆ ಸಂಸ್ಥೆಯಲ್ಲಿನ ಪ್ರಾತಿನಿಧ್ಯಕ್ಕನುಗುಣವಾದ ಪ್ರಾತಿನಿಧ್ಯವುಳ್ಳ ಮಂತ್ರಿಮಂಡಲ, ಡಚ್ ಸಾಮ್ರಾಜ್ಞಿ (ಅಥವಾ ಸಮ್ರಾಟ)ಗೆ ಹೊಣೆಗಾರನಾದ ಸರಕಾರದ ಮುಖ್ಯಸ್ಥ, ಅವನಿಗೆ ಕೆಲವು ವಿಶೇಷಾಧಿಕಾರಗಳು—ಇಷ್ಟು ಆಂತರಿಕ ಆಡಳಿತೆಯ ವ್ಯವಸ್ಥೆಗಾಗಿ. ಇಡೀ ಸಾಮ್ರಾಜ್ಯಕ್ಕೆ ಹೊಂದಿಕೆಯಾದ ವಿಷಯಗಳ ನಿರ್ಣಯಕ್ಕೆ ಸಾಮ್ರಾಜ್ಯದ ವಿವಿಧಾಂಗಗಳ ಪಾರ್ಲಮೆಂಟುಗಳಿಂದಾರಿಸಿದ ಕೇಂದ್ರ ಮಂತ್ರಿಮಂಡಲವನ್ನು ಸೂಚಿಸಲಾಗಿದೆ.

ಈ ಕೊಡುಗೆಯ ಬಗ್ಗೆ ಇಂಡೊನೇಶಿಯನ್ ಪ್ರಮುಖರು [illegible] ಏನೂ [illegible]ಲ್ಲ. ಇಂಡೊನೇಶಿಯನ್ [illegible] ಸರಕಾರ [illegible]ಮಂತ್ರಿ ಶಾರಿಯಾರರಿಗೆ ಮಾತುಕತೆ ನಡೆ[illegible]ಪೂರ್ಣಾಧಿಕಾರವಿತ್ತಿದೆ. ಬ್ರಿಟಿಶ [illegible]ರಿ ಗೃಹದಲ್ಲಿ ಮಾತುಕತೆ ನಡೆ[illegible].

ಈಗಿರುವ ಪ್ರಜಾರಾಜ್ಯ ಸರಕಾರಕ್ಕೆ ಅಂಗೀಕಾರ ಕೊಡಬೇಕು ಮತ್ತು ಒಡನೆ ಇಂಡೊನೇಶಿಯಾದ ಸ್ವಯಂನಿರ್ಣಯಾಧಿಕಾರವನ್ನು ಒಪ್ಪಬೇಕು, ಎಂಬುದು ಇಂಡೊನೇಶಿಯಾದ ಬೇಡಿಕೆಯಾಗಿರುವಾಗ ಈ ಸಾಮಂತ ಸ್ವರಾಜ್ಯದಿಂದ ಇಂಡೊನೇಶಿಯನರು ತೃಪ್ತರಾಗುತಿದ್ದರೆ ಆಶ್ಚರ್ಯ.

ಕಮ್ಯುನಿಸ್ಟರು ಹೋಗುವದಿಲ್ಲ !

ರಶಿಯಾದಲ್ಲಿ ಕಳೆದವಾರ ಪ್ರಚಂಡ ಚುನಾವಣೆಗಳು ಜರಗಿದವು. ಸುಮಾರು ೧೦ ಕೋಟಿ ಸೋವಿಯೆಟ್ ನಾಗರಿಕರು ತಮ್ಮ ರಾಜಕೀಯ ಜಾಗ್ರತಿಯನ್ನು ವ್ಯಕ್ತಗೊಳಿಸುವ ಸಲುವಾಗಿ ಮತಗಟ್ಟೆಗಳಿಗೆ ಹೋಗಿ ಮತಹಾಕಿ ಬಂದರು. ಮತಾಧಿಕಾರವುಳ್ಳವರಲ್ಲಿ ನೂರಕ್ಕೆ ೯೦ ಕ್ಕೂ ಮಿಕ್ಕಿ ಮತದಾನ ಮಾಡಿರಬೇಕೆಂದು ಊಹಿಸಲಾಗಿದೆ. ಮಾಸ್ಕೋದ ಗಡಿಬಿಡಿಯ ಬೀದಿಗಳಿಂದ ಹಿಡಿದು ಸಾಮೀರದ ನಿರ್ಜನ ಪ್ರದೇಶಗಳ ವರೆಗೆ ಈ ಭೂಮಿಯ ಆರರಲ್ಲೊಂದಂಶದ ಜನರು ಮತದಾನ ಮಾಡಿದರು. ಮತದಾನದ ಪರಿಣಾಮವನ್ನು ತಿಳಿಸುವ ತಂತಿಗಳು, ಆಕಾಶವಾಣಿ ಸುದ್ದಿಗಳು ಮಾಸ್ಕೊದಲ್ಲಿ ಮುಸುರಿದವು.

ಚುನಾವಣೆಯ ಮುಂಚಿನ ಭಾಷಣದಲ್ಲಿ ವಿದೇಶಮಂತ್ರಿ ಮೊಲಟೊವರು ತಮ್ಮ ವಿದೇಶೀ ಗೆಳೆಯರನ್ನುದ್ದೇಶಿಸಿ ಸ್ಪಷ್ಟವಾಗಿ ಹೇಳಿದರು: ಈ ಚುನಾವಣೆಗಳಲ್ಲಿ ಕಮ್ಯುನಿಸ್ಟರು ಹೊರಟುಹೋಗಿ ಬೇರಾವುದರೂ ಪಕ್ಷ ಅಧಿಕಾರಕ್ಕೆ ಬರಲೆಂದು ಹಾರೈಸುವವರು ವಿದೇಶಗಳಲ್ಲಿದ್ದಾರೆ. ಆದರೆ ಅವರ ಆಸೆ ನಿರಾಶೆಯಾಗುವದೆಂದು ಹೇಳಿಬಿಡುತ್ತೇನೆ" ಎಂದು. "ನಾವು ನಮ್ಮ ಅಂತರಿಕ ಶತ್ರುಗಳನ್ನೆಲ್ಲ ನಾಶಮಾಡಿದ್ದೇವೆ" ಎಂದು ಅವರು ಸ್ಪಷ್ಟಗೊಳಿಸಿದರು. ಅರ್ಥಾತ್ ಕಮ್ಯುನಿಸ್ಟರನ್ನು ಚುನಾವಣೆಯಲ್ಲಿ ಎದುರಿಸುವವರು ರಶಿಯಾದಲ್ಲಿ ಯಾರೂ ಉಳಿದಿಲ್ಲ. ಜಾಗತಿಕ ಶಾಂತಿ ಸುವ್ಯವಸ್ಥೆಗಾಗಿ ಯುಕ್ತರಾಷ್ಟ್ರಸಂಸ್ಥೆಯ ನಿರ್ಮಾಣಕ್ಕೆ ರಶಿಯನ್ನರು ಸರ್ವಾತ್ಮನಾ ಸಹಾಯ ನೀಡುವರು. ಆದರೆ ಅವರು ಕೆಂಪು ಸೇನೆ ಮತ್ತು ಕೆಂಪು ನೌಕಾಪಡೆಯ ಬೆಳವಣಿಗೆಯನ್ನು ಅಲಕ್ಷಿಸುವಂತಿಲ್ಲ.

ದಂಡನಾಯಕ ಸ್ಟಾಲಿನರು ತಮ್ಮ ಮತದಾನ ಸಂಘದಲ್ಲಿ—ಕಳೆದ ಸಪ್ಟೆಂಬರದಲ್ಲಿ ವಿಜಯ ಭಾಷಣ ಮಾಡಿದ ನಂತರ ಇದೇ ಮೊದಲಾಗಿ—ಚುನಾವಣೆ ಭಾಷಣ ಮಾಡುತ್ತಿದ್ದಾಗ ೮ ನಿಮಿಷಗಳ ವರೆಗೆ ಜನಸಂದಣಿಯ ಚಪ್ಪಾಳೆಯ ಸದ್ದಳಿಯಲಿಲ್ಲ. ಸ್ಟಾಲಿನ್ನರು ಭಾಷಣ ಮಾಡಿ ಯುದ್ಧಗಳಿಗೆ ಹೇಗೆ ಬಂಡವಳಶಾಹಿಯೇ ಕಾರಣ ಎಂಬುದನ್ನು ಸಭಿಕರಿಗೆ ವಿವರಿಸಿದರು. ಬಂಡವಳಶಾಹಿ ಇದ್ದಷ್ಟು ಕಾಲ ಯುದ್ಧವೂ ಅನಿವಾರ್ಯವೆಂದು ಅವರು ಸಾರಿದರು. ರಶಿಯಾದಲ್ಲಿ ಕಮ್ಯುನಿಸ್ಟರು ನಡೆಸಿದ ಆಡಳಿತೆ ಅಪಾಯಕರ ಪ್ರಯೋಗವೆಂದು ಅವರ ವೈರಿಗಳು ಹೇಳುತ್ತ ಬಂದುದು ಈ ಯುದ್ಧಕಾಲದಲ್ಲಿ ಸುಳ್ಳೆಂದು ಸಿದ್ಧವಾಯಿತು. ಎಂದು ಹೇಳಿ ಪುನರ್ರಚನೆಯ ಪಂಚವಾರ್ಷಿಕ ಯೋಜನೆಯನ್ನು ವಿವರಿಸುತ್ತ ದಿನ ಬಳಕೆಯ ಸಾಮುಗ್ರಿಗಳ ಉತ್ಪಾದನೆಯನ್ನು ಹೆಚ್ಚಿಸಲಾಗುವದೆಂದೂ ವೈಜ್ಞಾನಿಕ ವಿಷಯದಲ್ಲಿ ವಿದೇಶೀಯರಿಗೆ ಸರಿಮಿಗಿಲಾಗಿ ವಿಕಾಸವನ್ನು ಸಾಧಿಸುವದಕ್ಕೆ ವಿಶೇಷ ಲಕ್ಷ್ಯ ಕೊಡಲಾಗುವದೆಂದೂ ಹೇಳಿದಾಗ ಸಂತೋಷದ ಚಪ್ಪಾಳೆಗಳೇ ಚಪ್ಪಾಳೆಗಳು ನಿನದಿಸಿದವು.

* * *

ಅಮೇರಿಕೆಯ ಅಧ್ಯಕ್ಷ ಟ್ರೂಮನ್ನರು ಇನ್ನೊಮ್ಮೆ ಅಧ್ಯಕ್ಷ ಪಟ್ಟಕ್ಕೆ ಸ್ಪರ್ಧಿಸುವದಿಲ್ಲೆಂದು ತಿಳಿದುಬಂದಿದೆ.

* * *

ಅಮೇರಿಕನ್ ಶಾಸನ ಸಭೆ (ಕಾಂಗ್ರೆಸ್ಸು) "ಸಿಟ್ಟಿನ ಮನೋವೃತ್ತಿ"ಯಲ್ಲಿರುವುದರಿಂದ ಹಿಂದೀಯರಿಗೆ ಅಮೇರಿಕೆಯಲ್ಲಿ ನಾಗರಿಕ ಹಕ್ಕು ನೀಡುವ ಮಸೂದೆಯನ್ನು ಅದರ ಸಿಟ್ಟಿಳಿಯುವ ವರೆಗೂ ಮುಂದೊತ್ತಬಾರದೆಂದು ವಿದೇಶ ಖಾತೆ ನಿರ್ಧರಿಸಿದೆಯಂತೆ.

* * *

ಇಂಗ್ಲಂಡಿನ ಕೇಂಬ್ರಿಜ್ ವಿದ್ಯಾರ್ಥಿ ಸಂಘದಲ್ಲಿ ಇದೆ ಮೊದಲನೆ ಬಾರಿ ಹಿಂದೀ ಸ್ವಾತಂತ್ರ್ಯವನ್ನು ಬೆಂಬಲಿಸುವ ಗೊತ್ತುವಳಿ ಸ್ವೀಕೃತವಾಯಿತು. ಹಿಂದುಸ್ತಾನ ಸ್ವಾತಂತ್ರ್ಯಕ್ಕೆ ಇನ್ನೂ ಕಳಿತಿಲ್ಲವೆಂಬ ಕಾನ್ಸರ್ವೇಟಿವ್ ವಿದ್ಯಾರ್ಥಿ ಸ್ಮಿಥನ ನಿರ್ಣಯ ಹಾರಿ ಹೋಗಿ ಹಿಂದೀ ವಿದ್ಯಾರ್ಥಿ ರಾಜಗೋಪಾಲರು ಮಂಡಿಸಿದ ಒಡನೆ ಸ್ವಾತಂತ್ರ್ಯ ನೀಡಬೇಕೆಂಬ ಗೊತ್ತುವಳಿ ಸ್ವೀಕೃತವಾಯಿತು. ಹಿಂದುಸ್ತಾನದಲ್ಲಿ ಆಯ. ಸಿ. ಎಸ್. ಅಧಿಕಾರಿಗಳಾಗಿದ್ದು ಹಿಂದೀ ವಿಷಯಗಳನ್ನು ಕುರಿತು ಹಲವು ಪುಸ್ತಕ ಬರೆದಿರುವ ಅರ್ಥರ ಮೂನರು ಹಿಂದೀ ಸ್ವಾತಂತ್ರ್ಯಕ್ಕೆ ಬೆಂಬಲವಿತ್ತು ಮಾತಾಡಿದರು.

● ಒಂದು ದಿನದಲ್ಲಿ ಮನೆ

ಹೊಸ ತೆರದ ಸ್ವಸಂಪೂರ್ಣವಾದ ಮನೆಯನ್ನು ಒಂದು ದಿನದಲ್ಲಿ ಕಟ್ಟಲಾಗುವುದೆಂದು ನೀವು ನಂಬಬಹುದೆ? ಅದೂ ಮುನ್ನೂರೇ ರೂಪಾಯಿಗಳಲ್ಲಿ!

ಮೊದಲು ನೀವು ಇದನ್ನು ನಂಬಲಾರಿರಿ. ಅಥವಾ ಈ ಪವಾಡವನ್ನು ಮಾಡಬೇಕಾದರೆ ಅಲ್ಲಾವುದ್ದೀನನ ಲಾಂದ್ರವು ಬೇಕಾಗುವುವೆಂದು ನೀವು ಹೇಳಬಹುದು. ಅದೇನೂ ಬೇಕಿಲ್ಲ. ಮುಲ್ಕಿ ಕೈಗಾರಿಕೆಗಳ ಪ್ರದರ್ಶನದಲ್ಲಿ ಸಾವಿರಾರು ಪ್ರೇಕ್ಷಕರಿಗೆ "ಒಂದು ದಿನ"ದಲ್ಲಿ ಮನೆಯನ್ನು ಕಟ್ಟುವುದು ಸಾಧ್ಯವೆಂದು ತೋರಲಾಯಿತು. ಈ ಸಿಮೆಂಟ್ ಕಾಂಕ್ರೀಟಿನ ಕಟ್ಟಡವು ಹೋದ ವರ್ಷದ ಪ್ರದರ್ಶನದಲ್ಲಿ ಅತ್ಯಂತ ಆಕರ್ಷಕವಾದ ಪ್ರದರ್ಶಿತವಾಗಿತ್ತು. ಸಾವಿರಾರು ಜನರು, ಶೀಘ್ರದಲ್ಲಿಯೆ ಬಡವರಿಗಾಗಿ ಆದರ್ಶ ಮನೆಯಾಗುವ ಇದರ ಕಟ್ಟಡವನ್ನು ನೋಡಿ ಮೆಚ್ಚಿದರು. ಈ ಮನೆಯ ಪ್ರಥಾನದ ಕೀರ್ತಿ ಹೈದರಾಬಾದು ನಗರ ಪರಿಷ್ಕರಣ ಸಭೆಗೆ ಸಲ್ಲುವುದು.

ಆದರ್ಶ ಗೃಹ

ಹೈದರಾಬಾದು ಪಟ್ಟಣವನ್ನು ಅಂದಗೊಳಿಸುವುದಕ್ಕಾಗಿ ಕೆಲವು ವರ್ಷಗಳ ಹಿಂದೆ ನಗರ ಪರಿಷ್ಕರಣ ಸಭೆಯನ್ನು ರಚಿಸಲಾಯಿತು. ಈ ಗುರಿಯನ್ನು ಸಾಧಿಸುವುದಕ್ಕಾಗಿ ಕೊಳಕು ಓಣಿಗಳನ್ನು ಮತ್ತು ಕುರೂಪವಾಗಿ ಕಾಣುವ ದಟ್ಟವಾದ ಮನೆಗಳ ಗುಂಪುಗಳನ್ನು ತೆಗೆದು ಸ್ವಚ್ಛಮಾಡುವುದು ಇದರ ಯೋಜನೆಗಳಲ್ಲೊಂದಾಯಿತು. ಪಟ್ಟಣದಲ್ಲಿ ಈಗಾಗಲೆ ಇದು ಸಾವಿರಾರು ಸಣ್ಣ ಸಣ್ಣ ಮನೆಗಳನ್ನು ಕಟ್ಟಿದೆ. ಕಡಿಮೆ ಉತ್ಪನ್ನದ ಜನಗಳಿಗಾಗಿ ಇವೆ ಅವು. ಎರಡನೆಯ ತರಗತಿಯ ಆದರ್ಶ ಗೃಹಗಳೆನಿಸುವ ಈ ಮನೆಗಳಿಗಾಗಿ ಒಂದೊಂದಕ್ಕೆ ಎರಡು ಸಾವಿರ ರೂಪಾಯಿ ಖರ್ಚಾಗಿವೆ. ತಿಂಗಳ ಬಾಡಿಗೆ ೧೦॥ ರೂಪಾಯಿ.

ಬಡವರಿಗಾಗಿ ಮಾದರಿಯ ಮನೆಗಳು

ಹಳ್ಳಿಗರಿಗಾಗಿ ಸಭೆ ಮಾಡಿದ ಹೊಸ ತೆರೆದ ಆದರ್ಶ ಗೃಹಗಳ ಯೋಜನೆಗಳು ಇನ್ನೂ ಮಹತ್ವದುವಾಗಿವೆ. ಅವು ಸೌಲಭ್ಯ, ಸೌಕರ್ಯ, ಸ್ವಚ್ಛತೆ ಮತ್ತು ಆರೋಗ್ಯಗಳಿಂದ ಕೂಡಿವೆ. ಈ ಆದರ್ಶ ಗೃಹಗಳನ್ನು ಒಂದು ದಿನದಲ್ಲಿ ಕಟ್ಟಬಹುದು. ಇದಕ್ಕೆ ಇಟ್ಟಿಗೆ, ಸುಣ್ಣ, ಕಲ್ಲು, ಉಪ್ಪಾರರು, ಬಡಿಗರು, ಗಾಣ ಮತ್ತು ಎತ್ತುಗಳು ಬೇಕಿಲ್ಲ. ಬೇಕಾದುವೆಂದರೆ ಉಸುಕು, ಬೆಣಚಿಗಲ್ಲು, ಹರಳುಗಳು ಅಥವಾ ಬಿಸಗಣ್ಣಿಗಳು. ಸಿಮೆಂಟು, ಬಾಗಿಲು ಮತ್ತು ಕಿಟಕಿಗಳು, ೨೫೦ ಘನ ಅಡಿ ಬೆಣಚಿಗಲ್ಲು, ೧೪೦ ಘನ ಅಡಿ ಉಸುಕು, ೩೫ ಚೀಲ ಸಿಮೆಂಟ ಮತ್ತು ೫೩ ಚದರು ಅಡಿ ಬಾಗಿಲು ಮತ್ತು ಕಿಟಕಿಗಳಿಂದ ನೀವು ಮನೆಯನ್ನು ಕಟ್ಟಬಲ್ಲಿರಿ. ಇದಕ್ಕೆ ಬಲ್ಲ ಉಪ್ಪಾರರ ಅವಶ್ಯಕತೆಯೂ ಇಲ್ಲ. ನೀವು ಮತ್ತು ನಿಮ್ಮ ಮನೆಯವರು ಎಲ್ಲ ಕೆಲಸವನ್ನು ಮಾಡಬಹುದು.

ವಿವರಗಳು

ಇದು ಸರಕಾರದ ಸಿಮೆಂಟ್ ಕಾಂಕ್ರೀಟಿನ ಮನೆ. ಇದರಲ್ಲಿ ಒಂದು ಕೊಟ್ಟಿಡಿ, ಒಂದು ಅಡಿಗೆಮನೆ ಮತ್ತೊಂದು ಬಂಕವಿರುವುದು. ಗೋಡೆ ಮತ್ತು ಮಾಳಿಗೆಗಳು ಸಿಮೆಂಟ್ ಕಾಂಕ್ರೀಟಿನವು ತಳಪದಿ ಒಂದಡಿ ಆಳ ಮಾತ್ರ. ಹನ್ನೆರಡು ಗಂಟೆ ಕಷ್ಟಪಟ್ಟರೆ ಒಂದು ಮನೆ ಸಿದ್ಧವಾಗುವುದು. ಒಣಗಬೇಕಾದರೆ ಮತ್ತೆ ೧೫ ದಿವಸ ಬೇಕು, ೨೦ನೆ ದಿನ ಇದು ಪ್ರವೇಶಕ್ಕೆ ಸಿದ್ಧವಾಗುವುದು. ಮುನ್ನೂರು ರೂಪಾಯಿಗಳಿಂದ ಸ್ವಚ್ಛವೂ, ಇಳಿಗೆ ನಿಲುಕದುದೂ, ಆರೋಗ್ಯಕರವೂ ಆದ ಮನೆಯನ್ನು ನೀವು ಕಟ್ಟಬಹುದು. ದಿನದಿನಕ್ಕೆ ಅದು ಗಟ್ಟಿಯಾಗುತ್ತ ಹೋಗುವುದು.

ಈ ಮನೆಗಳಿಗೆ ಫ್ಲಶ್ ಔಟ್ ಕಕ್ಕಸಗಳಿರುವುವೆಂದು ಹೇಳಿದರೆ ನೀವು ಆಶ್ಚರ್ಯಪಡಬೇಡಿ. ಹಳ್ಳಿಗಳಲ್ಲಿ ಏಕೆ, ಪಟ್ಟಣಗಳಲ್ಲೂ ಗಂಡು ಮತ್ತು ಹೆಣ್ಣುಮಕ್ಕಳು ಹೊಲ ಮತ್ತು ಅಕ್ಕಪಕ್ಕದ ಹಾಳು ಮನೆಗಳನ್ನು ಕಕ್ಕಸವನ್ನಾಗಿ ಉಪಯೋಗಿಸುವರು. ಇದರಿಂದ ಅನಾರೋಗ್ಯವು ಹೆಚ್ಚುವುದು ಸಾಂಕ್ರಾಮಿಕ ರೋಗಗಳು ಹುಟ್ಟುವವು. ನಗರ ಪರಿಷ್ಕರಣ ಸಭೆ ಸಣ್ಣ ಕುಟುಂಬವೊಂದಕ್ಕೆ ಹತ್ತು ರೂಪಾಯಿಗಳ ಖರ್ಚಿನಿಂದ ನೀರಿನ ಫ್ಲಶ್ ಔಟ್ ಕಕ್ಕಸವನ್ನು ವಿಧಾಯಿಸಿದೆ. ಹಳ್ಳಿಯಲ್ಲಿ ಸಿಕ್ಕುವ

ಕಲಕತ್ತೆಯಲ್ಲಿ ಲಾಠಿ ಪ್ರಹಾರ ಹಾಗು ಗೋಳೀಬಾರು

೧೪ ಜನರ ಮರಣ ೧೭೦ ಜನರಿಗೆ ಗಾಯ

ಕಲಕತ್ತಾ ತಾ. ೧೧— ಹಿಂ. ರಾ. ಸೈನ್ಯದ ಕ್ಯಾಪ್ಟನ್ ರಶೀದರಿಗೆ ವಿಧಿಸಿದ ಶಿಕ್ಷೆ ನಿಷೇಧಿಸುವದಕ್ಕೆ ಈ ಹೊತ್ತು ಮಧ್ಯಾಹ್ನ ವೆಲಿಂಗಟನ್ ಚೌಕದಲ್ಲಿ ವಿದ್ಯಾರ್ಥಿಗಳ ಸಭೆ ಸೇರಿತ್ತು. ಅಲ್ಲಿ ಅನೇಕರ ಭಾಷಣಗಳಾಗಿ ರಶೀದ ಹಾಗು ಇನ್ನಿತರ ಕೈದಿಗಳನ್ನು ಕೂಡಲೆ ಬಿಡಲು ಕೇಳಲಾಯಿತು. ಆ ಮೇಲೆ ವಿದ್ಯಾರ್ಥಿಗಳು ಕಾಲೇಜ ರಸ್ತೆ, ಹ್ಯಾರಿಸನ್ ರಸ್ತೆ ಹಿಡಿದು ಡಾಲಹೌಸಿ ಚೌಕಕ್ಕೆ ಮೆರವಣಿಗೆಯಿಂದ ನಡೆದರು. ಅಲ್ಲಿ ಪೋಲೀಸರು ಅವರನ್ನು ತಡೆದು ಲಾಠಿ ಪ್ರಹಾರ ಮಾಡಿದರು. ಲಾಠಿ ಪ್ರಹಾರದ ಸುದ್ದಿ ಊರಲ್ಲಿ ಹಬ್ಬಿದ ಕೂಡಲೆ ಅಂಗಡಿಗಳೆಲ್ಲ ಮುಚ್ಚಿದವು. ಕೆಲವು ಕಡೆಗೆ ಟ್ರಾಮು, ಬಸ್ಸು ಮೊದಲಾದ ವಾಹನಗಳ ಓಡಾಟ ನಿಂತುಹೋಯಿತು. ಸಂಜೆಗೆ ವಿದ್ಯಾರ್ಥಿಗಳು ಮತ್ತೆ ಮೆರವಣಿಗೆಯಿಂದ ಹೊರಟರು. ಚಿತ್ತರಂಜನ ಅವೆನ್ಯೂ ಬಳಿ ಪೋಲೀಸರು ಗೋಳೀಬಾರ ಮಾಡಿದರು. ಜನರು ೧೨ ಮಿಲಿಟರಿ ಲಾರಿಗಳನ್ನು ಸುಟ್ಟರು.

ಪೋಲೀಸರ ನಿಷ್ಕರುಣ ಹಲ್ಲೆ

ಬಂಗಾಲ ವಿದ್ಯಾರ್ಥಿ ಮಹಾಮಂಡಳದ ಜನರಲ ಸೆಕ್ರೆಟರಿಗಳಾದ ಎ ಎಸ್ ಭಟ್ಟಾಚಾರ್ಜಿಯವರು ಈ ಸಂಬಂಧದಲ್ಲಿ ಒಂದು ಪ್ರಕಟನೆ ಹೊರಡಿಸಿ ಈ ರೀತಿ ತಿಳಿಸಿದ್ದಾರೆ. ಮೆರವಣಿಗೆಯು ಡಾಲಹೌಸಿ ಚೌಕಿಗೆ ಹೋದ ಕೂಡಲೆ ಪೋಲೀಸರು ಅದನ್ನು ತಡೆದು ಶಾಂತ ರೀತಿ ಹೋಗುವಿರಾ ಎಂದು ಕೇಳಿದರು. ಅದಕ್ಕೆ ಶಾಂತ ರೀತಿ ಹೋಗುವೆವಾಗಿ ಉತ್ತರ ಕೊಡಲಾಯಿತು. ಆದರೂ ಮೆರವಣಿಗೆ ಮುಂದೆ ಬಿಡದ್ದರಿಂದ ವಿದ್ಯಾರ್ಥಿಗಳು ಅಲ್ಲಿಯೆ ಕುಳಿತುಕೊಂಡರು. ಸ್ವಲ್ಪ ಹೊತ್ತಿನ ಮೇಲೆ ಮುಸಲ್ಮಾನ ವಿದ್ಯಾರ್ಥಿಯೊಬ್ಬನು ಮಾತಾಡಲೆದ್ದನು ಆದರೆ ಅವನು ಭಾಷಣ ಮಾಡುವ ಪೂರ್ವದಲ್ಲಿ ಓರ್ವ ಹಿಂದಿ ಪೋಲೀಸ ಅಧಿಕಾರಿಯು "ನೀವು ತಿರುಗಿ ಹೋಗಿರಿ ಇಲ್ಲದಿದ್ದರೆ ನಾವು ನಾಶಮಾಡಿಬಿಡುವೆವು" ಎಂದು ಕೂಗಿದನು. ಕೂಡಲೆ ಲಾಠಿ ಪ್ರಹಾರ ಸುರುವಾಯಿತು. ೩೦೦ ಪೋಲೀಸರು, ಗುರಖಾ ಜನರು, ಸಾರ್ಜಂಟರು ಮೆರವಣಿಗೆಗಾರರ ಮೇಲೆ ಹರಿಹಾಯ್ದರು.

ಮರುದಿನ

ಕಲಕತ್ತಾ ತಾ ೧೨— ನಿನ್ನಿನ ಲಾಠಿ ಪ್ರಹಾರ ನಿಷೇಧಿಸಲು ಈ ಹೊತ್ತು ಪುನಃ ಹರತಾಳ, ಮೆರವಣಿಗೆ, ಸಭೆಗಳು ನಡೆದವು. ಭವಾನಿಪುರದಲ್ಲಿ ಮುಂಜಾನೆ ಜನರು ಕಸದ ಕುಂಡೆ ಮೊದಲಾದವುಗಳನ್ನು ರಸ್ತೆಗಳಲ್ಲಿ ಇಟ್ಟು ವಾಹನಗಳನ್ನು ನಿಲ್ಲಿಸಿದರು. ಚದುರಲು ಪೋಲೀಸರು ಅಜ್ಞಾಪಿಸಿದರೂ ಅವರು ಕದಲಲಿಲ್ಲ. ಅಶ್ರುವಾಯುವಿಗೂ ಅಂಜಲಿಲ್ಲ. ಕೊನೆಗೆ ಪೋಲೀಸರು ಲಾಠಿ ಪ್ರಹಾರ ಹಾಗು ಗೋಳೀಬಾರ ಮಾಡಿದರು. ಎರಡೂ ದಿನ ಕೂಡಿ ೧೪ ಜನ ಮರಣ ಹೊಂದಿದ್ದು ೧೭೦ ಜನರಿಗೆ ಗಾಯಗಳಾಗಿವೆ.

ಜನರು ಯುರೋಪಿಯನರನ್ನೂ ಪಾಶ್ಚಾತ್ಯ ವೇಷ ಧರಿಸಿದವರನ್ನೂ ತಡೆದು ವಾಹನಗಳಿಂದ

ಸಾಮಗ್ರಿಯಿಂದಲೆ ಈ ಕಕ್ಕಸವನ್ನು ಕಟ್ಟಬಹುದು. ಕೊಳವೆಗಳ ಬದಲು ಗಳಗಳು, ತೊಟ್ಟಿಗಳ ಬದಲು ಮಣ್ಣಿನ ಕೊಡಗಳು, ಇಳಿಜಾರಾದ ಸಿಮೆಂಟಿನ ಒಂದು ಜಗಲಿ ಇಷ್ಟಾದರೆ ಮುಗಿಯಿತು.

ಸಂಸ್ಥಾನದ ಹಳ್ಳಿ ... ಮಂತ್ರಿ ... ದರ್ಶ ಗೃಹಗಳನ್ನು ಕಟ್ಟಿಸುವ ... ನಾಲ್ವರು ತಮ್ಮ ... ವಿಚಾರದಲ್ಲಿ ಇದೆ. ಮಣ್ಣಿನ ಗುಡಿ... ಉಳಿದೆರಡು ಸ್ಥಳ... ವಾದ ಈ ಸಿಮೆಂಟಿನ ಮನೆಗಳ... ಕಾಂಗ್ರೆಸ ಪಕ್ಷದ ... ಗರನ್ನು ಹುರಿದುಂಬಿಸಿ ಅವರಿಗೆ ಸಹಾಯ... ...ಇದರು. ಪ್ರೊ... ಬೇಕು. ಇದು ಕಷ್ಟದ ಕೆಲಸ. ಏಕೆಂದರೆ ಮನೆ ಬದಲುಮಾಡುವುದು ಹಳ್ಳಿಗರಿಗೆ ಸೇರುವುದಿಲ್ಲ. ಆದರೆ ಈ ಮನೆಗಳ ಬೆಲೆ ಮತ್ತು ಮಿತವ್ಯಯವನ್ನು ಒಮ್ಮೆ ಅರಿತರೆ ಅದನ್ನು ಖಂಡಿತವಾಗಿ ಅವರು ಕಟ್ಟಿ ಅವುಗಳಲ್ಲಿ ಇರುವರು ಹೀಗಾದರೆ ನಮ್ಮ ಹಳ್ಳಿಗರ ಪರಿವರ್ತನೆ ಪ್ರಾರಂಭವಾಗುವುದು. —"ಹೈದರಾಬಾದ ಸಮಾಚಾರ"

ಇಳಿಸಿ ಜಯ ಹಿಂದ ಎಂದು ಘೋಷಿಸಿದ ಮೇಲೆ ಬಿಡುತ್ತಿದ್ದರು. ಗೊಂದಲದಲ್ಲಿ ಅಮೇರಿಕನ್ ಸೇನಾಧಿಕಾರಿ ಲೆ. ಗಾಬರ್ರವರ ಕೈ ಮುರಿದಿದೆ.

೧ ಲಕ್ಷ ಜನರ ಮೆರವಣಿಗೆ

ಮಧ್ಯಾಹ್ನ ೧ ಲಕ್ಷ ಜನರ ಮೆರವಣಿಗೆ ಹೊರಟಿತ್ತು. ಕಾಂಗ್ರೆಸ್, ಲೀಗ, ಕಮ್ಯುನಿಸ್ಟ, ಎಲ್ಲ ಪಕ್ಷದವರೂ ಭಾಗ ವಹಿಸಿದ್ದರು. ಅದು ಬೌ ಬಜಾರ ರಸ್ತೆಯಲ್ಲಿ ಹೋಗುತ್ತಿದ್ದಾಗ ಪೋಲೀಸ ಲಾರಿ ಬಂತು. ಜನರು ಅದನ್ನು ತಡೆದು ಅದರಲ್ಲಿಯ ಲಾಠಿಗಳನ್ನು ಅಪಹರಿಸಲು ಯತ್ನಿಸಿದರು. ಹಿಂದಿನ ಮಂತ್ರಿಗಳಾದ ಸುಹ್ರವರ್ದಿ ಹಾಗು ದಾಸ ಗುಪ್ತರು ಮೆರವಣಿಗೆಯ ಮುಂದಿದ್ದರು. ಅವರು ಕೂಡಲೆ ಬಂದು ಶಾಂತತೆ ಕಾಯ್ದರು. ಮೆರವಣಿಗೆ ಮುಂದಕ್ಕೆ ಸಾಗಿತು.

ಕಾಂಗ್ರೆಸ್ ಅಧ್ಯಕ್ಷರಾದ ಮೌಲಾನಾ ಆಝಾದರು ಒಂದು ಹೇಳಿಕೆ ಕೊಟ್ಟು ಗಲಭೆ ಬಗ್ಗೆ ವಿಷಾದ ವ್ಯಕ್ತ ಮಾಡಿರುವರು ಮತ್ತು ಮುಂದತನ ತಡೆಯಲು ನಾಗರಿಕರೆಲ್ಲ ಯತ್ನಿಸಬೇಕೆಂದು ಕೇಳಿಕೊಂಡಿರುವರು.

ಜನರ ಪುಂಡಾಟಿಕೆ

ಹಜಾರಾ ಪಾರ್ಕಿನಲ್ಲಿ ಪೋಲೀಸರ ಮೇಲೆ ಜನರು ಇಟ್ಟಂಗಿ ಒಗೆಯಹತ್ತಿದ್ದರಿಂದ ಪೋಲೀಸರು ಪುನಃ ಗೋಳೀಬಾರ ಮಾಡಿದರು ಮೂವರಿಗೆ ಗಾಯಗಳಾದವು. ಇದರಂತೆ ಬೌಬಜಾರದಲ್ಲಿ ಮಿಲಿಟರಿ ಟ್ರಕ್ಕಗಳು ಸುಡಲ್ಪಟ್ಟದ್ದರಿಂದ ಪೋಲೀಸರು ಅಶ್ರುವಾಯು ಉಪಯೋಗಿಸಿ ಜನರನ್ನು ಚದುರಿಸಿದರು. ಪೋಲೀಸರಲ್ಲಿ ಡೆಪ್ಯುಟಿ ಕಮೀಶನರ ಘೋಶಾ, ಅಸಿಸ್ಟಂಟ ಕಮೀಶನರ ಆರ್ ಎನ್. ಗುಪ್ತರವರಿಗೆ ಗಾಯಗಳಾಗಿವೆ.

ಎಸಪ್ಲನೇಡ ಜಂಕ್ಶನದಲ್ಲಿಯೂ ಪೋಲೀಸರು ಈ ಹೊತ್ತು ಸಂಜೆಗೆ ಮೂರು ಸಲ ಗೋಳೀಬಾರ ಮಾಡಬೇಕಾಯಿತು. ಜನರು ಪೋಲೀಸ ಲಾರಿ ಹಾಗು ಪ್ರಯಾಣಿಕರ ಮೇಲೆ ಅಲ್ಲಿ ದಾಳಿ ನಡಿಸಿದ್ದರು. ಕೆಲವು ಪೋಲೀಸರ ರುಮಾಲ ಕಸಿದುಕೊಂಡು ಬೆಂಕಿ ಹಚ್ಚಿದ್ದುದು ತಿಳಿಯುತ್ತದೆ.

ಜನರು ಕಾಲಿಘಾಟ ಟ್ರಾಮು ಡಿಪೋಕ್ಕೆ ಬೆಂಕಿ ಹಚ್ಚಿ ೯ ಟ್ರಾಮು ಸುಟ್ಟದ್ದಲ್ಲದೆ ಅಲ್ಲಿಯ ಹಣವನ್ನೂ ಲೂಟ ಮಾಡಿರುವರು. ಅಲ್ಲಿಯ ಪೋಸ್ಟ ಆಫೀಸಿಗೂ ಬೆಂಕಿ ಹಚ್ಚಲ್ಪಟ್ಟಿತು. ಒಂದು ರೇಲ್ವೆ ಬುಕಿಂಗ ಆಫೀಸ ಲೂಟ ಮಾಡಲ್ಪಟ್ಟಿತು. ವಿಶ್ವವಿದ್ಯಾಲಯ ಪೋಸ್ಟ ಆಫೀಸನ್ನೂ ಸುಡಲಾಗಿದೆ.

ದಂಗೆಗಾರರು ಖಾದಿ ಪ್ರತಿಷ್ಠಾನದ ಲಾರಿ ಮೇಲೂ ಅಶುತೋಷ ಮೂಕರ್ಜಿ ರಸ್ತೆಯಲ್ಲಿ ದಾಳಿ ಮಾಡಿ ಅದಕ್ಕೆ ಬೆಂಕಿ ಹಚ್ಚಿದರು. ಮನೆಗೆ ಹೋಗಲು ಜನರ ಮನವೊಲಿಸಿ ಶಾಂತತೆಯುಂಟು ಮಾಡಲು ಶಾಂತಿ ಸೇನಾದಲದವರನ್ನು ಅದು ಕರಕೊಂಡು ಹೊರಟಿತ್ತು. ಅನೇಕ ಸ್ವಯಂ ಸೇವಕರಿಗೆ ಗಾಯ ಸಂಭವಿಸಿತು.

ಸೈನಿಕರು ಬಂದರು

ಗವ್ಹರ್ನರರು ಶಾಂತತೆ ಪ್ರಸ್ಥಾಪಿಸಲು ಸೈನಿಕರನ್ನು ಸಹಾಯಕ್ಕೆ ಕರೆದಿದ್ದು ಅವರು ಬಂದು ಗಸ್ತಿ ನಡೆಸಿದ್ದಾರೆ. ಗಲಭೆ ಸ್ಥಳಗಳಲ್ಲಿ ಸೇನಾ ಜನರನ್ನು ಕಾವಲಿಟ್ಟಿದ್ದು, ಎಲ್ಲ ಪಕ್ಷಗಳ ಮುಖಂಡರು ಶಾಂತತೆ ಉಂಟುಮಾಡಲು ಪ್ರಯತ್ನ ನಡೆಸಿರುವರು.

★ ಅರುಣಾದೇವಿಯ ಸಾಹಸ

೧೯೪೨ ಅಗಸ್ಟಿನಿಂದಲೂ ಪೋಲೀಸರಿಗೆ ಯಶಸ್ವಿಯಾಗಿ ಚಳ್ಳೆಹಣ್ಣು ತಿನ್ನಿಸಿ ಪಾರಾಗುತ್ತ ಇದ್ದೀಗ ವಾರಂಟ ಹಿಂತೆಗೆದುಕೊಂಡ ಮೇಲೆ ಪ್ರಕಾಶಕ್ಕೆ ಬಂದಿರುವ ಶ್ರೀಮತಿ ಅರುಣಾ ಅಸಫ ಅಲಿಯವರು ಅನೇಕ ಸಾಹಸಗಳನ್ನು ಮಾಡಿದ ಕತೆ ಬೆಳಕಿಗೆ ... ಒಮ್ಮೆ ಪೋಲೀಸರಿಗೆ ಅವಳಿದ್ದ ... ೧. ಖಾದೀಜಾ ... ವ ಸುದ್ದಿ ಬಂತು- ಒಡನೆ ... ಪತ್ರಿಕೆಯಲ್ಲಿ ಒಬ್ಬ ಬಿಳಿ ಮಹಿಳೆಯ ಜಾಹಿರಾತೊಂದು ಕಂಡಿತು. ಆ ಮಹಿಳೆ ಶ್ವೇತವರ್ಣದ "ಬೋರ್ಡರ್" ಒಬ್ಬಳಿಗೆ ಜಾಗ ಕೊಡಬಲ್ಲೆನೆಂದು ಜಾಹಿರುಪಡಿಸಿದ್ದಳು. ಅರುಣಾದೇವಿ ಇದನ್ನು ಕಂಡು ಒಡನೆ ಅವಳ ಬಳಿಗೆ ಹೋಗಿ ಬಿಳಿಯಳಲ್ಲದಿದ್ದರೂ ಅವಳನ್ನೊಲಿಸಿ ಅವರ ಮನೆಯಲ್ಲಿ ಆಶ್ರಯ ಪಡೆದಳು. ಪೋಲೀಸರು ಹುಡುಕಿದಾಗ ಅವಳು ಸಿಗಲಿಲ್ಲ.

ಪುಸ್ತಕ ಮತ್ತು ವಿಮರ್ಶೆ

Education in India Today

by P. M. Limaye M. A. Retired Life Member Deccan Education Society Poona. Published by D. D. Karve, Secretary D. E. Society Poona. pp 148. Price Rs. 2-0-0.

ಶಿಕ್ಷಣತಜ್ಞರೂ ಡೆಕ್ಕನ್ ಎಜ್ಯುಕೇಶನ್ ಸೊಸಾಯಿಟಿಯ ನಿವೃತ್ತ ಸದಸ್ಯರೂ ಆದ ಪ್ರಿ. ಪಿ. ಎಂ ಲಿಮಯೆ ಇವರು ಇಡೀ ಹಿಂದುಸ್ಥಾನದಲ್ಲಿ ಐದು ತಿಂಗಳ ವರೆಗೆ ಶೈಕ್ಷಣಿಕ ಸಂಚಾರ ಮಾಡಿ ವರದಿ ರೂಪವಾಗಿ ಈ ಪುಸ್ತಕವನ್ನು ಬರೆದಿದ್ದಾರೆ. ಹಿಂದುಸ್ಥಾನದಲ್ಲಿರುವ ೧೮ ವಿಶ್ವವಿದ್ಯಾಲಯಗಳಲ್ಲಿ ೧೬ ವಿಶ್ವವಿದ್ಯಾಲಯಗಳನ್ನೂ ಬೇರೆ ಬೇರೆ ಶಿಕ್ಷಣ ಸಂಸ್ಥೆಗಳನ್ನೂ ಸಂದರ್ಶಿಸಿದ್ದಾರೆ. ಪ್ರಾಥಮಿಕ ಮಾಧ್ಯಮಿಕ, ವಿಶ್ವವಿದ್ಯಾಲಯ, ವೃತ್ತಿಶಿಕ್ಷಣಗಳ ಬಗ್ಗೆ ಬೇರೆ ಬೇರೆ ಪ್ರಾಂತಿಕ ಸರಕಾರಗಳು ವಿಶ್ವವಿದ್ಯಾಲಯಗಳು ನಡೆಸಿದ ಚಟುವಟಿಕೆಗಳನ್ನು ತಮ್ಮ ಅಭಿಪ್ರಾಯಗಳೊಂದಿಗೆ ಇದರಲ್ಲಿ ವಿವರಿಸಿರುವರು. ಐದನೆಯ ಪರಿಚ್ಛೇದದಲ್ಲಿ ಕೆಲ ಶೈಕ್ಷಣಿಕ ಯೋಜನೆಗಳನ್ನು ವಿವರಿಸಿ ಆಯಾ ಶಿಕ್ಷಣ ಸಂಸ್ಥೆಗಳು ಅವುಗಳ ಯೋಗ್ಯ ಉಪಯೋಗ ಮಾಡಿಕೊಳ್ಳಬೇಕೆಂದು ಕೇಳಿಕೊಂಡಿದ್ದಾರೆ. ಮಹಾತ್ಮಾ ಗಾಂಧಿಯವರ ಪ್ರೋತ್ಸಾಹನೆಯಿಂದ ಅಲ್ಲಲ್ಲಿ ಸರಕಾರದವರು ನಡೆಸಿದ ಮೂಲ ಶಿಕ್ಷಣ ಶಾಲೆಗಳನ್ನೂ ಸಂದರ್ಶಿಸಿರುವರು. ಈ ಶಾಲೆಗಳಲ್ಲಿ ವೃತ್ತಿ ಮೂಲಕ ಶಿಕ್ಷಣ ಕೊಡಲಾಗುತ್ತಿದ್ದರೂ ಅವು ಸ್ವಾವಲಂಬಿಯಾಗಲಾರವೆಂದು ಶ್ರೀ. ಲಿಮಯೆ ಇವರು ಅಭಿಪ್ರಾಯಪಟ್ಟಿದ್ದಾರೆ. ಅಲ್ಲದೆ ಆ ಶಾಲೆಗಳಲ್ಲಿಯ ಶಿಕ್ಷಣದ ಬಗ್ಗೆಯೂ ಲಿಮಯೆಯವರಿಗೆ ಅಷ್ಟೊಂದು ಆಸ್ಥೆ ತೋರುವದಿಲ್ಲ. ಶಿಕ್ಷಣ ಕಾರ್ಯದಲ್ಲಿ ಖಾಸಗಿ ಸಂಸ್ಥೆಗಳು, ವ್ಯಕ್ತಿಗಳು ಯಾವ ಬಗೆಯ ಕಾರ್ಯ ನಡೆಸಿರುವರೆಂಬದನ್ನು ಒನೇ ಪರಿಚ್ಛೇದದಲ್ಲಿ ವಿವರಿಸಲಾಗಿದೆ. ಬಗೆಬಗೆಯ ವ್ಯವಸಾಯ ಶಿಕ್ಷಣದತ್ತ ಮುಂಬಯಿ ಸರಕಾರದವರು ಹೆಚ್ಚು ಲಕ್ಷ ಕೊಡುತ್ತಿರುವದಿಲ್ಲ. ಇದು ಶೋಚನೀಯ ಸಂಗತಿ. ಅದುದರಿಂದ ಇನ್ನು ಮುಂದೆ ಯಾದರೂ ಮುಂಬಯಿ ಸರಕಾರದವರು ಬೇರೆ ಬೇರೆ ತಾಂತ್ರಿಕ ಶಿಕ್ಷಣದತ್ತ ಹೆಚ್ಚು ಗಮನ ಕೊಡಬೇಕೆಂದು ಶ್ರೀ. ಲಿಮಯೆ ಇವರು ಅಭಿಪ್ರಾಯಪಟ್ಟಿದ್ದಾರೆ. ಶ್ರೀ. ಲಿಮಯೆಯವರಂಥ ಶಿಕ್ಷಣತಜ್ಞರು ಸ್ವತಃ ದೇಶದಲ್ಲೆಲ್ಲ ಸಂಚಾರ ಮಾಡಿ ಅಲ್ಲಿನ ಶೈಕ್ಷಣಿಕ ಸಂಸ್ಥೆಗಳನ್ನು ಸಂದರ್ಶಿಸಿ ... ಮಿಕ, ಮಾಧ್ಯಮಿಕ ಉಚ್ಚ ಶಿಕ್ಷಣದ ವರದಿಯನ್ನು ಪ್ರಸಿದ್ಧಿಸಿದ್ದಾರೆ. ಶಿಕ್ಷಣ ಪದ್ಧತಿಯ ಪುನರ್ಘಟನೆಯ ಮಾತು ನಡೆದ ಈ ಸಮಯದಲ್ಲಿ ಈ ಪುಸ್ತಕ ಪ್ರಸಿದ್ಧವಾದುದು ಉಪಯುಕ್ತವಾಗಿದೆ. ಶಿಕ್ಷಣತಜ್ಞರು ಮತ್ತು ಶಿಕ್ಷಣ ಸಂಸ್ಥೆಗಳು ಇದರ ಅವಶ್ಯಕ ಉಪಯೋಗ ಮಾಡಿಕೊಳ್ಳಬೇಕೆಂದು ಕೇಳಿಕೊಳ್ಳುತ್ತೇವೆ.

Industrial Location

by Bimal C. Ghose. Oxford University Press Bombay.

ಬೆಲೆ ಆರಾಣೆ—

ಹಿಂದುಸ್ಥಾನದಲ್ಲಿಯ ಉದ್ಯೋಗ ಧಂದೆಗಳ ಅಭಿವೃದ್ಧಿಯಾಗಬೇಕಾದರೆ ಬೇರೆ ಬೇರೆ ಸಾಧನ ಸಾಮುಗ್ರಿಗಳು ಬೇಕೆಂಬುದು ಅವಶ್ಯವಾಗಿದೆ. ಇವುಗಳಲ್ಲಿ ಮುಖ್ಯವಾದ ಕಚ್ಚಾ ಸರಕುಗಳು ಸಿಕ್ಕುವ ಸ್ಥಳವನ್ನು ನೋಡಿಕೊಂಡು ಉದ್ಯೋಗ ಧಂದೆಗಳನ್ನು ಹೊರಡಿಸಬೇಕಾಗುವದು. ಅಲ್ಲದೆ ಆಯಾ ಸರಕುಗಳು ಸುಲಭವಾಗಿ ಪೇಟೆಗೆ ಬರುವಂತೆ ಅನುಕೂಲತೆಗಳನ್ನು ಮಾಡಿ ಕೊಡಬೇಕಾಗುತ್ತದೆ. ಪೇಟೆಗಳಲ್ಲಿಯೇ ಎಲ್ಲ ಉದ್ಯೋಗ ಧಂದೆಗಳು ಕೇಂದ್ರೀಕೃತವಾದರೆ ಆಗುವ ಅನಿಷ್ಟಗಳನ್ನು ಈ ಪುಸ್ತಕದಲ್ಲಿ ವಿವೇಚಿಸಿ ಇಡೀ ರಾಷ್ಟ್ರದ ಹಿತವನ್ನನುಲಕ್ಷಿಸಿ ಯೋಜನೆಗಳನ್ನು ಕೈಕೊಳ್ಳುವುದವಶ್ಯವೆಂದು ಅಭಿಪ್ರಾಯಪಟ್ಟಿದ್ದಾರೆ. ದೇಶದ ಉದ್ಯೋಗಧಂದೆಗಳ ಅಭಿವೃದ್ಧಿ ಮಾಡಬಯಸುವವರು ಈ ಪುಟ್ಟ ಪುಸ್ತಕವನ್ನೋದಿ ಲಾಭ ಪಡೆಯಬೇಕು.

ಕರ್ಮವೀರ

ಹರಿಜನ ಪುರವಣಿ

ಆಹಾರ ಮತ್ತು ಅರಿವೆ ಬರ

ಆಹಾರ ಮತ್ತು ಅರಿವೆ ಕೊರತೆಯಿಂದುಂಟಾದ ಅನೇಕ ಕರುಣಾಜನಕ ಕತೆಗಳನ್ನು ಬಂಗಾಲ, ಆಸಾಮು ಮತ್ತು ಮದ್ರಾಸ ಪ್ರಾಂತಗಳ ನನ್ನ ಸಂಚಾರದಲ್ಲಿ ಕೇಳಿದೆನು. ಹಿಂದುಸ್ತಾನದ ಇತರ ಭಾಗಗಳಿಂದಲೂ ಇಂಥ ವರದಿಗಳು ಬರಹತ್ತಿವೆ. ಅಲ್ಲಿ ಸಹ ಅದೇ ಕತೆ. ಆಹಾರದ ಕೊರತೆಯಾಗಬಹುದೆಂದು ಸರಕಾರವು ಪ್ರಕಟಿಸಿದ ಕೂಡಲೇ ಬೆಲೆಗಳು ಎರಡು ಪಟ್ಟಾದವೆಂದು ಡಾ. ರಾಜೇಂದ್ರ ಪ್ರಸಾದರು ತಿಳಿಸಿದ್ದಾರೆ. ಇದು ಅನಿಷ್ಟ. ಬೆಲೆಗಳು ವಿನಾಕಾರಣ ಏರುವದಕ್ಕೆ ಅಸ್ಪದವಿರಕೂಡದು. ಇಂಥ ಅಶಿಬುರುಕತನವನ್ನು ಮುರಿಡಿಯಲು ವಣಿಕ್ ವರ್ಗವು ಸಮರ್ಥವಾಗಬೇಕು. ಸರಕಾರದ ತಪ್ಪು ಇಲ್ಲವೆ ಅಸಾಮರ್ಥ್ಯದಿಂದ ಉಂಟಾದ ದಾರುಣ ಪರಿಸ್ಥಿತಿಯನ್ನು ಅವರು ಮತ್ತಷ್ಟು ಹೆಚ್ಚಿಸತಕ್ಕದ್ದಲ್ಲ. ದೇಶದಲ್ಲಿ ಅನೇಕ ವಣಿಕ್ ಸಂಘಗಳು ಮತ್ತು ಸಂಸ್ಥೆಗಳಿವೆ. ಅವರು ರಾಷ್ಟ್ರಪ್ರೇಮದಿಂದ ವರ್ತಿಸಿದರೆ, ಬೆಲೆಯ ಏರಿಕೆಯನ್ನೂ ಪರಿಸ್ಥಿತಿ ಹದಗೆಡುವುದನ್ನೂ ತಡೆಯಬಹುದು.

ಬರಗಾಲ ಬಂದಕೂಡಲೆ ದೈವವನ್ನು ಶಪಿಸುವದು ರೂಢಿಯಾಗಿದೆ. ಮಳೆಯ ಅಭಾವ ಈ ದೇಶದ ಮಟ್ಟಿಗೆ ಮಾತ್ರ ಅಲ್ಲ. ಉಳಿದ ದೇಶಗಳಲ್ಲಿ ಮಳೆಯನ್ನವಲಂಬಿಸದಂತೆ ಸ್ವತಂತ್ರ ವ್ಯವಸ್ಥೆ ಮಾಡಿಕೊಂಡಿರುವರು. ಇಲ್ಲಿ, ಮಳೆಯ ಅಭಾವದಿಂದೆ ಬರಗಾಲ ಕಟ್ಟಿಟ್ಟದ್ದೆಂದು ಸರಕಾರದವರೂ ಸಾರ್ವಜನಿಕರೂ ನಂಬಿರುವರು. ಈ ನಂಬಿಗೆ ಇದ್ದಿರಲಿಲ್ಲವಾದರೆ, ಮಳೆಯ ಅಭಾವಕ್ಕೆ ಬೇರೆ ವ್ಯವಸ್ಥೆ ಮಾಡುತ್ತಿದ್ದರು. ಅದರೆ ಇಲ್ಲಿಯವರು ಕದಷ್ಟು ತುರಿಸಿಕೊಂಡರು. ಯಾಕಂದರೆ ಅಧಿಕಾರ ವರ್ಗವು ಇದಕ್ಕೂ ಹೆಚ್ಚು ವಿಚಾರ ಮಾಡದೆ ಕಲಿಸಿರುತ್ತಾರೆ. ಹಿಂದಕ್ಕೆ ಈಗಿನ ಸರಕಾರದಂಥ ಸರ್ವಗುತ್ತಿಗೆಯ ಸಂಸ್ಥೆ ಇದ್ದಿಲ್ಲ. ಈಗಿನದು ಜಗತ್ತಿನಲ್ಲಿಯೇ ಮಿಗಿಲಾದ ನಿರಂಕುಶ [illegible] ಸರಕಾರವಾಗಿದೆ. ಪ್ರಜಾಸತ್ತೆಯು [illegible]ಗಿ ಕಾದಿಡಲ್ಪಟ್ಟಿದೆ. ಆ ರಾಷ್ಟ್ರವು ಇನ್ನೊಂದು ರಾಷ್ಟ್ರದ ಲಕ್ಷಾಂತರ ಜನರ ಮೇಲೆ ಅಧಿಕಾರ ದರ್ಪ ನಡೆಸಿ ಅವರನ್ನು ಸೂರೆಗೊಂಡರೆ, ಅದು ನಿಸ್ಸವಾಗಿ ಪರಿಣಮಿಸದಿರದು. ಈ ದುರ್ಬುದ್ಧಿ ಇಡೀ ನಡುಗಡ್ಡೆಯನ್ನೇ ವ್ಯಾಪಿಸಿ ಪ್ರಜಾಸತ್ತೆಯು ಪರರನ್ನು ಸುಲಿಯಲು ಅಡ್ಡಿಯಿಲ್ಲವೆಂಬ ಭವನೆ ಉಂಟಾಗುತ್ತದೆ. ಈ ಮುಖ್ಯ ಮಾತನ್ನು ನಾವು ನೆನಪಿನಲ್ಲಿಟ್ಟುಕೊಳ್ಳಬೇಕು. ಆ ನಂತರ ಈ ಸಮಸ್ಯೆಯನ್ನು ಪರಿಶೀಲಿಸುವಾಗ ಸಂಬಂಧಿಸಿದ ಜನರ ಬಗ್ಗೆ ತಾಳ್ಮೆಯಿಂದ ಇರಬೇಕು. ಆದರೆ ಅನಿಷ್ಟಕ್ಕೂ ತಾಳ್ಮೆ ತೋರಿಸಬೇಕೆಂದು ನಾನು ಹೇಳುವದಿಲ್ಲ. ಅನಿಷ್ಟವು ಯಾವುದೆಂದು ಒಮ್ಮೆ ತಿಳಿದ ನಂತರ ಆದರ ಸಮಾಚಾರ ತೆಗೆದುಕೊಳ್ಳುವದು ಹಗುರಾಗುವದು.

ಅದುದರಿಂದ ನಾವು ನಮ್ಮ ಮನೆಯನ್ನು ಸಾಧ್ಯವಿದ್ದಷ್ಟು ಮೊದಲು ಸರಿಪಡಿಸಿಕೊಳ್ಳಬೇಕು. ಮತ್ತು ಅದೇ ಸಮಯದಲ್ಲಿ ಈಗಿನ ಸರಕಾರವನ್ನು ಕಿತ್ತಿ ಹಾಕಿ, ಪರಿಮಿತ ಮತಾಧಿಕಾರದಿಂದ ಆರಿಸಲ್ಪಟ್ಟಿದ್ದರೂ ಈಗಿನ ಕೇಂದ್ರ ಶಾಸನ ಸಭೆಯ ಲೋಕನಿಯುಕ್ತ ಸದಸ್ಯರ ರಾಷ್ಟ್ರೀಯ ಸರಕಾರ ಸ್ಥಾಪಿಸಲು ಕೇಳಿಕೊಳ್ಳಬೇಕು. ಹೀಗೆ ಮಾಡಲು ವ್ಹಾಯಿಸರಾಯರಿಗೆ ಯಾವ ಪ್ರತಿಬಂಧವೂ ಇಲ್ಲ. ಅದರೆ ಮುಂಬರುವ ತೊಂದರೆಗಳಿಗೆ ಇಲ್ಲಿ ಉತ್ತರ ಕೊಡ ಬಯಸುವದಿಲ್ಲ. ಮನವಿದ್ದಲ್ಲಿ ಮಾರ್ಗವಿರುತ್ತದೆ. ಇದೊಂದೇ ಕೃತಿಯಿಂದ ಜನತೆಯಲ್ಲಿ ವಿಶ್ವಾಸ ಹುಟ್ಟಿ ಅಧೈರ್ಯವು ದೂರವಾಗುತ್ತದೆ.

"ಅಧಿಕ ಆಹಾರ ಬೆಳೆಯಿರಿ" ಎಂದ ಯುದ್ಧ ಕಾಲದಲ್ಲಿ ಎತ್ತಿದ ಕೂಗು ಅನುಚಿತವಾಗಿದ್ದಿಲ್ಲ. ಅದರ ಅವಶ್ಯಕತೆ ಈಗ ಇನ್ನೂ ಹೆಚ್ಚಾಗಿದೆ. ಇದನ್ನು ರಾಷ್ಟ್ರೀಯ ಸರಕಾರವು ಚನ್ನಾಗಿ ಮಾಡಬಲ್ಲದು. ಅದರ ತಪ್ಪು, ಈಗಿನ ಸರಕಾರದ— ಅದು ಎಷ್ಟೆ ಸಮರ್ಥವಿದ್ದರೂ— ತಪ್ಪಿನಷ್ಟು ಬೆಳಕಿಗೆ ಬರುವದಿಲ್ಲ. ಈಗಿನ ಸರಕಾರದ ಸಾಮರ್ಥ್ಯದ ಬಗ್ಗೆ ಟೀಕೆಗಳಾಗುತಿದ್ದು ಅದು ತಪ್ಪೋ ಅಥವಾ ಒಪ್ಪೋ ಎಂಬದು ಅಪ್ರಸ್ತುತ. ಭೂಗರ್ಭದಿಂದ ನೀರನ್ನು ಮೇಲಕ್ಕೆತ್ತಲು ಸರ್ವಪ್ರಯತ್ನ ಮಾಡಬೇಕು. ಈ ದೇಶದಲ್ಲಿ ಅಷ್ಟು ಬುದ್ಧಿ ಇದೆ. ಪ್ರಾಂತಿಕ ಸ್ವಾರ್ಥವು ರಾಷ್ಟ್ರೀಯ ಅವಶ್ಯಕತೆಗೆ ಸ್ಥಾನ ಮಾಡಿಕೊಡಬೇಕು.

ಇದರ ಹೊರ್ತು ಪರದೇಶಗಳಿಂದ ಇದ್ದಲ್ಲಿಂದ ಆಹಾರ ತರಿಸಬೇಕು.

ಹಳ್ಳಿಗಳಲ್ಲಿಯೇ ನೂಲು ತೆಗೆದು ಬಟ್ಟೆ ನೇಯ್ದುಕೊಳ್ಳಿರೆಂದು ಹೇಳಿ ಅರಿವೆ ಬರಗಾಲವನ್ನು ನಿವಾರಿಸಬಹುದು ಮತ್ತು ಸರಕಾರದವರು ಅರಳಿ ಇಲ್ಲದ, ಅಲಭ್ಯವಿದ್ದಲ್ಲಿ, ಅರಳಿ ಹಾಗೂ ಉಪಕರಣಗಳನ್ನು ಬಾಡಿಗೆ ಇಲ್ಲವೆ ಕಂತಿನ ಖರೀದಿಯಿಂದ ಪೂರೈಸಬೇಕು. ಅವರಿಗೆ ಸಹಾಯ ಮತ್ತು ಮಾರ್ಗದರ್ಶನ ಮಾಡಲು ಅ. ಭಾ. ಚರಖಾ ಸಂಘದ ತರಬೇತಾದ ಕೆಲಸಗಾರರನ್ನು ಕರೆಸಿಕೊಳ್ಳಬೇಕು. ಇದನ್ನು ಈಗಲೇ ಪ್ರಾರಂಭಿಸಿದರೂ ರೂಪುಗೊಳ್ಳಬೇಕಾದರೆ ಕೆಲವು ತಿಂಗಳು ಬೇಕು. ಮಧ್ಯಂತರ ಸಮಯದಲ್ಲಿ ಸ್ವದೇಶಿ ಗಿರಣಿಗಳ ಅರಿವೆಯನ್ನು ಹಳ್ಳಿ ಮತ್ತು ಪಟ್ಟಣಗಳಲ್ಲಿ ಯೋಗ್ಯವಾಗಿ ಹಂಚುವಂತೆ ವ್ಯವಸ್ಥೆ ಮಾಡಬೇಕು. ಈಗುಂಟಾದ ಮತ್ತು ದಿನದಿನಕ್ಕೆ ಹೆಚ್ಚುತ್ತಿರುವ ಅರಿವೆ ಕೊರತೆಯನ್ನು ನೋಡಿ, ಕೇವಲ ಗಿರಣಿಗಳೇ ಪೂರೈಸಬಹುದೆಂಬ ವಾದವನ್ನು ಬಿಟ್ಟುಬಿಡಬೇಕು. ಲಕ್ಷಾಂತರ ನಿರುದ್ಯೋಗಿ ಹಳ್ಳಿಗರಿಗೆ ಗಿರಣಿಗಳು ಕೆಲಸ ಕೊಡಲಾರವು. ಅಲ್ಲದೆ ರಾಟಿಯ ಶೈಕ್ಷಣಿಕ ಮಹತ್ವವನ್ನೂ ಗಿರಣಿಗಳು ಮೀರಲಾರವು. ಗಿರಣಿಗಳ ಮಾಯಾಮೋಹವು ನಮ್ಮನ್ನಾವರಿಸಿರದಿದ್ದರೆ ಸತ್ಯವಾದ ಮಾರ್ಗವನ್ನು ನಾವೇ ಕಂಡು ಹಿಡಿದು ಮತ್ತು ಅದರಂತೆ ಅನುಸರಿಸಿ ನಮ್ಮ ಲಕ್ಷಾಂತರ ದೇಶ ಬಾಂಧವರಲ್ಲಿ, ಅದೇಕೆ ಆಹಾರ ಮತ್ತು ಅರಿವೆ ಕೊರತೆಯಿಂದ ಬಳಲುತ್ತಿರುವ ಪ್ರಪಂಚದಲ್ಲಿಯೆ ಆತ್ಮವಿಶ್ವಾಸ ಹುಟ್ಟಿಸಬಹುದು.

ಸೇವಾಗ್ರಾಮ, —ಮೋ. ಕ. ಗಾಂ.
೧೦-೨-೪೬

ಶಾಸನಸಭೆಗಳ ಮೋಹ

ಶಾಸನ ಸಭೆಗಳಿಗೂ ಇತರ ಆಯ್ಕೆಯ ಸಂಸ್ಥೆಗಳಿಗೂ ಕೆಲವು ಕಾಂಗ್ರೆಸ್ಸಿಗರು ಚುನಾವಣೆಗೆ ನಿಲ್ಲಬೇಕೆಂದು ನನ್ನ ಅಭಿಮತ. ಹಿಂದೆ ನಾನು ಈ ಅಭಿಪ್ರಾಯದವನಾಗಿದ್ದಿಲ್ಲ. ಶಾಸನ ಸಭೆಗಳ ಬಹಿಷ್ಕಾರ ಪರಿಪೂರ್ಣವಾಗಬಹುದೆಂದು ನಾನು ಆಶಿಸಿದ್ದೆ. ಆದರೆ ಅದು ಬಯಲಾಯಿತು. ಅಲ್ಲದೆ ಈಗ ಕಾಲವೂ ಬದಲಿಸಿದೆ. ಸ್ವರಾಜ್ಯವೀಗ ಸನ್ನಿಹಿತವಾದಂತೆ ತೋರುತ್ತಿವೆ. ಆದುದರಿಂದ ಶಾಸನ ಸಭೆಗಳ ಪ್ರತಿಯೊಂದು ಸ್ಥಾನಕ್ಕೂ ಕಾಂಗ್ರೆಸ್ಸು ಸ್ಪರ್ಧಿಸುವುದು ಅವಶ್ಯವಾಗಿದೆ ಶಾಸನ ಸಭಾ ಸದಸ್ಯತ್ವದಿಂದ ದೊರಕುವದೆಂದು ಭಾವಿಸಲಾದ ಗೌರವದ ಸಂಪಾದನೆಯ ಸೆಳೆತಕ್ಕೆ ಎಂದೂ ಕಾಂಗ್ರೆಸ್ಸಿಗರು ಸಿಕ್ಕಬಾರದು. ಸೇವೆಯ ಬಯಕೆಗೊಂಡು ಅವಕಾಶ ದೊರೆಯುವದೆಂಬುದೇ ಏಕಮಾತ್ರ ಆಕರ್ಷಣೆಯಾಗಿರಬೇಕು. ಯಾವುದೊಂದು ವಿಶಿಷ್ಟ ಸ್ಥಾನಕ್ಕೆ ಸ್ಪರ್ಧೆ ಬಿದ್ದರೆ ಕೂಡ ಕಾಂಗ್ರೆಸ್ ಹುರಿಯಾಳಿನ ಬಲ ಅದನ್ನು ವೆನಿಸುವಷ್ಟು ಕಾಂಗ್ರೆಸ್ಸಿನ ಘನತೆಯಿರಬೇಕು, ಅಷ್ಟು ಘನತೆ ಕಾಂಗ್ರೆಸಿಗೆ ಇದ್ದೂ ಇದೆ. ಅಲ್ಲದೆ ಬೋರ್ಡಿನಿಂದ ಆರಿಸಲ್ಪಡದಿದ್ದವರು ಅದಕ್ಕಾಗಿ ನೊಂದುಕೊಳ್ಳಲೂ ಬಾರದು ಬದಲಾಗಿ ತಮ್ಮನ್ನು ಇನ್ನೂ ಉಪಯುಕ್ತವಾದ ಸೇವೆಗೆ ಸ್ವತಂತ್ರರನ್ನಾಗಿಟ್ಟ ಬಗ್ಗೆ ಅವರು ಸಂತೋಷಪಡಬೇಕು. ಆದರೆ ವಿಷಾದದ ಸಂಗತಿ, ಬೋರ್ಡಿನಿಂದ ಆರಿಸಲ್ಪಡದವರು ನಿಜವಾಗಿ ನೊಂದುಕೊಳ್ಳುತಿದ್ದಾರೆ.

ಚುನಾವಣೆಗಳಿಗಾಗಿ ಹಣ ವೆಚ್ಚ ಮಾಡುವ ಪ್ರಸಂಗ ಕಾಂಗ್ರೆಸ್ಸಿಗೆ ಬರಬಾರದು. ಜನಪ್ರಿಯ ಸಂಸ್ಥೆಯೊಂದರ ಹುರಿಯಾಳು ಆರಿಸಿ ಬರಬೇಕಾದರೆ ಆ ಸಂಸ್ಥೆಗೆ ಸ್ವಲ್ಪವೂ ಶ್ರಮವಹಿಸುವ ಆ[illegible] ತಾನಾಗಿ [illegible]ಕತೆ ಇರಬಾರದು. ಬಡ ಮತ[illegible]ಕ್ತ ರಾಷ್ಟ್ರ ಸಭೆಯ ಸೌಕರ್ಯಗಳನ್ನು ಅವರ ಶ್ರೀಮ[illegible] ಲೆಗೆ ದೂ[illegible] ಒದಗಿಸಬೇಕು. ಉದಾಹರಣೆಗಾಗಿ [illegible] ಮಾಡಲು ಕ- ಊರಿನ ಮತದಾರರು ಚ- ಊರಿಗೆ ಹೋಗಬೇಕಾಗಿದ್ದರೆ ಕ- ದಿಂದ ಚ-ಕ್ಕೆ ಹೋಗುವ ರೇಲು ಗಾಡಿಯ ವೆಚ್ಚವನ್ನು ಬಡ ಮತದಾರರಿಗಾಗಿ ಕ-ದ ಶ್ರೀಮಂತರೇ ತೆರಬೇಕು. ಆದೀಗ ಸುಸಂಘಟಿತ, ಅಹಿಂಸಾತ್ಮಕ, ಜನಪ್ರಿಯ ಸಂಸ್ಥೆಯ ವೈಶಿಷ್ಟ್ಯ. ಎಲ್ಲಕ್ಕೂ ಹಣದ ಮೋರೆ ನೋಡುವ ಸಂಸ್ಥೆ ಜನತೆಯ ಸೇವೆ ಮಾಡಲೇ ಆರದು. ಜನಪ್ರಿಯತೆಯ ಮೇಲಾಟದಲ್ಲಿ ಗೆಲವನ್ನು ತರುವದು ಹಣವಾಗಿದ್ದರೆ, ಸ್ವಚ್ಛಂದವಾಗಿ ಹಣ ವೆಚ್ಚಮಾಡಬಲ್ಲ ಮತ್ತು ವೆಚ್ಚಮಾಡುತ್ತಿರುವ ಬ್ರಿಟಿಶ ಸರಕಾರವೇ ಈ ದೇಶದಲ್ಲಿ ಪರಮ ಜನಪ್ರಿಯ ಸಂಸ್ಥೆಯೆನಿಸಬೇಕು. ಆದರೆ ವಾಸ್ತವಿಕವಾಗಿ, ಸರಕಾರದಿಂದ ದೊಡ್ಡ ದೊಡ್ಡ ಸಂಬಳ ಪಡೆಯುತ್ತಿರುವ ಅಧಿಕಾರಿಗಳು ಕೂಡ, ತಮ್ಮ ಅಂತರಂಗದಲ್ಲಿ ಬ್ರಿಟಿಶ ಸರಕಾರ ಉಳಿಯಬೇಕೆಂದು ಆಶಿಸುವದಿಲ್ಲ.

ಶಾಸನ ಸಭೆಗಳ ಪ್ರಯೋಜನದ ಬೆಲೆಯೇನೆಂದು ಒರೆಯೋಣ. ಶಾಸನ ಸಭೆಗಳು ಸರಕಾರದ ಹುಳುಕುಗಳನ್ನು ಬಯಲಿಗೆಳೆಯಬಹುದು. ಆದರೆ ಅದೊಂದು ಚಿಲ್ಲರೆ ಸೇವೆ. ಸರಕಾರದ ದೋಷಗಳನ್ನು ಅರಿತೂ ಜನರೇಕೆ ಅದಕ್ಕೆ ಬಲಿಯಾಗುತ್ತಾರೆಂಬುದನ್ನು ತಿಳಿಹೇಳಿ ಯಾವಾತನು ಸರಕಾರದ ಅನ್ಯಾಯಗಳ ವಿರುದ್ಧ ಎದ್ದು ನಿಲ್ಲುವ ಬಗೆಯನ್ನು ಜನರಿಗೆ ಕಲಿಸುತ್ತಾನೋ ಅವನೇ ನಿಜವಾದ ಜನಸೇವಕ. ಈ ಅವಶ್ಯಕ ಸೇವೆಯನ್ನು ಶಾಸನ ಸಭಾಸದಸ್ಯರು ಮಾಡಲರಿಯರು. ಏಕೆಂದರೆ ಅನ್ಯಾಯಗಳ ಪರಿಮಾರ್ಜನೆಗಾಗಿ ತಮ್ಮ ಮುಖ ನೋಡುವಂತೆ ಮಾಡುವವೇ ಸದಸ್ಯರ ಕೆಲಸ.

ಶಾಸನ ಸಭೆಗಳ ಇನ್ನೊಂದು ಪ್ರಯೋಜನವೆಂದರೆ ಅನಿಷ್ಟವಾದ ಕಾಯದೆಗಳಾಗದಂತೆ ತಡೆಯುವದು ಮತ್ತು ವಿಧಾಯಕ ಕಾರ್ಯಕ್ರಮಕ್ಕೆ ಆದಷ್ಟು ಅನುಕೂಲವಾ[illegible] ಹಿತಕಾರಿಯಾದ ಕಾಯಿದೆಗಳನ್ನು [illegible] ಏನೂ ಅಂದಿ[illegible] ಸರಕಾರ ಮುಖ್ಯ[illegible] ಇಚ್ಛೆಯನ್ನು ಕಾ[illegible] ಮಾತುಕತೆ ನಡೆಸಲು ಹೇಳಲಾಗಿವೆ. ಈ ಬ್ರಿಟಿಶ ರಾಯ[illegible]ರ್ಯದಿಂದ ಕ್ಷಣಿಕ ಪ್ರಯೋಜನವಾಗಬಹುದು. ಆದರೆ ಕೊನೆಯ ಅವಶ್ಯಕತೆಯನ್ನು ವಾಕ್ಚಾತುರ್ಯ ಪೂರೈಸದು. ವ್ಯಾವಹಾರಿಕ ಅನುಭವವುಳ್ಳ ತಜ್ಞರೂ ಅಂಥ ಕೆಲವೇ ಜನರಿಗೆ ಬೆಂಬಲ ಕೊಡಬಲ್ಲವರೂ ಮುಂದೆ ಬೇಕಾಗುವರು ಸೇವೆಗಾಗಿಯೆ ಇರುವ, ಬಿರುದು ಬಾವಲಿಗಳೇ ಮೊದಲಾದ ತುಚ್ಛ ವಸ್ತುಗಳಿಗೆ ಬಹಿಷ್ಕಾರಹಾಕಿದ ಸಂಸ್ಥೆಯೊಂದರಲ್ಲಿ, ಶಾಸನ ಸಭೆಗೆ ಹುರಿಯಾಳಾಗಿ ಆರಿಸಲ್ಪಡುವದು ಗೌರವದ ಚಿಹ್ನವೆಂಬ ಭಾವನೆಯಿರುವದು ಅಪಾಯಕರ. ಅಂಥ ಭಾವನೆ ಬೇರೂರಿತೆಂದರೆ ಅದು ಕಾಂಗ್ರೆಸ್ಸಿನ ಹೆಸರನ್ನು ಅಧಃಪಾತಕ್ಕೆ ತರುವದಲ್ಲದೆ ಕೊನೆಗೆ ಅದರ ವಿನಾಶಕೆ ಕಾರಣವೆಂದು ಸಿದ್ಧವಾಗುವದು.

ಕಾಂಗ್ರೆಸ್ಸಿಗರು ಹೀಗೆ ಭ್ರಷ್ಟರಾಗಿ ಹೋದರೆ, ಹಿಂದುಸ್ತಾನದ ಕೋಟ್ಯಂತರ ಅಸ್ಥಿಪಂಜರಗಳಲ್ಲಿ ರಕ್ತ ಮಾಂಸಗಳನ್ನು ಯಾರು ತುಂಬಬೇಕು? ಹಿಂದುಸ್ತಾನವೂ ಜಗತ್ತೂ ಯಾರ ಮೇಲೆ ಅವಲಂಬಿಸಬೇಕು?

ಸೇವಾಗ್ರಾಮದ ದಾರಿಯಲ್ಲಿ ಮೋ. ಕ. ಗಾಂ.
೫—೨—೪೬

ಮಹಾದೇವನಿಲ್ಲದ ಹರಿಜನ

'ಹರಿಜನ'ವು ಮೂರು ವರ್ಷಗಳ ನಂತರ ಪುನಃ ಬೆಳಕು ಕಂಡಿದೆ. ಈ ಅವಧಿಯಲ್ಲಿ ಸಂಭವಿಸಿದ ಅದ್ಭುತ ಘಟನೆಗಳನ್ನು ನೋಡಿದರೆ ಈ ಮೂರು ವರ್ಷಗಳು ಯುಗಗಳಂತೆ ತೋರುತ್ತವೆ. ಜನರು ಅಳುಕದ ಎದೆಗಾರಿಕೆಯಿಂದ ಸಹಿಸಿದ ಕಷ್ಟನಷ್ಟಗಳನ್ನು ಕಂಡು ಯಾರಿಗಾದರೂ ಆಶೆ ಆದರಗಳು ತುಂಬಿ ತುಳುಕದಿರವು. ಸ್ವಾತಂತ್ರ್ಯವು ತೀರ ಸಮೀಪಿಸಿದೆ ಎಂದು ಮಹಾತ್ಮರೂ ನಮ್ಮ ಇತರ ಮುಖಂಡರೂ ಹೇಳುತ್ತಿರುವದು ಆಶ್ಚರ್ಯದ ಮಾತಲ್ಲ. ಸ್ವಾತಂತ್ರ್ಯವು ಸಮೀಪಿಸಿದೆ. ಆದರೆ ಅದನ್ನು ಹತ್ತಿರಕ್ಕೆ ಎಳೆದು ತಂದವರಲ್ಲಿ ಅನೇಕರು ಕಣ್ಮರೆಯಾಗಿದ್ದಾರೆ. ಇಂಥವರಲ್ಲಿ ಶ್ರೀ ಮಹಾದೇವ ದೇಸಾಯರು ಒಬ್ಬರು. ಈ ವಿಧದ ತ್ಯಾಗಗಳೆಲ್ಲ ಭಾರತದ ವಿಮೋಚನೆಯ ದಿನವನ್ನು ತೀರ ಸಮೀಪವಾಗಿಸುತ್ತಿವೆ ಎಂದು ನಮಗೆ ಹೇಳಲಾಗಿದೆ. ಈ ವಿಶ್ವಾಸದಿಂದಲೆ ಆದ ಹಾನಿಯನ್ನು ಶಿಸ್ತರೂ ಮಿತ್ರರೂ ಧೈರ್ಯದಿಂದ ಸಹಿಸಬಲ್ಲವರಾಗಿದ್ದಾರೆ.

ಮಹಾದೇವಭಾಯಿಯವರು ತಾವೊಬ್ಬರೆ ಗಾಂಧೀಜಿಯವರ ಕಾರ್ಯದರ್ಶಿಗಳಾಗಿದ್ದಾಗಿನ ತಮ್ಮ ಮೊದಲಿನ ದಿನಗಳಲ್ಲಿ ಮಹಾತ್ಮರೊಡನೆ ಪಡೆದ ಅನುಭಗಳ ರೋಮಾಂಚಕಾರಕ ಕತೆಗಳನ್ನು ಅವರು ನನಗೆ ಆಗಾಗ ಹೇಳುತ್ತಿದ್ದರು. 'ಹರಿಜನ'ವನ್ನು ಮೊದಲಿಗೆ ಪ್ರಾರಂಭಿಸುವಾಗಲೂ ಅವರೊಬ್ಬರೇ ಮಹಾತ್ಮರ ಸಹಾಯಕರಾಗಿದ್ದರು. ಆಗ ಅವರು ಯರವಡಾ ಸೆರಮನೆಯಲ್ಲಿದ್ದರು. ಮಹಾದೇವಭಾಯಿಯವರೊಬ್ಬರೆ ಮಹಾತ್ಮರ ಭಾವಿರಕ್ಕಿಂತ ಹೆಚ್ಚು ಭಾಷಣಗಳನ್ನು ಸ್ಮರಣೆಯಿಂದ ಬರೆದು ಪತ್ರಿಕೆಯ ಪ್ರತಿಗಳನ್ನು ಅವರಿಗೆ ಕಳಿಸಿಕೊಟ್ಟರು. ಹರಿಜನ ಪತ್ರಿಕೆಯು ಪ್ರಾರಂಭವಾದಂದಿನಿಂದ ೧೯೪೨ ಅಗಸ್ಟದಲ್ಲಿ ನಿಂತುಹೋಗುವವರೆಗೆ ಮಹಾತ್ಮರೇ ಅದರ ಸಂಪಾದಕರಾಗಿದ್ದರೂ ಎಂ.ಡಿ.ಯವರ ಲೇಖನಿಯಿಂದ ಬಂದ ಉತ್ತಮವಾದ ಸುಂದರ ಲೇಖನನ್ನು ನೋಡದೆ ಯಾರೂ ಎಂದಿಗೂ 'ಹರಿಜನ'ವನ್ನೆತ್ತಿಕೊಳ್ಳುತ್ತಿದ್ದನೆಂದು ನನಗೇನೂ ಅನಿಸುವದಿಲ್ಲ ಅವರು ಜೈಲಿನಿಂದಿದ್ದರೂ ನಿಯಮಿತವಾಗಿ ಲೇಖಗಳನ್ನು ಕಳಿಸುತ್ತಿದ್ದರು. ಗಾಂಧೀಜಿಯವರು ತಮಗೆ ಬೇಕಾದಷ್ಟು ಹೆಚ್ಚುಕಡಿಮೆ ಬರೆಯಬಹುದಾಗಿತ್ತು. ಉಳಿದದ್ದನ್ನೆಲ್ಲ ಪೂರೈಸುವ ನಿರರ್ಗಳ ಲೆಕ್ಕಣಿಕೆ ಮಹದೇವಭಾಯಿಯವರದಾಗಿತ್ತು. ಅದರೆ ಅವರ ಹಾಗೆಂದೂ ಮಾಡುತ್ತಿರಲಿಲ್ಲ. ಅವರ ಅರ್ಥವಿವರಣೆ ಎಷ್ಟು ಉಚಿತವಾಗಿರುತ್ತಿತ್ತೆಂಬುದನ್ನು ಗಾಂಧೀಜಿಯವರೂ ಜನರೂ ಅರಿತವರಾಗಿದ್ದಾರೆ. ಇವರ ವಾಣಿಯು ಸುಮಾರು ಮಹಾತ್ಮರಷ್ಟೆ ಅಧಿಕಾರವಾಣಿಯಾಗಿತ್ತು. ಆದ್ದರಿಂದ ಮಹಾತ್ಮರು ನಡುವೆ ಒಮ್ಮೆ ಸಂಪಾದಕತ್ವವನ್ನು ಬಿಟ್ಟುಕೊಟ್ಟಾಗ ಮಹಾದೇವಭಾಯಿಯವರಿಗೆ ಅದನ್ನು ವಹಿಸಿಕೊಟ್ಟರು.

ಹರಿಜನವು ಗಾಂಧೀಜಿಯವರ ಲೆಕ್ಕಣಿಕೆಯೊಡನೆ ಅನೇಕ ವರ್ಷಗಳ ಸಂಬಂಧವಿಟ್ಟುಕೊಂಡಂತೆ ಮಹಾದೇವಭಾಯಿಯವರ ಲೆಕ್ಕಣಿಕೆಯೊಡನೆಯೂ ಸಂಬಂಧವನ್ನಿಟ್ಟುಕೊಂಡಿತ್ತೆಂದು ನಮ್ಮಲ್ಲಿ ಅನೇಕರಿಗೆ ತಿಳಿದಿದೆ. ಈಗ ನನಗೊಂದು ವಿಷಯ ನೆನಪಿಗೆ ಬರುತ್ತದೆ. ಒಂದು ದಿನ ಮಹಾದೇವಭಾಯಿಯವರು ಎಂ. ಡಿ. ಎಂದು ಅಚ್ಚೊತ್ತಿದ ತಮ್ಮ ಕಾಲ್ಮೊರೆಗಳನ್ನು ಗಾಂಧೀಜಿಯ ಆಶ್ರಮದ

—೧೧ನೇ ಪುಟ ನೋಡಿರಿ

ಅಹಿಂಸಾ ತಂತ್ರ ಹಾಗು ಪ್ರತಿ ಸರಕಾರ

ಸ್ವಾತಂತ್ರ್ಯ ಹೋರಾಟದಲ್ಲಿ ಮಿದನಾಪುರ ಯಾವಾಗಲೂ ಮುಖರ ಪ್ರದೇಶದಲ್ಲೆ ಕಾಣಿಸಿಕೊಂಡಿದೆ. ೧೯೩೦ರ ಉಪ್ಪಿನ ಸತ್ಯಾಗ್ರಹದಲ್ಲಿ ಮಹಿಷಾದಲದ ಸ್ತ್ರೀ-ಪುರುಷರು ಹೊಸ ಇತಿಹಾಸವನ್ನೇ ನಿರ್ಮಿಸಿತೋರಿಸಿದರು. ೧೯೩೦ರ ಸತ್ಯಾಗ್ರಹದಲ್ಲಿ ಅದು ಪುನಃ ಸರ್ಕಾರದ ದಬ್ಬಾಳಿಕೆಯ ಭೀಕರತೆಯನ್ನು ಸಹಿಸಿತು. ಸೈನಿಕರ ಕ ಚಿನ ಎದುರಿಗೆ ತಾಮಲುಕದ ಹಳ್ಳಿ ನಿವಾಸಿಗಳ ಸಾಮೂಹಿಕ ಪಲಾಯನ, ಸೈನಿಕ ಧ್ವಜಕ್ಕೆ ಒತ್ತಾಯದ ವಂದನೆ, ಸುಲಿಗೆ ಮತ್ತು ಅದಕ್ಕೂ ಭಯಾನಕವಾದ ಸಂಗತಿಗಳು ಜರಗಿದವು. ಆ ಜಿಲ್ಹೆಯ ದಕ್ಷಿಣ ಭಾಗದಲ್ಲಿಯೂ ಮಹಿಷಾದಲದ ಸುತ್ತಮುತ್ತಲೂ ವಾಸಿಸುತ್ತಿರುವ "ಮಹಿಷ" ಜನರು ಕಟ್ಟಾಳುಗಳಾದ ರೈತರು. ಶತ-ಶತಮಾನಗಳಿಂದ ಪ್ರಕೃತಿಯೊಡನೆ ಹೋರಾಡದ ಅವರು ಸಹಯೋಗ ಸಹಕಾರಗಳನ್ನು ರಕ್ತಗತಮಾಡಿಕೊಂಡಿದ್ದಾರೆ. ಅವರ ಕೃಷಿಕರ್ಮ ಯಶಸ್ವಿಯಾಗಿ ಸಾಗಬೇಕಾದರೆ, ಭೂಮಿಗೆ ಸರಿಯಾಗಿ ನೀರಿನ ವ್ಯವಸ್ಥೆ ಮಾಡಬೇಕು. ಸಮುದ್ರದ ನೀರು ಕೃಷಿಭೂಮಿಯ ಮೇಲೆ ನುಗ್ಗದಂತೆ ಒಡ್ಡುಹಾಕಿ ತಡೆಯಬೇಕು. ಹೀಗೆ ಈ ಜನರ ಕಟ್ಟಾಳ್ತನ ಮತ್ತು ಸಾಮಾಜಿಕ ಸಂಘಟನೆ, ಅವರ ಸುತ್ತಮುತ್ತಲ ಪ್ರಾಕೃತಿಕ ಸ್ಥಿತಿಗತಿಯಿಂದ ಹುಟ್ಟಿಬಂದುದು.

೧೯೪೨ ರ ಆಗಸ್ಟ ಕ್ರಾಂತಿಯ ಕಾಲದಲ್ಲಿ ಹಿಂದುಸ್ತಾನದ ಬೇರಾವ ಭಾಗವೂ ಮಿದನಾಪೂರಕ್ಕೆ ಸಮಾನವಾದ ಪಂಚಾಗ್ನಿಯಾತನೆಯನ್ನು ಶೋಭಿಸಿರಲಾರದು. ಆಗ ಪ್ರಕೃತಿಯು ಪ್ರಕೋಪಕ್ಕೆ ಮಾನವನ ಪಾಶವೀ ಕೃತಿ ಪುಟವಿತ್ತಿತು. ಅವರ ಯಾತನೆಗಳು ಅವರನ್ನು ಶುದ್ಧೀಕರಿಸಿದವು ಹೊರತು ಅವರ ಶೌರ್ಯವನ್ನು ಕುಗ್ಗಿಸಲಿಲ್ಲ ಈ ಶುದ್ಧೀಕರಣ ವಿಧಿಯ ಪರಿಣಾಮ ಗಾಂಧೀಜಿಯ ಪ್ರಾರ್ಥನಾಸಭೆಗಳಿಗೆ ಬಂದು ಸೇರುತಿದ್ದ—ಒಮ್ಮೊಮ್ಮೆ ಲಕ್ಷಾಂತರ ಜನರ—ನೆರವಿಯಲ್ಲಿ ಕಾಣಬರುತಿದ್ದ ಪರಿಪೂರ್ಣವಾದ ಶಿಸ್ತು, ಸೂಜಿವೆ ಉದುರಿದರೆ ಕೇಳಿಸುವಂಥ ನಿಸ್ತಬ್ಧತೆ—ಇವುಗಳಲ್ಲಿ ವ್ಯಕ್ತವಾಗುತಿತ್ತು.

ಪ್ರತಿಸರಕಾರದ ಸಾಹಸ

ಗಾಂಧೀಜಿ ಈಚೆಗೆ ಮಹಿಷಾದಲಕ್ಕೆ ಭೆಟ್ಟಿಯಿತ್ತಾಗ, ಮಿದನಾಪುರದ ಕಾಂಗ್ರೆಸ ಕಾರ್ಯಕರ್ತರಿಗೂ ಗಾಂಧೀಜಿಗೂ ನಡೆದ ಸಂಭಾಷಣೆಗಳಲ್ಲಿ ಅಹಿಂಸೆ ಮತ್ತು ಜಾತೀಯ (ಅಂದರೆ ರಾಷ್ಟ್ರೀಯ) ಸರಕಾರದ ಪ್ರಶ್ನೆಯೇ, ಸ್ವಾಭಾವಿಕವಾಗಿ, ಬಹಳ ಪ್ರಮುಖವಾಗಿರುತಿತ್ತು. ಜಾತೀಯ ಪ್ರತಿ ಸರಕಾರವನ್ನು ಮಿದನಾಪುರ ಜಿಲ್ಹೆಯ ಸುತಹಾತಾ, ನಂದಿಗ್ರಾಮ, ಮಹಿಷಾದಲ ಮತ್ತು ತಾಮಲುಕ ಠಾಣೆಗಳಲ್ಲಿ ೧೭-೧೨-೪೨ ಮತ್ತು ೧೬-೧-೪೩ ನೇ ದಿನಗಳಲ್ಲಿ ಸ್ಥಾಪಿಸಲಾಯಿತು. ಗಾಂಧೀಜಿ ಬಂಧಮುಕ್ತರಾಗಿ ಬಂದನಂತರ ಗೋಪ್ಯ ಕಾರ್ಯಕ್ರಮ ಮತ್ತು ಚಟುವಟಿಕೆಯ ಸಂಬಂಧದಲ್ಲಿ ಅವರು ಹೊರಡಿಸಿದ ಹೇಳಿಕೆಯ ಪರಿಣಾಮವಾಗಿ ಈ ಜಾತೀಯ ಸರಕಾರವನ್ನು ೧೯೪೪ ಆಗಸ್ಟ ೮ ಕ್ಕೆ ಔಪಚಾರಿಕವಾಗಿ ವಿಸರ್ಜಿಸಲಾಯಿತು. ಸಪ್ಟಂಬರ ೧೯೪೪ ರಷ್ಟು ಹೊತ್ತಿಗೆ ಆ ಸರಕಾರಕ್ಕೆ ಸಂಬಂಧಿಸಿದ ಸುಮಾರು ೧೫೦ ಕಾರ್ಯಕರ್ತರು ಪ್ರಕಾಶಕ್ಕೆ ಬಂದು ಅಧಿಕಾರಿಗಳ ಮುಂದೆ ಹಾಜರಾದರು. ಗಾಂಧೀಜಿಯವರು ಮಹಿಷಾದಲಕ್ಕೆ ಹೋದಾಗ ಮಿದನಾಪುರ ಕಾರ್ಯಕರ್ತರು ಗಾಂಧೀಜಿಯವರಿಗೆ ಅಗಸ್ಟ ಕ್ರಾಂತಿಯನ್ನು ಕುರಿತು ವರದಿಯೊಂದನ್ನು ಒಪ್ಪಿಸಿದರು. ಜನರು ಠಾಣೆಗಳನ್ನು ಆಕ್ರಮಿಸಿದ್ದು, ಕಚೇರಿಗಳನ್ನು ಸುಟ್ಟದ್ದು ತಂತಿ-ಸಂಪರ್ಕ ಸೌಕರ್ಯಗಳನ್ನು ಪ್ರತಿಬಂಧಿಸಿದ್ದು, ಪ್ರತಿ ಪೋಲೀಸು ಪಡೆ, ಗುಪ್ತಚಾರದಲ, ನ್ಯಾಯಸ್ಥಾನಗಳನ್ನು ಸಂಘಟಿಸಿ ಪಾತಕಿಗಳನ್ನೂ ಸಮಾಜ ವಿರೋಧಿ ಕಾರ್ಯಗಳಲ್ಲಿ ನಿರತರಾದವರನ್ನೂ "ಕಾಯಿದೆಗನುಗುಣವಾಗಿ" ದಂಡಿಸುತಿದ್ದದ್ದು—ಎಲ್ಲವನ್ನೂ ಆ ವರದಿಯಲ್ಲಿ ಅವರು ಚಿತ್ರವತ್ತಾಗಿ ವಿವರಿಸಿದ್ದರು. ಪ್ರಾಣಹರಣ ಮಾಡಬಾರದೆಂದು ಬಹಳ ಜಾಗರೂಕತೆಯಿಂದ ಅವರು ನಡೆದಿದ್ದರು ಆದುದರಿಂದ ತಾವು ಅಹಿಂಸಾತ್ಮಕವಾಗಿಯೇ ಆಚರಿಸಿದೆವೆಂದು ಅವರ ವಾದವಾಗಿತ್ತು.

ಆ ಮೇಲೆ ಅವರು ಗಾಂಧೀಜಿಯೊಡನೆ ಪ್ರತಿ ಸರಕಾರ ಮತ್ತು ವಿಧ್ವಂಸಕ ಚಟುವಟಿಕೆಯ ಪ್ರಶ್ನೆಯನ್ನು ಸಮಗ್ರವಾಗಿ ಚರ್ಚಿಸಿದರು. "ನೀವು ಮಾಡಿದ್ದೆಲ್ಲ ಸರಿಯಾಗಿತ್ತೆಂದಾಗಲಿ ಅವಶ್ಯವಿತ್ತೆಂದಾಗಲಿ ನಾನು ಹೇಳಲಾರೆ," ಎಂದರು ಗಾಂಧೀಜಿ. "ಬದಲಿಗೆ, ನೀವು ಮಾಡಿದ್ದರಲ್ಲಿ ಹೆಚ್ಚಿನದು ಮಾಡಬಾರದಂಥದಿತ್ತೆಂದೇ ಹೇಳುವೆ. ಜನರು ಉದಾಸೀನರಾಗಿ ಉಳಿಯಲಿಲ್ಲೆಂದು ಸಂತೋಷ ಪಡಬೇಕು, ನಿಜ. ಆದರೆ ಇಷ್ಟೆಲ್ಲ ವರ್ಷಗಳ ನಂತರ ಅವರಿಗೆ ಕಾಂಗ್ರೆಸ್ಸಿನ ಧ್ಯೇಯ ಧೋರಣೆಯ ಸರಿಯಾದ ಅರಿವಾಗಲಿಲ್ಲವೆಂಬುದು ದುಃಖದ ವಿಷಯ. ಅವರು ಮಾಡಿದ್ದು ಅವಿಚಾರದ ಕೆಲಸ. ಆ ಕೆಲಸದ ಸ್ವರೂಪವೇ ಕೊನೆಯವರೆಗೆ ತಾಳಲಾರದಂಥದ್ದಿತ್ತು."

ಅಹಿಂಸೆಯಲ್ಲ

"ನೀವು ಹೇಗೆ ಒಂದು ರೇಲ್ವೆ ಮಾರ್ಗವನ್ನು ಕಡಿದೊಗೆದಿರಿ, ಹೇಗೆ ಒಂದು ಮಾರ್ಗವನ್ನು ನಿರುಪಯುಕ್ತಗೊಳಿಸಿದಿರಿ, ಕಚೇರಿಯನ್ನು ಸುಟ್ಟಿರಿ, ಠಾಣೆಯನ್ನು ಆಕ್ರಮಿಸಿದಿರಿ, ಪ್ರತಿ ಸರಕಾರವನ್ನೇ ಸ್ಥಾಪಿಸಿಕೊಂಡಿರಿ ಎಂಬೀ ಮೊದಲಾದುದನ್ನು ಬಹಳ ವಿವರವಾಗಿ ಬಣ್ಣಿಸಿದ್ದೀರಿ. ಇದು ಅಹಿಂಸೆಯ ತಂತ್ರವಲ್ಲ. ಪ್ರಾಣಹರಣವನ್ನು ಬಿಟ್ಟು ಉಳಿದುದೆಲ್ಲ ಅಹಿಂಸೆಯೆಂದು ಬಗೆದು ಜನರು ತಪ್ಪುಮಾಡಿದರು. ಕೆಲವೊಮ್ಮೆ ಕೊಲ್ಲುವುದು ಹಿಂಸೆಯ ಅತಿ ನಿಷ್ಕಲಂಕ ಅಂಗವಾಗಿ ಎವುದುಂಟು.. ಉಪದ್ರವಕಾರಿಯನ್ನು ಕೊಂದುಬಿಟ್ಟರೆ ಅವನ ಮಟ್ಟಿಗೆ ಒಂದು ಅವ್ಯವಸ್ಥೆಯೇ ಮುಗಿದಂತೆ. ಆದರೆ ಪೀಡನೆ ಛಲನೆಗಳೆಂಬುವು ಅದಕ್ಕಿಂತಲೂ ಕೆಟ್ಟವು. ಆದರಿಂದ ಉಪದ್ರವವನ್ನು ಕೊನೆಗಾಣಿಸಿದಂತೆಯೂ ಆಗಲಿಲ್ಲ. ಬದಲಿಗೆ ಆ ಉಪದ್ರವವನ್ನು ನಿಮ್ಮ ತಲೆಯ ಮೇಲೆಯೇ ತಂದು ಹೇರಿಸಿಕೊಂಡಂತಾಯಿತು. ಅಧಿಕಾರಿಗಳಲ್ಲಿ ಪ್ರತಿಹಿಂಸಾ ಬುದ್ಧಿಯ ಉದ್ರೇಕವಾಯಿತು. ಹೇಗಾದರೂ ಅವರು ಪ್ರತಿಹಿಂಸೆ ಮಾಡೇ ತೀರುತಿದ್ದರು ಎಂದು ನೀವು ವಾದಿಸಬಹುದು. ಆದರೆ ನಾವು ಇಚ್ಛಿಸಬೇಕಾದ್ದು ಅಥವಾ ಕುರಿಯ ಬೇಕಾದ್ದು ಇದಲ್ಲ. ಅವರನ್ನು ಭಯಗ್ರಸ್ತರನ್ನಾಗಿ ಮಾಡಿದರೆ ನಮಗೇನೂ ಲಾಭವಿಲ್ಲ.

"೧೯೪೨ ಅಗಸ್ಟದಲ್ಲಿ ಅಧಿಕಾರಿಗಳು ಭಯಗ್ರಸ್ತರಾದರು. ನಾವು ಅವರಿಗೊಂದು ನೆವವನ್ನೂ ದೊರಕಿಸಿಕೊಟ್ಟೆವು. ಆದರೆ ಅವರು ಸೋಲೆಂಬುದನ್ನೇ ಅರಿಯದ ಜನರು; ಅವರ ಹೇಡಿತನ ಮೂಲಭೂತವಾದುದಲ್ಲ. ಆದುದರಿಂದ, ಠಾಣೆ, ಕಚೇರಿ, ಪಂಚಾಯತ ನ್ಯಾಯಸ್ಥಾನ ಮೊದಲಾದವುಗಳು ಕೆಲಕಾಲ ನಿಮ್ಮ ಕೈಲಿ ಆಟಿಕೆಗಳಂತೆ ಇರಲೊಲ್ಲವೇಕೆಂದು ಬಿಟ್ಟರು. ಆದರೆ ತಮ್ಮ ಆಯುಕಟ್ಟಿನ ಗತ್ತನ್ನೆಲ್ಲ ಸಿದ್ಧಪಡಿಸಿಕೊಂಡ ನಂತರ ತಮ್ಮ ಪ್ರತೀಕಾರ ಯಂತ್ರದ ಸಮಸ್ತ ಬಲವನ್ನು ನಮ್ಮ ಮೇಲೆ ಎರಗಿಸಿದರು. ಹಿಂದುಸ್ತಾನ ಈ ಮಾರ್ಗದಿಂದ ಸ್ವಾತಂತ್ರ್ಯವನ್ನು ಗಳಿಸಲಾರದು. ನಾವು ಇದನ್ನು ಇನ್ನೊಮ್ಮೆ ಸಂಭವಿಸಗೊಡಬಾರದು.

"ಇಂದು ನೀವು ಬರಿ ಬ್ರಿಟನವೊಂದನ್ನೇ ಎದುರಿಸಿದರೆ ಸಾಲದು. ನೀವು ತ್ರಿಮೂರ್ತಿಗಳನ್ನು ಲೆಕ್ಕಕ್ಕೆ ತೆಗೆದುಕೊಳ್ಳಬೇಕು. ನೀವು ಅವರ ಆಯುಧದಿಂದಲೇ ಅವರನ್ನೆದುರಿಸಿದರೆ ಗೆಲ್ಲಲಾರಿರಿ. ಪರಮಾವಧಿಯೆಂದರೂ ಆಟಂ ಬಾಂಬಿನಿಂದಾಚೆಗೆ ಹೋಗುವದು ಸಾಧ್ಯವಿಲ್ಲ. ಎಲ್ಲ ಛಾಪಿನ ಸಾಮ್ರಾಜ್ಯವಾದವನ್ನು ವಿರೋಧಿಸಲು, ಈಗಿರುವ ಹಳೆಯದಾಗಿ ತುಕ್ಕು ಹಿಡಿದ ಹಿಂಸಾತ್ಮಕ ಬಂಡಾಯದ ಬದಲು ಹೊಸತೊಂದು ಉಪಾಯವನ್ನು ಕಂಡು ಹಿಡಿದ ಹೊರತು ಜಗತ್ತಿನ ಪೀಡಿತ ಜನಾಂಗಗಳಿಗೆ ಆಶಾಜ್ಯೋತಿಯೇ ಇಲ್ಲ.

"ರಶಿಯನ್ ಉದಾಹರಣೆಯನ್ನು ನೋಡಿ ಯಾರೂ ಮೋಸ ಹೋಗದಿರಲಿ," ಮುಂದುವರಿದರು ಗಾಂಧೀಜಿ. "ನಮ್ಮ ಸಂಪ್ರದಾಯ ರಶಿಯನ್ ಸಂಪ್ರದಾಯಕ್ಕಿಂತ ತೀರ ಬೇರೆ. ಐತಿಹಾಸಿಕ ಹಿನ್ನೆಲೆಯೂ ಬೇರೆಯೆ. ರಶಿಯಾದಲ್ಲಿ ಇಡಿ ಜನತೆಯೆ ಸಶಸ್ತ್ರವಾಗಿತ್ತು; ಹಿಂದುಸ್ತಾನದ ಜನತೆ ಬೇಕಷ್ಟು ತರಬೇತಿ ಕೊಟ್ಟರೂ ಶಸ್ತ್ರಗ್ರಹಣ ಮಾಡಲೊಲ್ಲದು. ಮಾತ್ರವಲ್ಲ, ಜಪಾನದಂಥ ಒಂದನೇ ನಂಬರಿನ ಮಿಲಿಟರಿ ರಾಷ್ಟ್ರವನ್ನು ಒಂದೇಟಿಗೆ ನಿಶ್ಶಸ್ತ್ರಗೊಳಿಸಿರುವ ನಮ್ಮ ಆಳರಸರು ನಮ್ಮ ಜನಕ್ಕೆ ಅವಶ್ಯಕ ತರಬೇತಿ ಕೊಡಲು ಅವಕಾಶವೀಯುವರೆಂದು ಬಗೆಯುವದು ವ್ಯರ್ಥ. ಇಂದು ಜಪಾನು ವಿಜಯಿಯ ಪಾದಮೂಲದಲ್ಲಿ ನಿರ್ವೀರ್ಯವಾಗಿ ನಮಸ್ಕಾರ ಮಾಡಿದೆ. ಆದರೆ ಅಹಿಂಸೆ ಸೋಲರಿಯದು. ಮಾತ್ರ ನಮ್ಮದು ನಿಜವಾದ ಅಹಿಂಸೆಯಾಗಿರಬೇಕು, ನಟನೆಯದಲ್ಲ. ನಾನೊಬ್ಬನೆ ಅಂಥ ಅಹಿಂಸೆಯ ಪ್ರತಿನಿಧಿಯಾಗಿ ಉಳಿದಿದ್ದರೂ ನನ್ನ ಕಣ್ಣಲ್ಲಿ ಒಂದು ಹನಿ ನೀರು ಬರಲಿಕ್ಕಿಲ್ಲ."

"ನಾವು ಇಷ್ಟೆಲ್ಲ ಮಾಡಿದ ಮೇಲೆ, ಇಷ್ಟೆಲ್ಲ ಸಂಕಟಗಳನ್ನು ಅನುಭವಿಸಿದ ಮೇಲೆ ನಮ್ಮ ಸತ್ವ ಯೋಗ್ಯ ಮಾರ್ಗದಲ್ಲಿ ನಿಯೋಜಿಸಲ್ಪಟ್ಟಿತೆ, ಜನತೆಯ ಜಾಗ್ರತಿ ತಪ್ಪು ದಾರಿ ಹಿಡಿಸಲ್ಪಟ್ಟಿತಲ್ಲವೇ?—ಎಂಬ ಸಂದೇಹ ನಮ್ಮಲ್ಲಿ ತಲೆದೋರಿದೆ," ಎಂದು ಆ ಗೆಳೆಯರು ಒಪ್ಪಿಕೊಂಡರು. "ಆದರೆ," ಶಂಕಿಸಿದರವರು, "ಅಹಿಂಸಾತ್ಮಕ ಬಂಡಾಯವೆಂದರೆ ಅಧಿಕಾರಾಕ್ರಮಣದ ಕಾರ್ಯಕ್ರಮವಲ್ಲವೆ ?"

"ಅಲ್ಲಿದೆ ನಿಮ್ಮ ಭ್ರಮೆ" ಎಂದರು ಗಾಂಧೀಜಿ. "ಅಹಿಂಸಾತ್ಮಕ ಬಂಡಾಯವೆಂದರೆ 'ಅಧಿಕಾರಾಕ್ರಮಣ'ದ ಕಾರ್ಯಕ್ರಮವಲ್ಲ. ಅದು ಪರಸ್ಪರ ಸಂಬಂಧದ ಸ್ವರೂಪಪರಿವರ್ತನೆಯ ಮೂಲಕ ಶಾಂತ ರೀತಿಯಿಂದ ಅಧಿಕಾರಪ್ರದಾನ ಮಾಡಿಸುವ ಕಾರ್ಯಕ್ರಮ. ಅಗಸ್ಟ ೮ ೧೯೪೨ ನೇ ದಿನ ಮುಂಬಯಿ ಅ. ಭಾ. ಕಾಂಗ್ರೆಸ್ ಸಮಿತಿ ಸಭೆಯಲ್ಲಿ ನಾನು ಅನುಮೋದಿಸಿದ ಪಂಚಮುಖ ಕಾರ್ಯಕ್ರಮವನ್ನು ಸಾಗಿಸಿದ್ದರೆ ಮತ್ತು ಪೂರ್ಣ ಅಹಿಂಸಾತ್ಮಕ ವಾತಾವರಣವಿದ್ದಿದ್ದರೆ, ಸರಕಾರದ ದಮನಶಕ್ತಿ ನಿರ್ಬಲವಾಗಿಬಿಡುತಿತ್ತು. ಅದು ರಾಷ್ಟ್ರೀಯ ಬೇಡಿಕೆಯನ್ನು ಮನ್ನಿಸಲೇಬೇಕಾಗಿ ಬರುತ್ತಿತ್ತು.

"ವಿದೇಶೀ ದಾಳಿಯೋ ಅಥವಾ ಅಂಥದೇ ಇನ್ನಾವುದೋ ಕಾರಣದಿಂದ ಆಳುವ ಶಕ್ತಿ ಅಧಿಕಾರ ತ್ಯಾಗಮಾಡಿದರೆ ಮತ್ತು ಆ ಮೂಲಕ ತೆರವು ಉಂಟಾಗಿದ್ದರೆ, ಜನತೆಯ ಸಂಸ್ಥೆ ಆ ಸರಕಾರದ ಕರ್ತವ್ಯಗಳನ್ನು ಸ್ವಾಭಾವಿಕವಾಗಿ ಸ್ವಾಧೀನಪಡಿಸಿಕೊಳ್ಳುತ್ತದೆ. ಆದರೆ ಅಂಥ ಜಾತೀಯ ಸರಕಾರಕ್ಕೆ ತನ್ನ ಇಚ್ಛೆಯನ್ನು ಕಾರ್ಯರೂಪಕ್ಕೆ ತರಲು ಅಹಿಂಸೆ ಮತ್ತು ಜನಸೇವಾಕಾಂಕ್ಷೆಯ ಹೊರತು ಬೇರಾವ ಅಧಿಕಾರವೂ ಇರುವದಿಲ್ಲ. ಅದು ಒತ್ತಾಯವನ್ನು ಸರ್ವಥಾ ಉಪಯೋಗಿಸಲಾರದು. ಅದರ ಕೈಕೆಳಗೆ ಅದರ ಅಭಿಪ್ರಾಯಕ್ಕೆ ವಿರೋಧಿಗಳಾಗಿರುವವರಿಗೂ ಸಂಪೂರ್ಣ ಭದ್ರತೆ ದೊರೆಯುವದು."

ಬಲವಂತದ ತಂತ್ರಕ್ಕಿಂತ ಅಹಿಂಸಾ ತಂತ್ರದ ಸಾಮರ್ಥ್ಯ ಅಪಾರವಾಗಿದೆಯೆಂಬುದಕ್ಕೆ ಉದಾಹರಣೆಯಾಗಿ ಗಾಂಧೀಜಿ ಬಾರ್ಡೋಲಿಯ ಉದಾಹರಣೆಯನ್ನಿತ್ತರು. ಮಿದನಾಪುರದಲ್ಲಿ ಮೊದಮೊದಲು ಜನರು ಕೆಲವೊಂದು ಅಧಿಕಾರದ ಸಾಂಕೇತಿಕ ಸ್ಥಾನಗಳನ್ನು ಆಕ್ರಮಿಸಲು ಸಮರ್ಥರಾದರೂ ತಮ್ಮ ಯಶಸ್ಸಿನ ಪ್ರಯೋಜನವನ್ನು ಅವರು ಉಳಿಸಿಕೊಳ್ಳಲಾರದೆ ಹೋದರು. ಬಾರ್ಡೋಲಿಯಲ್ಲಿ ಸತ್ಯಾಗ್ರಹಿಗಳು ತಮ್ಮ ವಿಜಯದ ಪ್ರಯೋಜನಗಳನ್ನು ಉಳಿಸಿಕೊಳ್ಳಬಲ್ಲವರಾದರು. "ಅದೂ ಅಲ್ಲದೆ," ಗಾಂಧೀಜಿ ಹೇಳಿದರು, "ನಿಮ್ಮ ಶೌರ್ಯವೆಲ್ಲ ಸೇರಿಯೂ ಸ್ತ್ರೀಯರ ಸತೀತ್ವಭಂಗವನ್ನು ತಡೆಯಲಾಗಲಿಲ್ಲ. ಇದು ಅಸಹನೀಯ. ಸ್ತ್ರೀಯರ ಮೇಲೆ ಯಾರೂ ಕೇಡುಗಣ್ಣು ಹಾಯಿಸಲು ಕೂಡ ಸಮರ್ಥನಾಗಬಾರದು. ಇದಕ್ಕೆ ಉಚ್ಚತರ ಪ್ರತಿಯ ಶೌರ್ಯದ ಪ್ರದರ್ಶನವಾಗಬೇಕಾಗಿದೆ. ಅರ್ಥಾತ್, ಮೃತ್ಯುವನ್ನೂ ತುಚ್ಛೀಕರಿಸುವ ಅಹಿಂಸಾತ್ಮಕ ಶೌರ್ಯ ಬೇಕು. ಅದರ ಮುಂದೆ ದಾಳಿಗಾರನ ಬಲ ನಿರರ್ಥಕವಾಗುತ್ತದೆ. ನಾನು ಮಾಡಲು ಯತ್ನಿಸುತ್ತಿರುವದು ಇದನ್ನೇ. ಅದಕ್ಕೆ ಸಮಯ ಹಿಡಿಯಬಹುದು. ಕೋಟ್ಯಂತರ ಜನರಲ್ಲಿ ಈ ಬಗೆಯ ಶೌರ್ಯವನ್ನು ತುಂಬಲು ದೀರ್ಘಕಾಲ ಹಿಡಿಯುತ್ತದೆ. ಈ ಬಗೆಯ ಅಹಿಂಸೆ ಎಂದಾದರೂ ಆಚರಣೆಯಲ್ಲಿಳಿಯುವದೋ ಇಲ್ಲವೋ ನಾನು

(೧೦ ನೇ ಪುಟ ನೋಡಿರಿ)

ಪ್ರಶ್ನೆ—ಪೆಟ್ಟಿಗೆ

ಪ್ರಶ್ನೆ ೧: ಸಂಭಾಷಣೆಯಲ್ಲಿ ಪ್ರಸಕ್ತರಾಗಿದ್ದಾಗ, ಅಥವಾ ಬೌದ್ಧಿಕ ಕಾರ್ಯದಲ್ಲಿ ತೊಡಗಿದ್ದಾಗ, ಇಲ್ಲವೆ ಸಹಸಾ ಮನಸು ಬೇಗುದಿಗೊಂಡಾಗ, ನಿಜ ಹೃದಯದಲ್ಲಿ "ರಾಮನಾಮ" (ಪರಮಾತ್ಮ ಧ್ಯಾನ) ಜಪಿಸಬಹುದೆ ? ಅಂಥ ಸಮಯಗಳಲ್ಲಿ ಯಾರಾದರೂ ಹಾಗೆ ಮಾಡುವರೆ? ಮಾಡುತಿದ್ದರೆ, ಹೇಗೆ ?

ಉತ್ತರ ೧: ಯಾವುದೇ ಸಮಯದಲ್ಲಿ, ನಿದ್ರೆಯಲ್ಲಿ ಕೂಡ ಹಾಗೆ ಮಾಡಬರುವದೆಂದು ಅನುಭವದಿಂದ ಸಿದ್ಧವಾಗಿದೆ. ಮಾತ್ರ, ಅಂಥವನ ಹೃದಯದಲ್ಲಿ "ರಾಮನಾಮ" ಆವಾಹಿತವಾಗಿರಬೇಕು. ನಾಮಧ್ಯಾನವೊಂದು ಅಭ್ಯಾಸವಾಗಿ ಬಿಟ್ಟರೆ, ಹೃದಯಾಂತರಾಳದಲ್ಲಿ ಅದು ಹೃದಯಸ್ಪಂದನದಷ್ಟೆ ಸಹಜವಾಗಿ ಸದಾ ನುಡಿಸುತ್ತಿರಬಲ್ಲದು. ಹಾಗಿಲ್ಲದಿದ್ದರೆ "ರಾಮನಾಮ" ಬರಿ ಯಾಂತ್ರಿಕವಾಗಿ ಬಿಡಬಹುದು ಅಥವಾ ಬಹಳಾದರೆ ಅದು ಹೃದಯದ ಹೊರಚಿಪ್ಪನ್ನಷ್ಟೆ ಸ್ಪರ್ಶಿಸಬಲ್ಲದು. ಹೃದಯರಾಜ್ಯದಲ್ಲಿ ರಾಮನಾಮದ ಅಧಿಷ್ಠಾನವಾಯಿತೆಂದರೆ ಬಾಯಿಂದ ಅದನ್ನು ಜಪಿಸುವ ಪ್ರಶ್ನೆಯೇ ಹುಟ್ಟುವದಿಲ್ಲ. ಏಕೆಂದರೆ ಅದು ಆಗ ಅನಿರ್ವಚನೀಯವೆನಿಸುತ್ತದೆ. ಆದರೆ ಈ ಅವಸ್ಥೆಗೆ ಏರಿದವರು ಬಹಳ ಕಡಿಮೆ ಜನರೆಂದು ಹೇಳಲಡ್ಡಿಯಿಲ್ಲ.

"ರಾಮನಾಮ" ದಲ್ಲಿ ಅದಕ್ಕೆ ಆರೋಪಿಸಲಾದ ಎಲ್ಲ ಮಹಿಮೆಯೂ ಇದೆಯೆಂಬಲ್ಲಿ ಏನೂ ಸಂಶಯವಿಲ್ಲ. ಇಚ್ಛಾಮಾತ್ರದಿಂದಲೇ ಯಾರೂ "ರಾಮನಾಮ" ವನ್ನು ಹೃದಯದಲ್ಲಿ ಅಧಿಷ್ಠಿತಗೊಳಿಸಲಾರರು. ಅವಿರತವಾದ ಪ್ರಯತ್ನ ಅಕ್ಷಯ ಸಹನೆಯೂ ಅದಕ್ಕೆ ಬೇಕು. ತತ್ವಜ್ಞಾನಿಯ ಇಲ್ಲದ ಪರುಷಮಣಿಯನ್ನು ಸಂಪಾದಿಸಲು ಮನುಷ್ಯರು ಎಷ್ಟು ಶ್ರಮವನ ಸಹನೆಯನ್ನೂ ವ್ಯಯಮಾಡಿಲ್ಲ ? ನಿಜವಾಗಿ ದೇವರ ನಾಮದ ಬೆಲೆ ಅದಕ್ಕಿಂತಲೂ ಲೆಕ್ಕವಿಲ್ಲದಷ್ಟು ಪಾಲು ಹೆಚ್ಚು, ಮಾತ್ರವಲ್ಲ ಅದು ನಾ ಕಾಲವೂ ಇರುವಂಥದೆ.

ಪ್ರಶ್ನೆ ೨: ಪರಮಶಾಂತಿಯ ಅವಸ್ಥೆಗೆ ಏಟ್ಟಬೇಕಾದರೆ ಮನಸ್ಸು ನಿಶ್ಚೇತನಾವಸ್ಥೆಯನ್ನೂ ಒಳಗೊಂಡು ಅನೇಕ ಅವಸ್ಥೆಗಳನ್ನು ಅನುಭವಿಸಬೇಕಾಗುವದು ಅವಶ್ಯವೇ ? ನಾವು ಸ್ಥಿರವಾಗಿಯೂ ಶಾಂತರಾಗಿಯೂ ಇರುವಾಗ ಒಮ್ಮೊಮ್ಮೆ ಸಲ ಸ್ವಪ್ನದಲ್ಲಾದಂತೆ ಒಳಗೊಳಗೆ ಅಶಾಂತಿಯೇಕೆ ಆವರಿಸುತ್ತದೆ ? ನಿಜಜೀವನದಲ್ಲಿ ಅನುಭವಿಸದ, ಕಾಣದ ಸಂಗತಿಗಳು ಕೂಡ ಮನುಷ್ಯನ ಜಾಗ್ರತ್ ಅಥವಾ ಸು[illegible] ಚಿತ್ತ[illegible] ಹೇಗೆ ಹೊಗುತ್ತವೆ ?

ಉತ್ತರ ೨: ಸಾಧಾರಣ ಎಲ್ಲರಮ[illegible] ಪದಕ್ಕೆ ಮುಟ್ಟುವ ಮೊದಲು ಎಲ್ಲಾ ರೀತಿಯ ಸ್ಥಿತ್ಯಂತರಗಳನ್ನು ಹಾದು ಹೋಗಬೇಕಾಗುತ್ತದೆ "ಸಾಧಾರಣ ಎಲ್ಲರೂ" ಎಂಬುದನ್ನು ನಾನ ಬೇಕೆಂದೇ ಉಪಯೋಗಿಸಿದ್ದೇನೆ. ಏಕೆಂದರೆ ನಾನು ಮೇಲೆ ಹೇಳಿದ ನಿಯಮ ಪೂರ್ವಜನ್ಮದಲ್ಲಿ ಅವಿರತ ಪ್ರಯತ್ನ ಮಾಡಿ ಇನ್ನೂ ಪೂರ್ಣ ಯಶಸ್ವಿಯಾಗದಿರುವವರಿಗೆ ಅನ್ವಯಿಸುವದಿಲ್ಲ. ಅಂಥವರು ಇಹಜನ್ಮದಲ್ಲಿ ಸಾಧನೆಯನ್ನು ಆಚರಿಸುವ ಅವಶ್ಯವಿಲ್ಲ. ಶಾಂತವಾಗಿದ್ದಂತೆ ಕಾಣುವ ಮನಸ್ಸು ಒಳಗೆ ಸ್ವಪ್ನದಿಂದೆಂಬಂತೆ ಕಲಕುತ್ತಿದ್ದರೆ ಅದರ ಅರ್ಥ ಆ ಶಾಂತಿ ಕೇವಲ ಬಾಹ್ಯವಾದುದು ಪಾರಮಾರ್ಥಿಕವಲ್ಲ ಎಂದು. ಮನುಷ್ಯನ ಜೀವನದಲ್ಲಿ ಅನುಭವಕ್ಕೆ ಬಾರದಿದ್ದ ಯಾವುದೋ ವಿಚಾರ ಅವನ ಮನಸ್ಸನ್ನು ಕಲಕುತ್ತಿದ್ದರೆ, ಅವನ ಸಂಪರ್ಕಕ್ಕೆ ಬಂದೂ ಜ್ಞಾಪಕಕ್ಕೆ ನಿಲುಕದ ವಿಷಯಗಳಿವೆಯೆಂದು ನನ್ನ ಅಭಿಪ್ರಾಯ.

ಪ್ರಶ್ನೆ ೩: ಕಾರ್ಯಬಾಹುಳ್ಯದಿಂದ ದಿನನಿತ್ಯದ ಭಜನಪೂಜನಗಳನ್ನು ವಿಧಿಯಂತೆ ಮಾಡದ[illegible] ಹಾನಿಯುಂಟೇ? ಯಾವುದಕ್ಕೆ ಪ್ರಥಮ[illegible] ಕೊಡಬೇಕು— ಸೇವೆಗೋ ಜಪಮಾಲೆಗೊ?

ಉತ್ತರ ೩: ಸೇವಾಕಾರ್ಯದ ಬಾಹುಳ್ಯವೆಷ್ಟೇ ಇರಲಿ, ಪರಿಸ್ಥಿತಿಯ ಅಡಚಣೆಗಳೆಷ್ಟೇ ಇರಲಿ, ರಾಮನಾಮಧ್ಯಾನ ನಿಲ್ಲುವಂತಿಲ್ಲ. ಸಂದರ್ಭಾನುಸರಿಸಿ ಬಾಹ್ಯವಿಧಿ ಬದಲಾಗುವದು. ಜಪಮಾಲೆಯಿಲ್ಲದಿದ್ದರೆ ಹೃದಯಾಧಿಷ್ಠಿತವಾದ ರಾಮನಾಮ ಧ್ಯಾನ ತಡೆಯಬೇಕಾಗಿಲ್ಲ.

ಸೇವಾಗ್ರಾಮ — ಮೊ. ಕ. ಗಾಂಧಿ

೯-೨-೪೬ — (ಹಿಂದುಸ್ತಾನಿಯಿಂದ)

ಕೂಲಿಕಾರರ ಕೆಲ ಪ್ರಶ್ನೆಗಳು

ಮದ್ರಾಸ ಪಳನಿಯ ನನ್ನ ಯಾತ್ರೆಯಲ್ಲಿ ಗೋಲ್ಡನ್‌ರಾಕದ ಕೂಲಿಕಾರರ ಪ್ರಚಂಡ ಸಭೆಯಲ್ಲಿ ೨೫೫ ಜನರು ಸಹಿಮಾಡಿದ್ದ ಈ ಕೆಳಗಿನ ಪತ್ರಿಕೆಯನ್ನು ನನಗೆ ಕೊಡಲಾಯಿತು.

"ಸೌಥ ಇಂಡಿಯನ ರೇಲ್ವೆಯ ಕೆಲಸಗಾರರಾದ ನಾವು ನಮ್ಮ ಮಹತ್ವದ ಸಮಸ್ಯೆಗಳನ್ನು ನಿಮ್ಮ ಬೆಂಬಲ ದೊರಕಿಸುವದಕ್ಕಾಗಿ ನಿಮಗೆ ನಿವೇದಿಸುತ್ತೇವೆ.

"ನಾವು ತಿಂಗಳಿಗೆ ಕನಿಷ್ಠ ಸಂಬಳವೆಂದು ೩೦ ರೂ. ಗಳನ್ನು ಕೇಳುತ್ತಿದ್ದೇವೆ. ಈಗ ಕನಿಷ್ಠ ಸಂಬಳವು ೮ ರೂ. ಯಿಂದ ೧೫ ರೂ. ಗಳ ವರೆಗೆ ಇದೆ. ನಮ್ಮಲ್ಲಿ ಹೆಚ್ಚು ಜನರಿಗೆ ತಿಂಗಳಿಗೆ ೧೮ ರೂ. ಗಳಿಗಿಂತ ಕಡಿಮೆ ಸಿಗುತ್ತದೆ.

"೪೨೦೦೦ ರೇಲ್ವೆ ಕೆಲಸಗಾರರಲ್ಲಿ ಕೇವಲ ೮೦೦೦ ಕೆಲಸಗಾರರಿಗೆ ವಾಸಿಸಲು ಮನೆಗಳನ್ನು ಕೊಟ್ಟಿದ್ದಾರೆ. ಆದರೆ ಈ ಮನೆಗಳು ಕೂಡ ಗಾಳಿ ಬೆಳಕುಗಳಿಲ್ಲದೆ ಅನಾರೋಗ್ಯಕರವಾಗಿವೆ.

"ನಮ್ಮ ತೊಂದರೆಗಳನ್ನು ನಿವಾರಿಸಿ ನಮ್ಮ ಸೂಚನೆಗಳನ್ನವರು ಸ್ವೀಕರಿಸದಿದ್ದರೆ ಮಧ್ಯಸ್ಥನನ್ನಾದರೂ ನೇಮಿಸಬೇಕು ವಿಚಾರಣೆಯಾದರೂ ನಡೆಯಬೇಕೆಂದು ಅ. ಭಾ. ರೇಲ್ವೆ ಕೆಲಸಗಾರರ ಮಹಾ ಮಂಡಳದವರು ಕೇಳಿಕೊಂಡ ನಿರ್ಧಾರವು ನಿಮಗೆ ವಿದಿತವಾಗಿರಬಹುದು. ರೇಲ್ವೆ ಪದ್ಧತಿಯನ್ನೂ ಕೆಲಸಗಾರರ ಪರಿಸ್ಥಿತಿಯನ್ನೂ ಸುಧಾರಿಸುವದಕ್ಕಾಗಿ ನನ್ನ ಸೂಚನೆಗಳಿವೆ. ನಮ್ಮ ಮಹಾ ಮಂಡಳದವರು ರೇಲ್ವೆ ಬೋರ್ಡು ಮತ್ತು ಸರಕಾರದೆದುರು ಮಂಡಿಸಿದ ಹದಿನಾರು ಸೂಚನೆಗಳನ್ನು ತಮ್ಮ ಅವಗಾಹನೆಗಾಗಿ ಈ ಕೆಳಗೆ ಕೊಡುತ್ತೇವೆ—

೧. ಮೊದಲನೆಯದಾಗಿ ವಾರದಲ್ಲಿಯ ಕೆಲಸದ ಗಂಟೆಗಳನ್ನು ೪೦ ಕ್ಕೆ ಇಳಿಸಬೇಕು. ನಂತರ ಕೂಲಿಯಲ್ಲಿ ಕಡಮೆ ಮಾಡದೆ ಸಂಚಾರಿ ಕೆಲಸಗಾರರನ್ನೊಳಗೊಂಡು ಎಲ್ಲರಿಗೂ ೪೦ ಗಂಟೆ ಕೆಲಸವಿರಬೇಕು.

೨. ರೇಲ್ವೆಯ ಎಲ್ಲ ಕೆಲಸಗಾರರಿಗೂ ವಾರಕ್ಕೊಂದು ದಿನ ಬಿಡುವನ್ನು ಕೊಡಬೇಕು.

೩. ಕಾದಿಟ್ಟ ರಜೆಯನ್ನು ಕಾಲುಪಟ್ಟು ಹೆಚ್ಚಿಸಬೇಕು.

೪. ಹಳಿಗಳನ್ನು ಕಾಪಾಡುವ ಕೆಲಸಗಾರರು ಕಾಯ್ದುಕೊಳ್ಳಬೇಕಾದ ಹಳಿಗಳ ಉದ್ದಳತೆಯನ್ನು ಕಡಿಮೆ ಮಾಡಬೇಕು.

೫. ದಿನಗೂಲಿಯ ಮತ್ತು ಇತರ ಕೆಳದರ್ಜೆಯ ಕೆಲಸಗಾರರಿಗೂ ರಜೆಯ ಸೌಕರ್ಯ ಕೊಡಬೇಕು.

೬. ಗುತ್ತಿಗೆಯಿಂದ ಕೆಲಸ ಮಾಡಿಸಿಕೊಳ್ಳುವದನ್ನು ಬಿಟ್ಟು ಖಾತೆಯ ಮುಖಾಂತರವೇ ಕೆಲಸ ಮಾಡಿಸಿಕೊಳ್ಳಬೇಕು.

೭. ಇಂಜನ, ಪ್ರಯಾಣಿಕರ ಡಬ್ಬಿ, ಇತರ ಡಬ್ಬಿಗಳನ್ನು ಇಂತಿಷ್ಟೇ ಮೈಲುಗಳ ನಂತರ ಸ್ವಚ್ಛ ಮಾಡಬೇಕೆಂದಿದ್ದ ಮೈಲುಗಳ ಸಂಖ್ಯೆಯನ್ನು ಕಡಿಮೆ ಮಾಡಬೇಕು.

೮. ವರ್ಕಶಾಪದ ಕಾರ್ಯಕ್ಷೇತ್ರವನ್ನು ವಿಸ್ತರಿಸಿ ಇಂಜನದ ವಿಭಾಗಗಳನ್ನೂ ಬಾಯಿಲರಗಳನ್ನೂ ತಯಾರಿಸುವಂತೆ ಮಾಡುವದು.

೯. ಇಂಜಿನು, ಡಬ್ಬಿ ಮತ್ತು ವಾಗೀನುಗಳನ್ನು ಇಲ್ಲಿಯ ಕಾರಖಾನೆಗಳಲ್ಲಿಯೇ ಸಿದ್ಧಪಡಿಸಬೇಕು.

೧೦. ಬೀಸಣಿಕೆ, ಸ್ನಾನದ, ನಿದ್ರಿಸುವ, ಸೌಕರ್ಯಗಳನ್ನೊಳಗೊಳ್ಳುವಂತೆ ೩ ನೇ ತರಗತಿಯ ಡಬ್ಬಿಗಳನ್ನು ಹೊಸದಾಗಿ ಕಟ್ಟಬೇಕು.

೧೧. ಯುದ್ಧ ಕಾಲದಲ್ಲಿ ಮುಚ್ಚಿಬಿಡಲಾಗಿದ್ದ ಎಲ್ಲ ಮಾರ್ಗಗಳನ್ನೂ ನಿಲ್ಲಿಸಿಬಿಡಲಾಗಿದ್ದ ಎಲ್ಲ ಗಾಡಿಗಳನ್ನೂ ಪುನಃ ಪ್ರಾರಂಭಿಸಿ ಸಾರ್ವಜನಿಕರ ಹಿತಕ್ಕಾಗಿ ಹೊಸದಾಗಿ ರೇಲ್ವೆ ಮಾರ್ಗಗಳನ್ನು ಪ್ರಾರಂಭಿಸುವದು.

೧೨. ರೇಲ್ವೆ ಕೆಲಸಗಾರರಿಗಾಗಿ ಆರೋಗ್ಯಕರ ಮನೆಗಳನ್ನು ಕಟ್ಟಿಸಲು ಪ್ರಾರಂಭಿಸಬೇಕು.

೧೩. ನಾಡಿನ ಅವಶ್ಯಕತೆಯಂತೆ ಹೊಸ ಮಾರ್ಗಗಳನ್ನು ಹಾಕುವದು.

೧೪. ಅವಶ್ಯವಿದ್ದಲ್ಲಿ ಎರಡು ಮಾರ್ಗಗಳನ್ನು ಪ್ರಾರಂಭಿಸುವದು.

೧೫. ರೇಲ್ವೆ ಮಾರ್ಗಕ್ಕೆ ನಿಲುಕದ ಹಳ್ಳಿ-ಪಟ್ಟಣಗಳಿಗೆ ರೇಲ ಮೋಟಾರ ಸಾರಿಗೆ ಪ್ರಾರಂಭಿಸಬೇಕು.

೧೬. ಈಗ ರೇಲ್ವೆಯವರ ಮೇಲ್ವಿಚಾರಣೆಯಲ್ಲಿರುವ ಆರ್.ಎ.ಎಫ್. ವರ್ಕಶಾಪಗಳನ್ನು ಉಳಿಸಿಕೊಂಡು ವೈಮಾನಿಕ ಖಾತೆಗೆ ಸಹಾಯ ನೀಡುವಂತೆ ಮಾಡಬೇಕು.

"ಪೂರ್ಣಕೆಲಸ, ಕನಿಷ್ಠ ವೇತನ ಮತ್ತು ವಸತಿ ಸೌಕರ್ಯ ಮೊದಲಾದ ಈ ನಮ್ಮ ಎಲ್ಲ ಬೇಡಿಕೆಗಳಿಗೆ ತಮ್ಮ ಬೆಂಬಲವನ್ನಿತ್ತು ರಾಷ್ಟ್ರಕ್ಕೆ ದಾರಿ ತೋರಬೇಕು. ರೇಲ್ವೆ ಮಂಡಳದವರು ಅದನ್ನೊಪ್ಪುವಂತೆ ಮಾಡಿ ರೇಲ್ವೆಯ ಸಾವಿರಾರು ಕೆಲಸಗಾರರೂ ಇತರರೂ ನಿರುದ್ಯೋಗ, ದುಃಖ, ದಾರಿದ್ರ್ಯಗಳಿಗೆ ಬಲಿಯಾಗದಂತೆ ನೋಡಿಕೊಳ್ಳಬೇಕೆಂದು ಪ್ರಾರ್ಥಿಸುತ್ತೇವೆ."

ಈ ಪತ್ರದಲ್ಲಿ ಹೇಳಿರುವಂತೆ ವಿಸರ್ಜಿತ ಸೈನಿಕರಿಗೆ ಇಂಬುಗೊಡುವದಕ್ಕಾಗಿ ರೇಲ್ವೆ ಕೆಲಸಗಾರರನ್ನು ಕಡಿಮೆ ಮಾಡುತ್ತಿದ್ದರೆ ಇದು ಇಮ್ಮಡಿ ತಪ್ಪು ಎಂದು ನನ್ನ ಅಭಿಪ್ರಾಯ. ಈ ಅದಲು ಬದಲಿನಿಂದ ತಮಗೆ ಹಿತವಾಗುವದೆಂದು ಇದರ ಪುರಸ್ಕರ್ತರು ತಿಳಿದುಕೊಳ್ಳುವದು ತಪ್ಪು. ಅನುಗ್ರಹಕ್ಕೆ ಪಾತ್ರನಾಗುವ ಸೈನಿಕನು ಸೈನಿಕನಾಗಿರುವದಿಲ್ಲ. ಎರಡನೆಯ ತಪ್ಪೆಂದರೆ ಈಗ ಕಡಿತಕ್ಕೆ ಗುರಿಯಾಗಬಹುದಾದವರು ತಮ್ಮದೇನೂ ತಪ್ಪಿಲ್ಲದೆ ನಿರುದ್ಯೋಗಿಗಳಾಗಬೇಕಾಗುವರು.

ಇನ್ನು ಅವರ ಬೇಡಿಕೆಗಳಲ್ಲಿ ೧, ೯ ಮತ್ತು ೧೨ ನೇಯದು ಕೂಲಿಕಾರರ ಕಕ್ಷೆಯಲ್ಲಿ ಬರುತ್ತವೆ. ಆದರೆ ಇವು ನ್ಯಾಯವಾದುವೊ ಇಲ್ಲವೊ ಎಂಬುದನ್ನು ರೇಲ್ವೆ ಅಧಿಕಾರಿಗಳ ಹೇಳಿಕೆಯನ್ನೂ ಕೇಳಿಕೊಂಡ ವಿನಾ ಹೇಳಲಿಕ್ಕೆ ಬರುವಂತಿಲ್ಲ. ಅವನ್ನು ಮಧ್ಯಸ್ಥನಿಗೆ ಒಪ್ಪಿಸಿಬಿಡಬೇಕು. ಮಧ್ಯಸ್ಥನ ನಿರ್ಣಯವನ್ನು ಕೇಳಿಕೊಂಡ ವಿನಾ ಆ ಕಾರಣಗಳಿಗಾಗಿ ಸಂಪು ಹೂಡಬಾರದು. ಹಣಕ್ಕಾಗಿ ಹೂಡುವ ಸಂಪು ಸ್ವಾಧಿಕಾರದ ನಿರ್ದೇಶವಾಗುವದರಿಂದ ಗಂಡಾಂತರವು.

೧೦, ೧೧, ೧೩ ಮತ್ತು ೧೬ ನೇ ಬೇಡಿಕೆಗಳನ್ನು ಕೆಲಸಗಾರರು ನ್ಯಾಯವಾಗಿ ಬೇಡಬಾರದು. ಅವು ಪ್ರಯಾಣಿಕರ ತೊಂದರೆಗಳಾಗಿರುವದರಿಂದ ಪ್ರಯಾಣಿಕರು ಅಂದರೆ ಸಾರ್ವಜನಿಕರು ಅವುಗಳ ಬಗ್ಗೆ ಪ್ರಯತ್ನಿಸಬಲ್ಲರು.

೧೦ ನೇ ಬೇಡಿಕೆಯು ದುಂದುಗಾರಿಕೆಯದೆಂದು ನನಗನಿಸುತ್ತದೆ. ಮೂರನೆ ವರ್ಗದ ಪ್ರಯಾಣಿಕರೆ ಇದುವರೆಗೆ ಹೆಚ್ಚಾಗಿದ್ದಾರೆ. ದಿನದಿನಕ್ಕೆ ಹೆಚ್ಚೆಚ್ಚು ಸೌಕರ್ಯ ಅವರಿಗೇ ದೊರೆಯಬೇಕು; ೧ ನೇ, ೨ ನೇ ವರ್ಗದವರಿಗಲ್ಲ ಎಂಬುದೂ ನಿಸ್ಸಂಶಯ. ಅಲ್ಪಾವಧಿಯಲ್ಲಿಯ ಗಾಡಿಯಲ್ಲಿಯ ಈ ವರ್ಗಗಳು ಇಲ್ಲದಂತಾಗುವವು. ವರ್ಗೀಕರಣವಿಲ್ಲದ ಸಮಾಜವೆ ಆದರ್ಶ ಸಮಾಜ. ಇಂಥ ಸಮಾಜದಲ್ಲಿ ಜಾತಿ ವರ್ಗಗಳ ಭೇದವೇ ಇರುವದಿಲ್ಲ. ಆ ದಿನವು ಬರುವ ವರೆಗೆ ೧ನೇ ೨ನೇ ವರ್ಗಗಳ ಸೌಕರ್ಯಗಳನ್ನು ನಿರ್ದಿಷ್ಟಗೊಳಿಸಿ ಅವಶ್ಯವಿದ್ದಲ್ಲಿ ಕಡಿಮೆ ಮಾಡಿ ಅದನ್ನು ಹೆಚ್ಚು ಲಕ್ಷವನ್ನು ಮೂರನೇ ವರ್ಗದ ಪ್ರಯಾಣಿಕರತ್ತ ಪೂರೈಸಬೇಕಾಗಿದೆ. ಎಷ್ಟೇ ದೂರದ ಪ್ರಯಾಣವಿದ್ದರೂ ಸಾವಿರಾರು ಜನರಿಗೆ ಸ್ನಾನದ ಸೌಕರ್ಯವನ್ನಿಟ್ಟುಕೊಂಡು ನಡೆಯುವ ಮೂರನೆ ವರ್ಗದ ಡಬ್ಬಿಗಳು ಎಂದಾದರೂ ಅಸ್ತಿತ್ವದಲ್ಲಿ ಬರಬಹುದೆಂದು ನನಗೇನೂ ಅನಿಸುವದಿಲ್ಲ. ಮೂರನೆ ವರ್ಗದ ಪ್ರಯಾಣಿಕರಿಗಾಗಿ ರೇಲ್ವೆ ನಿಲ್ದಾಣಗಳಲ್ಲಿ ಸ್ನಾನದ ವ್ಯವಸ್ಥೆ ಇಡುವದು ಅಗತ್ಯವಾಗಿದೆ. ರೇಲ್ವೆ ಡಬ್ಬಿ, ರೇಲ್ವೆ ನಿಲ್ದಾಣಗಳ ಉದಾಹರಣೆಯಿಂದ ಸಾರ್ವಜನಿಕರಿಗೆ ನೈರ್ಮಲ್ಯ ಮತ್ತು ಸ್ವಚ್ಛತೆಯ ಪಾಠ ಕಲಿಸಬೇಕು. ಇದು ಇಂದಿನ ಪರಿಸ್ಥಿತಿ ಅಲ್ಲ. ನಿಲ್ದಾಣಗಳಲ್ಲಿ ಹಿಂದೂ-ಮುಸ್ಲಿಂ ನೀರು ಚಹಾಗಳು ಬೇಗನೆ ಇಲ್ಲದಂತಾದಷ್ಟು ಉತ್ತಮ. ಈ ಅಸ್ವಾಭಾವಿಕ ಅಧಾರ್ಮಿಕ ಭೇದಗಳನ್ನು ಸರಕಾರದವರು ಮನ್ನಿಸುವವಾದರೂ ಏಕೆ? ತಮ್ಮ ಜಾತಿಯವರಲ್ಲದ ರು ಸಲ್ಲಿಸುವ ಸೇವೆ ಸ್ವೀಕರಿಸಿದರೆ ತಾವು ಭ್ರಷ್ಟರಾಗುತ್ತೇವೆನ್ನುವವರು ತಮ್ಮ ಮಾರ್ಗವನ್ನು ತಾವೇ ಕಂಡುಕೊಳ್ಳಲಿ ಎಂದು ಬಿಡಬೇಕು.

ಮಹಿಳಾ—ವಿಭಾಗ

ಗೌಹತಿಯು ಆಸಾಮದ ಮಹಾದ್ವಾರ. ನಗರಕ್ಕೆ ಕೆಲವೇ ಮೈಲು ದೂರದಲ್ಲಿರುವ ಶಾರಣ್ಯ ಎಂಬ ಹಳ್ಳಿಯಲ್ಲಿ ನಮಗಾಗಿ ಒಂದು ಆಶ್ರಮವನ್ನು ಹೊಸದಾಗಿ ಕಟ್ಟಲಾಗಿತ್ತು. ಆಶ್ರಮವು ಒಂದು ದಿನ್ನೆಯ ಮೇಲಿದೆ. ಅಲ್ಲಿಂದ ಇಡಿ ಹಳ್ಳಿಯ ನೋಟವು ಚನ್ನಾಗಿ ಕಾಣಿಸುತ್ತದೆ. ಗಾಂಧಿಯವರಿಗೆ ಚಾಪೆಯ ಗುಡಿಸಲೊಂದು ರಚಿಸಲ್ಪಟ್ಟಿದೆ. ಇವು ತಾತ್ಪೂರ್ತಿಕವಾಗಿದ್ದರೂ ಇಲ್ಲಿಯೆ ಶಾಶ್ವತವಾಗಿ ಒಂದು ಕಟ್ಟಡವನ್ನು ನಿರ್ಮಿಸಲಾಗುವದು. ಅಡಿಗೆಯ ಮನೆ ಹಾಗು ಜಗಲಿಯುಳ್ಳ ಸಾದಾ ಕಟ್ಟಡವೊಂದು ಆಗಲೆ ತಯಾರಾಗಿದೆ. ಗೌಹತಿಯ ಡಾ. ದಾಸರ ಮಗಳಾದ ಅಮಲಪ್ರಭಾದೇವಿಯವರು ಹಳ್ಳಿಗರ ಸೇವೆಯಲ್ಲಿಯೆ ತಮ್ಮ ದೇಹ ಸವೆಸಲು ನಿರ್ಧರಿಸಿದ್ದಾರೆ. ಮದುವೆ ಮಾಡಿಕೊಳ್ಳಬಾರದೆಂದೂ ಅವರು ನಿರ್ಣಯಿಸಿರುವರು. ಅವರ ತಂದೆಯಾದರೂ ಮಗಳ ಕೆಲಸದಲ್ಲಿ ಅಡ್ಡಬರದೆ ಆವಳಿಗೆ ಬೇಕಾಗುವ ಸಹಾಯವನ್ನೆಲ್ಲ ನೀಡುತಿದ್ದಾರೆ. ಅಮಲಪ್ರಭಾದೇವಿಯವರು ಮೂರು ಹಳ್ಳಿ ಹುಡಿಗೆಯರನ್ನು ತರಬೇತುಗೊಳಿಸುತ್ತಿರುವರು. ಅವರ ತಂಗಿಯು ಡಾಕ್ಟರಳಿದ್ದಾಳೆ. ಈ ತಂಗಿಯ ಸಹಾಯವೂ ಅವರಿಗೆ ಸಿಗುತ್ತದೆ. ನಾವು ಅಲ್ಲಿದ್ದಾಗ ನಮ್ಮ ಅಡಿಗೆಗೆ ಏರ್ಪಾಟನ್ನು ಈ ಡಾಕ್ಟರಳು ಮಾಡುತಿದ್ದಳು. ಬಾಳೆಯ ದಿಂಡಿನ ಎಲೆಯ ಮೇಲೆ ನಮಗೆ ಊಟ ಬಡಿಸಲಾಗುತಿತ್ತು. ಸಮೀಪದ ಎರಡು ಹಳ್ಳಿಗಳಿಂದ ಒಳ್ಳೆ ಹಾಲನ್ನು ತರಿಸಿ ಕೊಡುತ್ತಿದ್ದರು. ಸಾದಾ ಪಲ್ಲೆ, ಅನ್ನ ಇಲ್ಲವೆ ರೊಟ್ಟಿ, ಹರಿವೆಸೊಪ್ಪು, ಟೊಮಾಟೊ, ಹಸಿಉಳ್ಳಾಗಡ್ಡೆ ಮತ್ತು ಮೂಸಂಬಿ ಹಣ್ಣುಗಳು ನಮಗೆ ಪೂರೈಸಲ್ಪಡುತಿದ್ದವು. ಶ್ರೀಮಂತರ ಮನೆಯಲ್ಲಾದಂತೆ ಇಲ್ಲಿ ಯಾವದೂ ವ್ಯಥಾ ಚಲ್ಲಲ್ಪಡುತಿದ್ದಿಲ್ಲ. ನಾವು ಅಲ್ಲಿದ್ದಾಗ ಆ ಪ್ರದೇಶವು ಪ್ರೇಕ್ಷಕರಿಂದ ತುಂಬಿ ತುಳುಕುತಿತ್ತು. ಆದರೆ ಸಾಮಾನ್ಯವಾಗಿ ಅಲ್ಲಿಯ ವಾತಾವರಣವು ಪ್ರಶಾಂತವಾಗಿರುತ್ತದೆ. ಅಲ್ಲಿಯ ನಿಸರ್ಗ ಸೌಂದರ್ಯವು ಪ್ರತಿಯೊಬ್ಬರಿಗೆ ಸ್ಫೂರ್ತಿ ಕೊಡುವಂಥಾದ್ದಿದೆ. ಹಳ್ಳಿಗಳಲ್ಲಿರುವ ಹೆಂಗಸರು ಹಾಗು ಬಾಲಕರ ಸೇವೆ ಮಾಡಲು ಅಮಲಪ್ರಭಾದೇವಿಯವರಂಥ ಅನೇಕ ಯುವತಿಯರು ಮುಂದೆ ಬರಬೇಕು.

* *

ಅವಿಶ್ರಾಂತವಾಗಿ ದುಡಿಯುವವರಲ್ಲೊಬ್ಬರಾದ ದುರ್ಗಾಬಾಯಿಯವರು ಮದ್ರಾಸ ನಗರದಲ್ಲಿ ಸ್ವಲ್ಪ ಭೂಮಿಯನ್ನೂ ಒಂದು ಕಟ್ಟಡವನ್ನೂ ಸಂಪಾದಿಸಿದ್ದಾರೆ. ಬಾಲಿಕೆಯರಿಗಾಗಿ ಒಂದು ಹಾಸ್ಟಲನ್ನು ಅಲ್ಲಿ ಏರ್ಪಡಿಸಲಾಗುವದು. ನಗರದಿಂದಾಗಲಿ ಹಳ್ಳಿಗಳಿಂದಾಗಲಿ ಬರುವ ಬಾಲಿಕೆಯರಿಗಾಗಿ ಇಂಥ ಹಾಸ್ಟಲುಗಳು ನೂರಾರು ತಲೆಯೆತ್ತಬೇಕು. ಈ ಹಾಸ್ಟಲನಲ್ಲಿ ಎಲ್ಲ ಜಾತಿ ಪಂಗಡಗಳ ಬಾಲಿಕೆಯರನ್ನು ಸೇರಿಸಿಕೊಳ್ಳಲಾಗುವದು ಇಂಥ ಸಂಸ್ಥೆಗಳು ಅಸ್ಪೃಶ್ಯತೆ ಮೊದಲಾದ ಭಾವನೆಗಳನ್ನು ತೊಡೆದು ಹಾಕಲು ಸಹಾಯಕವಾಗುವವು.

* *

ಡಾ. ಮುತ್ತುಲಕ್ಷ್ಮಿಯವರಿಗೆ ವಯಸ್ಸಾಗಿದ್ದರೂ ಕಣ್ಣು ಮಂದವಾಗುತಿದ್ದರೂ ಅನಾಥ ಬಾಲಕ ಬಾಲಿಕೆಯರನ್ನು ಅದರಲ್ಲಿ ವಿಶೇಷವಾಗಿ ದುರ್ಮಾರ್ಗಕ್ಕಿಳಿದ ಸ್ತ್ರೀಯರ ಮಕ್ಕಳನ್ನು ಈಗಲೂ ಪೋಷಿಸುತ್ತ ಬಂದಿರುವರು. ಅಡಿಯಾರದಲ್ಲಿರುವ ತಮ್ಮ ಮನೆಯಲ್ಲಿ ಅನೇಕ ಬ್ರಹ್ಮೀ ನಿರಾಶ್ರಿತರನ್ನೂ ತಮಿಳು ಹರಿಜನರನ್ನೂ ಅವರು ಇಟ್ಟುಕೊಂಡಿರುವರು. ಯೋಗ ಕ್ಷೇಮವು ತೆಗೆದುಕೊಳ್ಳುವ ಈ ಮಾತೆಯನ್ನು ಪಡೆದ ಈ ಬಾಲಕರು ನಿಜವಾಗಿಯೂ ಅದೃಷ್ಟಶಾಲಿಗಳು. ತಮ್ಮ ಕೆಲಸದಲ್ಲಿ ನೆರವಾಗುವ ಕಾರ್ಯಕರ್ತ್ರಿಯರು ಅವರಿಗೆ ಅವಶ್ಯ ಬೇಕಾಗಿದ್ದಾರೆ. ಅವರೆ ಯಾರೂ ಸಿಗಲೊಲ್ಲರು.

ಡಾ. ಮುತ್ತುಲಕ್ಷ್ಮಿರೆಡ್ಡಿಯವರ ಮನೆಯ ಬಳಿಯಿರುವ ಡಾ. ಸುಂದರಂ ರಾಮಚಂದ್ರನರ ಹೆರಿಗೆ ಮತ್ತು ಶಿಶುಸಂಗೋಪನ ಕೇಂದ್ರವು ಅನಮೋಲ್ಯ ಸೇವೆಯನ್ನು ನೀಡುತ್ತದೆ. ಅನೇಕ ಬಡಹೆಂಗಸರು ಹಾಗು ಬಾಲಕರು ಉಚಿತ ಔಷಧೋಪಚಾರ ಪಡೆಯುತಿರುವರು. ಆಸ್ಪತ್ರೆಯಲ್ಲಿಯೇ ಇರಬಯಸುವ ರೋಗಿಗಳಿಗೆ ಅಸ್ಪದವುಂಟು. ಆದರೆ ಇದೊಂದು ಸ್ವಯಂಪ್ರೇರಿತ ಸಂಸ್ಥೆಯಾಗಿರುವದರಿಂದ ಈ ಆಸ್ಪತ್ರೆಯಲ್ಲಿ ಸಾಕಷ್ಟು ಸಾಮಾನುಗಳಿಲ್ಲ. ಔಷಧ ಸಾಮಗ್ರಿಗಳಿಲ್ಲ ಕಟ್ಟಡವು ಕೂಡ ಸಣ್ಣದಿದೆ. ದೇಶದಲ್ಲಿ ನಮದೇ ಸರಕಾರವಿದ್ದರೆ ಇಂಥ ಸಂಸ್ಥೆಗಳಿಗೆ ಎಲ್ಲ ಸಹಾಯ ಸಿಗುತ್ತಿತ್ತು. ಈಗ ಸರಕಾರವು ಈ ಸಂಸ್ಥೆಗೆ ರಾಷ್ಟ್ರೀಯ ಜನರ ಪ್ರೋತ್ಸಾಹವಿರುವದನ್ನು ನೋಡಿ, ಯಾವ ಬಗೆಯ ಸಹಾಯವನ್ನು ನೀಡದೆ ಅಲಕ್ಷದಿಂದಿದೆ.

* *

ಆಸಾಮದಲ್ಲಿ ಸುಂದರ ಸಾಲ ವೃಕ್ಷಗಳು ಮತ್ತು ವೇಣು ವನಗಳು, ಇಕ್ಕೆಲದ ಕಾನನವಿಬಿಡವಾದ ಗಿರಿಗಳ ಮಧ್ಯದಲ್ಲಿ ಹರಿಯುವ ಪ್ರಚಂಡ ಬ್ರಹ್ಮಪುತ್ರಾ ನದಿ, ಆ ನದಿಯ ಪ್ರಶಾಂತ ಪ್ರವಾಹದ ಮೇಲೆ ರಾರಾಜಿಸುವ ಉದಯಾಸ್ತಗಳ ಅನಿರ್ವಚನೀಯ ಸೌಂದರ್ಯ ಇವುಗಳು ಕ್ಷಣಮಾತ್ರ ನಮ್ಮ ಜನರ ಜೀವನದ ದಾರಿದ್ರ್ಯ, ಕೊಳೆಗಳ ಚಿತ್ರವನ್ನು ನಮ್ಮ ಮನಸ್ಸಿನಿಂದ ಅಳಿಸಿಬಿಟ್ಟಂತೆ ತಮಿಳನಾಡಿನ ಮಹಿಳೆಯರ ವರ್ಣ ವೈಖರಿಯ ಸಮೂಹ ನಮ್ಮನ್ನು ಬೆರಗುಗೊಳಿಸುವದು. ಗಾಂಧೀಜಿಯವರ ಇತ್ತೀಚಿನ ಪ್ರವಾಸದಲ್ಲಿ ಅವರ ದರ್ಶನಕ್ಕಾಗಿ ನೆರೆದ ಜನರ ಗುಂಪನ್ನು ಹಿಂದೆಂದೂ ನಾನು ನೋಡಿಲ್ಲ. ಮಹಿಳೆಯರಂತೂ ಚಳಿ-ಬಿಸಿಲು ಹಗಲು ರಾತ್ರಿಯನ್ನದೆ ಗಾಂಧೀಜಿಯವರಿಗಾಗಿ ಕಾಯುತ್ತಿದ್ದರು. ರಾಜಾಜಿಯವರು ತಮ್ಮ ಹಾಸ್ಯಪೂರಿತ ರೀತಿಯಲ್ಲಿ "ಪ್ರಚಂಡ ಜನಸಮುದಾಯದಲ್ಲಿ ಜೀವದ ಪರವೆಯಿಲ್ಲದೆ ನಿಮ್ಮ ದರ್ಶನಕ್ಕಾಗಿ ಮಹಿಳೆಯರು ಕೂಡ ಹಾತೊರೆಯುತ್ತಿರುವರು. ಅವರಿಗೆ ಮಂಕುಬೂದಿ ಊದಿರುವಿರೇನು?" ಎಂದು ಗಾಂಧೀಜಿಯವರನ್ನು ಪ್ರಶ್ನಿಸಿದರು. ಕೂಡಲೆ ಇಬ್ಬರೂ ಹೊಟ್ಟೆ ಹಿಡಿಸಲಾರದಷ್ಟು ನಕ್ಕರು. ಮಹಿಳೆಯರೂ ಜಾಗೃತರಾಗಿದ್ದಾರೆಂಬದರಲ್ಲಿ ಸಂಶಯವಿಲ್ಲ. ಅವರಲ್ಲಿ ಹರಿಯುತ್ತಿರುವ ಶಕ್ತಿಯನ್ನು ಸರಿಯಾದ ಮಾರ್ಗಕ್ಕೆ ಹಚ್ಚುವದು ನಮ್ಮಂಥವರ ಕರ್ತವ್ಯವಾಗಿದೆ.

ಮಹಿಳೆಯರ ವರ್ಣ ವೈಖರಿಯನ್ನಂತೂ ಬಣ್ಣಿಸ ತೀರದು. ಅವರಿದ್ದ ಭಾಗವು ನಾನಾ ಬಣ್ಣದ ಹೂವಿನ ತೋಟವಂತಿತ್ತು. ಪುರುಷರಾದರೂ ಇಲ್ಲಿಯ ಜನರಂತೆ ಅಚ್ಚ ಬಿಳಿ ಧೋತರವನ್ನುಡುವದನ್ನು ಬೇರೆಲ್ಲಿಯೂ ನೋಡಿಲ್ಲ ಅವು ನಮ್ಮ ಹಿಂದಿನ ಮಂದಹಾಸ ಹಾಗು ಗಾಂಭೀರ್ಯದ ಪ್ರತೀಕವಾಗಿವೆ. ಇಂದಿನ ನೀರಸ ಗ್ರಾಮಜೀವನವನ್ನು ರಸವತ್ತಾಗಿ ಮಾಡಲು ನಾವೆಲ್ಲರೂ ಅವಿಶ್ರಾಂತವಾಗಿ ದುಡಿಯಬೇಕಾಗಿದೆ.

* *

ಗಾಂಧೀಜಿಯವರ ರೇಲ್ವೆ ಗಾಡಿಯು ಮೆಲ್ಲಗೆ ಹೊರಡುತಿದ್ದಾಗ ಚಿಕ್ಕ ಬಾಲಕರು ಕಿಟಕಿಯ ಬಳಿಯಿದ್ದ ಅವರ ಸಮೀಪಕ್ಕೆ ಬಂದು ಹಸಿದ ಬಾಯಿ ಹಾಗು ಬರಿ ಹೊಟ್ಟೆಯ ಕಡೆ ಕೈಮಾಡಿ ತೋರಿಸುತಿದ್ದ ದೃಶ್ಯ ಮನಕರಗಿಸುವಂತಿತ್ತು. ಬಂಗಾಲದಂತಹ ದುರಂತದ ಪುನರಾವೃತ್ತಿಯಾಗದಿರಲೆಂದು ಈ ಸಲ ನಾವೆಲ್ಲರೂ ಆಶಿಸೋಣ.

ಸೇವಾಗ್ರಾಮ ಅ. ಕೌ.

ತಾ. ೧೧—೨—೪೬

ರೇಲ್ವೆ ಪ್ರಯಾಣಿಕರ ಪರಿಹಾರ ಸಂಘದವರು ತಮ್ಮ ಸಂಕಟಗಳನ್ನು ಅಧಿಕಾರಿಗಳಿಗೆ ತಿಳಿಸಿ ಹೇಳಬೇಕು. ಪ್ರಯಾಣಿಕರು ಒಬ್ಬರೊಡನೊಬ್ಬರು ಹೇಗೆ ನಡೆದುಕೊಳ್ಳಬೇಕು ಸ್ವಚ್ಛತೆ,ಮತ್ತು ಆರೋಗ್ಯದ ನಿಯಮಗಳನ್ನು ಹೇಗೆ ಕಾಪಾಡಿಕೊಳ್ಳಬೇಕು ಎಂಬುದನ್ನು ಪ್ರಯಾಣಿಕರಿಗೆ ಕಲಿಸುವದೆ ಈ ಸಂಘದ ಮುಖ್ಯ ಕಾರ್ಯವಾಗಿದೆ.

ಸೇವಾಗ್ರಾಮ ಮೋ. ಕ. ಗಾಂಧಿ

೮—೨—೪೬

ಹರಿಜನ ಚುಟುಕು

ಘಡವಾಲ ಹರಿಜನರು ತಮ್ಮ ಮದುಮಕ್ಕಳನ್ನು ಸಾರ್ವಜನಿಕ ಬೀದಿಗಳಲ್ಲಿ ಮೆರವಣಿಗೆಯಿಂದ ಒಯ್ಯುವದಕ್ಕೆ ಸವರ್ಣೀಗಳು ಇನ್ನೂ ವಿರೋಧಿಸುತಿದ್ದಾರೆ.

ಆದಾಗ್ಯೂ ಒಂದು ಸಂತೋಷದ ಸಂಗತಿ ಎಂದರೆ, ಹರಿಜನರ ದಿಬ್ಬಣವೊಂದನ್ನು ಲೂಟಿ ಮಾಡಿದ್ದಕ್ಕೆ ಮ್ಯಾಜಿಸ್ಟ್ರೇಟರು ಸವರ್ಣ ಹಿಂದುಗಳಿಗೆ- ಒಂದರಲ್ಲಿ ೬ ತಿಂಗಳ ಕಠಿಣ ಶಿಕ್ಷೆ, ಇನ್ನೊಂದರಲ್ಲಿ ೬೦ ರೂ. ದಂಡ ವಿಧಿಸಿರುತ್ತಾರೆ.

ಟೀಕೆಟಿಪ್ಪಣಿಗಳು

"ಹರಿಜನ" ದ ಪುನರುಜ್ಜೀವನ

"ಹರಿಜನ" ಪತ್ರಿಕೆಯನ್ನು ಪುನರುಜ್ಜೀವಿಸಿದ್ದೇಕೆ? ನನ್ನಂತೆ ಅನೇಕರಿಗೆ ಈ ಪ್ರಶ್ನೆ ಹೊಳೆದಿರಬೇಕು. ಹರಿಜನವನ್ನು ಪುನಃ ಪ್ರಾರಂಭಿಸುವದಕ್ಕಾಗಿ ಯಾವ ವಿಶೇಷ ಯತ್ನಗಳನ್ನೂ ಮಾಡಲಿಲ್ಲವೆಂದು ವಾಚಕರಿಗೆ ತಿಳಿಸಲಿಚ್ಛಿಸುತ್ತೇನೆ. ಈ ಪತ್ರಿಕೆಯ ಮೇಲೆ ಹಾಕಿದ್ದ ನಿರ್ಬಂಧವನ್ನು ದೂರ ಮಾಡಬೇಕೆಂದು ೧೯೪೫ ಡಿಸೆಂಬರ ೩ ಕ್ಕೆ ಅರ್ಜಿಮಾಡಲಾಗಿ ೧೯೪೬ ಜಾನೇವಾರಿ ೧೦ ಕ್ಕೆ ಇದರ ಮೇಲಿನ ನಿರ್ಬಂಧ ಹೋಯಿತು ಅಂಗ ಅಮೇರಿಕನರನ್ನೊಳಗೊಂಡ ನಮ್ಮ ಅನೇಕ ವಾಚಕರಿಗೆ ಭಣಭಣ ಅನಿಸುತ್ತಿತ್ತು. ಫ್ಯಾಸಿಸ್ಟ ಶಕ್ತಿಗಳ ಪರಾಭವದ ನಂತರ ಈ ಭಾವನೆ ಇನ್ನೂ ಹೆಚ್ಚಾಯಿತು. ಜಗತ್ತಿನಲ್ಲಿಯ ಘಟನೆಗಳನ್ನು ಬಿಟ್ಟರೂ ಭಾರತದಲ್ಲಿ ಸಂಭವಿಸಿದ ಘಟನೆಗಳ ಬಗ್ಗೆ ಸತ್ಯ-ಅಹಿಂಸೆಯ ದೃಷ್ಟಿಯಿಂದ ನನ್ನ ಅಭಿಪ್ರಾಯವೇನೆಂಬುದನ್ನು ತಿಳಿದುಕೊಳ್ಳಲು ಅವರು ಅತುರರಾಗಿದ್ದಾರೆ.

ಜಗತ್ತಿನಲ್ಲಿ ವಿಪ್ಲವಾತ್ಮಕ ಬದಲಾವಣೆಗಳು ಸಂಭವಿಸಿವೆ. ನಾನಿನ್ನೂ ಸತ್ಯ- ಅಹಿಂಸೆಗಳಿಗಂಟಿಕೊಳ್ಳಬೇಕೋ? ಅಟಂ ಬಾಂಬು ಆ ವಿಶ್ವಾಸವನ್ನು ನಷ್ಟವಾಗಿಸಿಲ್ಲವೆ? ಸತ್ಯ- ಅಹಿಂಸೆಗಳಲ್ಲಿಯ ನನ್ನ ವಿಶ್ವಾಸವನ್ನು ಅಟಂ ಬಾಂಬು ನಷ್ಟಗೊಳಿಸಿಲ್ಲ. ಇಷ್ಟೇ ಅಲ್ಲ, ಜಗತ್ತಿನಲ್ಲಿ ಸತ್ಯ- ಅಹಿಂಸೆಗಳೆ ಪ್ರಬಲ ಶಕ್ತಿಗಳೆಂದು ತೋರಿಸಿಕೊಟ್ಟಿದೆ. ಅವುಗಳೆದುರು ಅಟಂ ಬಾಂಬು ನಿರ್ವೀರ್ಯ. ಈ ಪರಸ್ಪರ ವಿರೋಧಿ ಶಕ್ತಿಗಳು ತೀರ ಭಿನ್ನವಾಗಿವೆ. ಒಂದು ನೈತಿಕ ಆಧ್ಯಾತ್ಮಿಕ ಸ್ವರೂಪದ್ದಾಗಿದ್ದರೆ ಇನ್ನೊಂದು ಭೌತಿಕ, ದೈಹಿಕವಾಗಿದೆ. ವಿನಾಶಿ ಅಟಂ ಬಾಂಬಿಗಿಂತ ಅಹಿಂಸೆಯ ಶಕ್ತಿ ಶ್ರೇಷ್ಠತರವಾಗಿದೆ. ಆಧ್ಯಾತ್ಮಿಕ ಶಕ್ತಿಯು ಅವಿನಾಶಿ ಮತ್ತು ಪ್ರಗತಿಪರ. ಅದು ಸಂಪೂರ್ಣವಾಗಿ ಪ್ರದರ್ಶಿತವಾದಲ್ಲಿ ಜಗತ್ತಿನಲ್ಲಿ ಅಜೇಯವಾದದ್ದಾಗುವದು. ಇದರಲ್ಲಿ ನಾನು ಹೊಸದೇನೂ ಹೇಳಿಲ್ಲ. ಸತ್ಯಕ್ಕೆ ಸಾಕ್ಷಿ ನುಡಿಯುತ್ತಿದ್ದೇನೆ. ಅಷ್ಟೇ ಸಾಕು. ಈ ಶಕ್ತಿಯು ಜಾತಿಲಿಂಗಗಳ ಭೇದವಿಲ್ಲದೆ ವಯಸ್ಸಿನ ನಿರ್ಬಂಧವಿಲ್ಲದೆ ಎಲ್ಲರಲ್ಲಿಯೂ ಕಂಡುಬರುತ್ತದೆ. ಕೆಲವರಲ್ಲಿ ಅದು ಸುಪ್ತಾವಸ್ಥೆಯಲ್ಲಿರಬಹುದು. ಬೇರೆ ಕೆಲವರು ಅದನ್ನು ಯೋಗ್ಯ ಶಿಕ್ಷಣದಿಂದ ಎಚ್ಚರಿಸಿಕೊಂಡಿರಬಹುದು.

ಈ ಸತ್ಯವನ್ನರಿತು ಅದರ ಸಂಪಾದನೆಗಾಗಿ ಯೋಗ್ಯ ಪ್ರಯತ್ನ ನಡೆಸದೆ ಹೋದರೆ ಆತ್ಮವಿನಾಶ ತಪ್ಪಿದ್ದಲ್ಲವೆಂಬುದನ್ನು ತಿಳಿದುಕೊಳ್ಳಬೇಕು. ನೆರೆಹೊರೆಯವರ ಉತ್ತೇಜನವನ್ನು ಅಪೇಕ್ಷಿಸದೆ ಸ್ವತಃ ಶಿಕ್ಷಣಪಡೆಯುವದೊಂದೆ ಇದಕ್ಕುಪಾಯ ಇಂಥ ಸತ್ಯವನ್ನು ತಿಳಿಸಿಹೇಳುವದಕ್ಕಾಗಿ "ಹರಿಜನ"ವು ವಾರವಾರಕ್ಕೂ ಹೆಣಗುವದು.

(ಮದುರೆಯ ದಾರಿಯಲ್ಲಿ) –ಮೋ. ಕ. ಗಾಂ.

* * *

ಸತ್ಯವಾಗಿದ್ದರೆ ಮಹಾಪಾತಕವು

ಕರ್ನಾಟಕದಿಂದ ಬಂದ ಪತ್ರವೊಂದರಲ್ಲಿ ಕೆಳಗಿನ ಸಂಗತಿ ಇದೆ.

"೧-೨-೪೬ನೇ ದಿನ ಮುಂಜಾನೆ ಸುಮಾರು ೧೦ ಗಂಟೆಗೆ ಕರ್ನಾಟಕ ಪ್ರಾಂತಿಕ ಕಾಂಗ್ರೆಸ ಶಾಸನಸಭಾ ಸದಸ್ಯ ನಿಯೋಜಕ ಮಂಡಲವು ಹುಬ್ಬಳ್ಳಿಯಲ್ಲಿರುವ ತನ್ನ ಕಚೇರಿಯಲ್ಲಿ ಕೆಲಸ ನಡೆಸಿರುವಾಗ ೨೦–೨೫ ಜನರು ಅಧ್ಯಕ್ಷರ ಅಪ್ಪಣೆಯಿಲ್ಲದೆ ಸಭಾಭವನದಲ್ಲಿ ಒಳನುಗ್ಗಿದರು

"ಮಂಡಲವು ಮಹತ್ವದ ವಿಷಯ ಚರ್ಚಿಸಲು ಸೇರಿತ್ತು. ಮೇಲೆ ಹೇಳಿದ ಜನರಲ್ಲಿ ಕೆಲವರು ತಮ್ಮ ಹೇಳಿಕೆಯನ್ನು ಮಂಡಿಸಲು ಸಮಯ ಕೇಳಿದ್ದರು. ನಿನ್ನಿನ ದಿನ ನಿಮಗೆ ಈ ವಿಷಯಕ್ಕಾಗಿ ಸಾಕಷ್ಟು ಸಮಯ ಕೊಡಲಾಗಿದೆ. ಈಗ ಸಭೆಯಲ್ಲಿ ಗಂಭೀರ ವಿಷಯದ ಬಗ್ಗೆ ಚರ್ಚೆ ನಡೆದಿರುವದರಿಂದ ಇವತ್ತು ಮಧ್ಯಾಹ್ನ ಪುನಃ ನಿಮ್ಮನ್ನು ಕಾಣುವೆ ಎಂದು ಅಧ್ಯಕ್ಷರು ಹೇಳಿದರು. ಅತ್ಯಂತ ಮಹತ್ವದ ವಿಷಯವಿರುವದರಿಂದ ಈಗಲೇ ಹೇಳಲು ಸಮಯ ಕೊಡಬೇಕೆಂದು ಅವರು ಉತ್ತರವಾಗಿ ಹೇಳಿ, ಆ ಬಗ್ಗೆ ಒತ್ತಾಯ ಮಾಡಿದರು. ನಿಮ್ಮ ನಡತೆ, ಸಭಾವಿನಯ ಮತ್ತು ಶಿಸ್ತಿಗೆ ವ್ಯತಿರಿಕ್ತವಾಗಿರುವದೆಂದು ಅಧ್ಯಕ್ಷರು ಹೇಳಿದಾಗ್ಯೂ ಅವರು ಹಟ ಬಿಡಲಿಲ್ಲ. ಆಗ ಅಧ್ಯಕ್ಷರು ತಾವೇ ಸಭಾಭವನ ಬಿಟ್ಟು ಹೋಗುವದಾಗಿ ತಿಳಿಸಿದರು. ಅವರು ಹೊರ ಹೊರಡಲು ಎದ್ದು ನಿಂತ ಕೂಡಲೇ ಬಂದವರಲ್ಲೊಬ್ಬನು ಅವರನ್ನು ಎಳೆದು ಕುಳ್ಳಿರಿಸಲು ಯತ್ನಿಸಿದನು. ಇನ್ನೊಬ್ಬನು ಅವರ ಬಗಲೊಳಗಿದ್ದ ಫಾಯಿಲುಗಳನ್ನು ಕಿತ್ತುಕೊಂಡು ಹೊರಹೊರಟನು. ಇನ್ನೂ ಒಬ್ಬನು ಶ್ರೀ. ದಿವಾಕರರ ತಲೆಯ ಮೇಲೆ ತನ್ನ ಛತ್ರಿಯಿಂದ ಹೊಡೆದನು. ಆಗ ಸಭೆಯಲ್ಲಿದ್ದವರು ಮುಂದೆ ಬಂದು ಬಿಡಿಸಿ ಪರಿಸ್ಥಿತಿ ಶಾಂತ ಮಾಡಿದರು."

ಇಂಥ ಘಟನೆಗಳಾದರೆ, ಕಾಂಗ್ರೆಸ ಸಂಸ್ಥೆಯು ಚೂರು ಚೂರಾಗುವದು. ದಂಡನೀತಿಯಿಂದ ಯಾವ ಸಂಸ್ಥೆಯೂ ಯಶಸ್ವಿಯಾಗಿ ಕೆಲಸ ಮಾಡಲಾರದು. ಈ ಘಟನೆಯ ಗುಣಾವಗುಣಗಳನ್ನು ನಾನು ವಿಮರ್ಶಿಸಬಯಸುವದಿಲ್ಲ. ಆ ಕೆಲಸವನ್ನು ಕಾಂಗ್ರೆಸ ವರ್ಕಿಂಗ ಕಮಿಟಿಯು ನೇರವೇರಿಸುವದು. ಅಲ್ಲಿ ಸಂಭವಿಸಿದೆಯೆಂದು ಹೇಳಲಾದ ಘಟನೆ ನಯ-ನಿಯಮಗಳನ್ನೆಲ್ಲ ಮೀರಿದೆಯಲ್ಲದೆ ಅಹಿಂಸಾತತ್ವಕ್ಕೆ ವಿರೋಧವಾಗಿರುವದು. ಮೇಲಾಗಿ ಶಾಸನಸಭೆಗಳಲ್ಲಿ ಪ್ರವೇಶಿಸಬೇಕೆನ್ನುವ ಅನುಚಿತ ಹುಚ್ಚು ಹೆಚ್ಚಾದಂತೆ ಕಾಣುತ್ತದೆ. ಚುನಾವಣೆ ಹೋರಾಟದ ಗುರಿಯನ್ನೇ ಮರೆಯಲಾಗಿದೆಯೆಂದು ಇದು ತೋರಿಸುತ್ತದೆ.

–ಮೋ. ಕ. ಗಾಂ.

* * *

ಧ್ವಜಗಳೂ ಶಾಲೆಗಳೂ

ಶಾಲೆಗಳು ಹಾಗು ಕಾಲೇಜುಗಳಲ್ಲಿಯ ಧ್ವಜಗಳಿಗೆ ಸಂಬಂಧಿಸಿದ ಎರಡು ವಿಶಿಷ್ಟ ಪತ್ರಗಳು ನನ್ನ ಕೈಸೇರಿವೆ. ಕೆಲ ಬಾಲಕರು ಕಾಂಗ್ರೆಸ್ ಧ್ವಜವನ್ನು ಏರಿಸಿದರೆ ಉಳಿದವರು ಲೀಗ ಧ್ವಜವನ್ನು ಏರಿಸುತ್ತಾರೆ. ಈ ಕಲಹವು ಕಾಂಗ್ರೆಸ ಧ್ವಜವನ್ನು ಹಾರಿಸಿದ್ದರಿಂದ ಪ್ರಾರಂಭವಾಯಿತೆಂದು ಈ ಪತ್ರಗಳಲ್ಲಿ ಉಲ್ಲೇಖಿಸಲಾಗಿದೆ. ಎರಡೂ ಧ್ವಜಗಳನ್ನು ಹಾರಗೊಟ್ಟರೆ ಸದ್ಯಕ್ಕೆ ಯಾವ ಪ್ರಮಾದವೂ ಆಗುವದಿಲ್ಲೆಂದು ನನಗನಿಸುತ್ತದೆ. ಈ ವಿಷಯದಲ್ಲಿ ಬಾಲಕರು ಮುಂದಾಳ್ತನ ವಹಿಸದಿರುವದೇ ಉತ್ತಮ ಮಾರ್ಗ. ಶಾಲಾ ಕಟ್ಟಡಗಳು ಅಧಿಕಾರಿಗಳ ವಶವಿರುವದರಿಂದ ಧ್ವಜವನ್ನು ಹಾರಿಸಬೇಕೋ ಬೇಡವೋ ಎಂಬದನ್ನೂ ಹಾರಿಸುವದಿದ್ದರೆ ಯಾವ ಧ್ವಜವನು ಎಂಬವದನ್ನೂ ಆ ಅಧಿಕಾರಿಗಳೇ ನಿರ್ಧರಿಸಬೇಕು. ಬಾಲಕರು ಯಾರ ಮಾತಿಗೂ ಲಕ್ಷ ಕೊಡದೆ ಸ್ವೇಚ್ಛೆಯಂತೆ ಅನುಸರಿಸತೊಡಗಿದರೆ ಗೊಂದಲ, ಕಲಹ ಹಾಗು ಮಾರಾಮಾರಿ ತಪ್ಪಿದ್ದಲ್ಲ. ಇದು ಅಸಭ್ಯತನ. ಇದರಿಂದ ಯಾರಿಗೂ ಕಲ್ಯಾಣವಾಗುವದಿಲ್ಲ. ಜಾತೀಯ ಭೇದಭಾವಗಳನ್ನು ನಿವಾರಿಸಲು ಶಾಲೆಕಾಲೇಜುಗಳು ಇರುವವಾಗಲಿ ಅವುಗಳನ್ನು ಬೆಳೆಸಲಿಕ್ಕಲ್ಲ. ಶಾಲೆಗಳಲ್ಲಿ ಬಾಲಕ ಬಾಲಿಕೆಯರು ಶಿಸ್ತನ್ನು ಕಲಿಯದಿದ್ದರೆ ಅವರ ವೇಳೆ ಹಾಗು ಶಿಕ್ಷಣದ ವೆಚ್ಚ ಅಪವ್ಯಯವಾದಂತೆ. ಲಾಹೋರ ಘಟನೆಯಲ್ಲಿ ಮೌಲಾನಾ ಸಾಹೇಬ ಅಬುಲ ಕಲಾಮ ಆಜಾದರು ಕೈಹಾಕಿ, ಕಾಂಗ್ರೆಸ ಧ್ವಜವನ್ನೇರಿಸಿದವರಲ್ಲಿಯೆ ತಪ್ಪು ಇತ್ತೆಂದು ನಿರ್ಣಯಿಸಿದುದು ಸರಿಯಿದೆ.

ಸೇವಾಗ್ರಾಮ ಮೋ. ಕ. ಗಾಂಧಿ

೧೧-೨-೪೬

* * *

ಬಡವರಿಗಾಗಿ ನಿಸರ್ಗ ಚಿಕಿತ್ಸೆ

ಪುಣೆಯಲ್ಲಿಯ ಡಾ. ದಿನಶಾ ಮೇಥಾರ 'ನಿಸರ್ಗ ಚಿಕಿತ್ಸಾಭವನದ' ವಿಶ್ವಸ್ತ ಮಂಡಳದಲ್ಲಿ ಶ್ರೀ ಜಹಾಂಗೀರ ಮತ್ತು ಡಾ. ದಿನಶಾ ಮೇಥಾರೊಂದಿಗೆ ನಾನೂ ಇರುವೆನೆಂಬುದು ವಾಚಕರಿಗೆ ಗೊತ್ತಿದ್ದದ್ದೇ ಆಗಿದೆ. ಇದೇ ಜನೆವರಿ ೧ ನೇ ತಾ. ನಿಂದ ಚಿಕಿತ್ಸಾಭವನವು ಬಲ್ಲಿದರದಾಗದೆ ಬಡವರದಾಗಬೇಕೆಂಬ ಕರಾರನ್ನು ವಿಶ್ವಸ್ತ ಮಂಡಳವು ಹಾಕಿತ್ತು. ಅದು ನನ್ನ ವಿಚಾರವಾಗಿತ್ತು. ಆದರೆ ನಾನು ಸಂಚಾರ ನಿಮಿತ್ತ ಅಲ್ಲಿಲ್ಲದ್ದರಿಂದ ಈ ಕರಾರನ್ನು ಸಂಪೂರ್ಣವಾಗಿ ಒಪ್ಪಿಕೊಳ್ಳಲಾಗಿಲ್ಲ. ನಾನು ಈ ತಿಂಗಳಲ್ಲಿ ಪುಣೆಗೆ ಹೋದಾಗ ಈ ವಿಷಯದಲ್ಲಿ ಸ್ವಲ್ಪ ಕಾರ್ಯ ಸಾಧಿಸಬೇಕೆಂದು ಮಾಡಿದ್ದೇನೆ. ಶ್ರೀಮಂತ ರೋಗಿಗಳು ಬಂದರೆ ತಮ್ಮ ಶಕ್ತ್ಯನುಸಾರ ಹಣ ಕೊಟ್ಟು ಬಡರೋಗಿಗಳು ವಾಸಿಸುವ ಕೊಠಡಿಗಳಲ್ಲಿಯೆ ವಾಸಿಸುವರೆಂದು ನನ್ನ ತೀವ್ರ ಅಭಿಲಾಷೆ ಇದೆ. ಇನ್ನು ಮುಂದೆ ಹೀಗೆ ಮಾಡುವದ್ದರಿಂದಲೆ ಅವರಿಗೆ ಲಾಭವಾಗುವದು. ಇದಕ್ಕೊಪ್ಪದವರು ಚಿಕಿತ್ಸಾಭವನಕ್ಕೆ ಬರಬೇಕಾಗಿಲ್ಲ. ಈ ಕಟ್ಟಳೆ ಅಗತ್ಯವಾಗಿದೆ. ಬಡರೋಗಿಗಳ ಚಿಕಿತ್ಸೆ ನಡೆಸಲಾಗುವದಲ್ಲದೆ ಆರೋಗ್ಯಕರವಾದ ರೀತಿಯಲ್ಲಿ ಹೇಗೆ ಜೀವಿಸಬೇಕೆಂಬುದನ್ನು ಕಲಿಸಲಾಗುವದು. ಆಯುರ್ವೇದ ಮತ್ತು ಅಲೋಪಥಿ ಔಷಧಗಳಿಗಿಂತ ನೈಸರ್ಗಿಕ ಚಿಕಿತ್ಸೆಯು ಹೆಚ್ಚು ವೆಚ್ಚದ್ದೆಂಬ ನಂಬಿಕೆ ಇದೆ. ಇದು ನಿಜವೆಂದು ಕಂಡುಬಂದರೆ ನಾನು ನನ್ನ ಸೋಲನ್ನು ಒಪ್ಪಿಕೊಳ್ಳುತ್ತೇನೆ ಆದರೆ ನೈಸರ್ಗಿಕ ಚಿಕಿತ್ಸೆಯೆ ಕಡಿಮೆ ವೆಚ್ಚದ್ದೆಂದು ನನ್ನ ನಂಬಿಕೆ ಇದ್ದು ನನ್ನ ಅನುಭವವೂ ಹಾಗೇ ಇದೆ. ಈ ಚಿಕಿತ್ಸಾ ಭವನದ ಡಾಕ್ಟರನು ರೋಗಿಯ ದೇಹವನ್ನಷ್ಟೇ ಅಲ್ಲ ಮನಸ್ಸನ್ನೂ ಪರೀಕ್ಷಿಸಿ ಚಿಕಿತ್ಸೆ ನಡೆಸಬೇಕು. ಮನಸ್ಸಿಗೆ ಸರಿಯಾದ ಚಿಕಿತ್ಸೆಯೆಂದರೆ ರಾಮನಾಮವೆ ಬಡವರಿಗೆ ಹೆಚ್ಚು ಔಷಧದ ಅಗತ್ಯವಿಲ್ಲೆಂದು ನಾನು ಹೇಳುತ್ತೇನೆ. ಈಗಿದ್ದಂತೆ ಅಂದರೆ ಅವರು ನಿರ್ಗತಿಕರಾಗಿ ಸಾಯುತ್ತಾರೆ. ನಿಸರ್ಗವು ಕಲಿಸುವ ಪಾಠವನ್ನು ಅಜ್ಞಾನಿಗಳಾದ ಅವರು ಅರಿತುಕೊಳ್ಳುವದಿಲ್ಲ. ಪುಣೆಯಲ್ಲಿಯ ಈ ಪ್ರಯೋಗವು ಯಶಸ್ವಿಯಾದರೆ ಡಾ. ದಿನಶಾ ಮೆಥಾರ ನಿಸರ್ಗ ಚಿಕಿತ್ಸೆ ವಿಶ್ವವಿದ್ಯಾಲಯದ ಕನಸು ಮೂರ್ತಸ್ವರೂಪಕ್ಕೆ ಬರುವದು.

ದೇಶದ ಈ ಮಹತ್ಕಾರ್ಯವಾದ ನಿಸರ್ಗ ಚಿಕಿತ್ಸೆಯಲ್ಲಿ ಡಾಕ್ಟರರ ನೆರವು ಬೇಕಾಗಿದೆ ಹಣಗಳಿಸುವ ಪ್ರಶ್ನೆಯೆ ಇಲ್ಲ. ಬಡವರಿಗಾಗಿ ಸೇವೆ ಸಲ್ಲಿಸುವ ಸ್ಫೂರ್ತಿಯಿದ್ದದರು ಬೇಕಾಗಿದ್ದಾರೆ ಇಂಥವರನೇಕರಿಂದ ನಮ್ಮ ಕಾರ್ಯ ಮುಂದರಿಯಬಲ್ಲದು. ಡಾಕ್ಟರನೆಂಬ ಪದವಿಯಿದ್ದ ಮಾತ್ರಕ್ಕೆ ಸಾಲದು ಜನರ ಸೇವಕನಾಗಿರುವವನ ನಿಜವಾದ ಡಾಕ್ಟರನು ಜ್ಞಾನ, ಅನುಭವ ಮತ್ತು ಸೇವಾ ಬುದ್ಧಿ ಇದ್ದವರು ಬರೆದುಕೊಳ್ಳಬಹುದು. ನಾವು ಬಯಸಿದ ಪಾತ್ರತೆ ಇಲ್ಲದವರಿಗೆ ಉತ್ತರ ಕೊಡಲಾಗುವದಿಲ್ಲ.

ಮೋ. ಕ. ಗಾಂ.

ಅಹಿಂಸಾ ತಂತ್ರ ಹಾಗೂ ಪ್ರತಿ ಸರಕಾರ

(೮ ನೇ ಪುಟದಿಂದ ಮುಂದರಿದುದು)

ಹೇಳಲಾರೆ. ಆದರೆ ನೀವು ವರ್ಷ ವರ್ಷಾಂತರಗಳಿಂದ ಅಹಿಂಸೆಯಲ್ಲಿ ಶಿಕ್ಷಣ ಪಡೆದವರು ನಿಮ್ಮ ಕೈಯಲ್ಲಿ ಅಹಿಂಸೆ ಪರಮಾವಧಿ ಪ್ರಕಾಶವನ್ನು ಬೀರಬೇಕೆಂಬುದನ್ನು ಮನಗಾಣಬೇಕು."

ಆ ಮೇಲೆ ಅವರು ಮುಂದೆ ಸರಿಯಾದ ಮಾರ್ಗದಲ್ಲಿ ಹೇಗೆ ಪ್ರಾರಂಭಿಸಬೇಕೆಂದು ತಿಳಿಯಬಯಸಿದರು. ಗಾಂಧೀಜಿ "೧೮ ಬಗೆಯ ವಿಧಾಯಕ ಕಾರ್ಯಕ್ರಮದ ಗ್ರಹಪತಿ ಸೂರ್ಯಸ್ವರೂಪಿಯಾದ ನೂಲುವ ರಾಟೆ"ಯನ್ನು ಅವರಿಗೆ ಅನುಮೋದಿಸಿದರು. ಸಾಮಾಜಿಕ ಐಕ್ಯವನ್ನೂ ಅಹಿಂಸಾತ್ಮಕ ಸಂಘಟನೆಯನ್ನೂ ಸಾಧಿಸಲು ಅದು ಅತ್ಯುತ್ತಮ ಮಾರ್ಗ. ಅಹಿಂಸೆಯ ತಂತ್ರದ ಧ್ಯೇಯ ದುಷ್ಟಸತ್ವಗಳನ್ನು ಬೇರ್ಪಡಿಸಿ ನಿಸ್ಸತ್ವಗೊಳಿಸುವದರಲ್ಲಿಯ ಇದೆ. ಅಹಿಂಸೆಯ ತಳಹದಿಯ ಮೇಲೆ ನಿಂತಿರುವ ಜಾತೀಯ ಸರಕಾರವು ಅಧಿಕಾರಿಗಳನ್ನು ಬಂಧಿಸಿಡುವ ಬದಲು ಅವರನ್ನು ಏಕಾಕಿಗಳನ್ನಾಗಿ ಮಾಡಿ ಬಿಡುತ್ತಿತ್ತು. ಹಾಗಾದರೆ ಅವರು ಒಂದೋ ಜನತೆಯ ಪಕ್ಷ ಹಿಡಿಯಬೇಕು ಇಲ್ಲದಿದ್ದರೆ ವಿದೇಶಿ ಸರಕಾರದ ಅಜ್ಞೆಯನ್ನು ಶಿರಸಾ ವಹಿಸಿ ಅತಿ ಹೇಯವಾದ ಪಶುವೃತ್ತಿಗಿಳಿಯಬೇಕು ಎಂದಾಗುತಿತ್ತು. ಈ ಎರಡನೆ ಹಾದಿ ಹಿಡಿದವರೂ ಬೇಗನೆ ಅವರಿಗೇ ತಮ್ಮ ಬಗ್ಗೆ ಜುಗುಪ್ಸೆಉಂಟಾಗುತಿತ್ತು ಅವರ ಸಂಬಂಧಿಕರು, ಗೆಳೆಯರು ಕೂಡ ಅವರಿಂದ ತೊಲಗಿ ಹೋಗುತಿದ್ದರು. "ಈ ಪರಿಸ್ಥಿತಿಯು ಪೂರ್ವದಲ್ಲಿ ಜನತೆಯಲ್ಲಿ ಯಾರಿಗೂ ಒಬ್ಬರ ಕೈಯಿಂದೊಬ್ಬರಿಗೆ ಅನ್ಯಾಯವಾದಂತೆ ಅನಿಸಿರಬಾರದು ಅಸ್ಪೃಶ್ಯತೆ, ಜಾತೀಯ ಅನೈಕ್ಯಗಳಿಗೆ ಅಂಥ 'ಜಾತೀಯ' ಸರಕಾರದ ಕಾಲದಲ್ಲಿ ಸ್ಥಾನವಿರಕೂಡದು. ಇಲ್ಲದಿದ್ದರೆ ಅದು ಕೌರವರ ಪಾಳೆಯದಂತಾಗಿ ನಾಶ ಹೊಂದದಿರದು."

ಸೇವಾಗ್ರಾಮ ಪ್ಯಾರೇಲಾಲ

೬—೨—೪೬

ಅಪವ್ಯಯ

ಗಾಂಧೀಜಿಯವರು ಎಲ್ಲಿಗೇ ಹೋಗಲಿ, ಅವರಿಗೆ ಜನಜಂಗುಳಿಯಿಂದ ಪ್ರಚಂಡ ಜಯಜಯಕಾರ ದೊರೆಯುವದಲ್ಲದೆ, ಹಣದ ರೂಪದಲ್ಲಿಯೂ ವಸ್ತು ಒಡವೆಗಳ ರೂಪದಲ್ಲಿಯೂ ತುದಿಮೊದಲಿಲ್ಲದ ಕಾಣಿಕೆಗಳೂ ಸಿಗುತ್ತವೆ. ಗಾಂಧೀಜಿಯವರ ಲೋಭಕ್ಕೆ ತಣಿವೇ ಇಲ್ಲ. ಅವರಿಗೊಪ್ಪಿಸಲ್ಪಟ್ಟ ಹಣದ ಮೇಲಿನ ತಗಾದೆಗಳೂ ದಿನದಿನಕ್ಕೆ ಹೆಚ್ಚುತ್ತವೆ. ಈ ಹಣವನ್ನು ಎಣಿಸುವದು ಮತ್ತು ವರ್ಗೀಕರಿಸುವದು ಆ ಶಾಖೆಯ ಹೊಣೆ ಹೊತ್ತವರಿಗೆ, ಹೊರಲಾರದಷ್ಟು ಕೆಲಸವಾಗಿಬಿಡುತ್ತದೆ.

ಗಾಂಧೀಜಿಯ ಪ್ರಯಾಣ ಮುಂದೆ ಸಾಗಿದಂತೆ ವಸ್ತುರೂಪದ ಕಾಣಿಕೆಗಳು ಹೆಚ್ಚು ಹೆಚ್ಚು ಸ್ಥಳವನ್ನು ಆಕ್ರಮಿಸಿ ಪ್ರಯಾಣಕರಿಗೆ ಅಡಚಣೆಯಾಗುತ್ತದೆ. ನೂಲು-ಖಾದಿಗಳ ಕಾಣಿಕೆಗೆ ಯಾವಾಗಲೂ ಸ್ವಾಗತ ಇದ್ದದ್ದೆ. ಗಾಂಧೀಜಿಯ ವ್ಯಕ್ತಿ ಸಂಸ್ಥೆಗಳ ಬೆಳೆಯುತ್ತಿರುವ ಸಂಸಾರಕ್ಕೆ ಕೊನೆಯಿಲ್ಲದ ಖಾದಿಯ ಅವಶ್ಯಕತೆಯುಂಟು. ಅವರೆಲ್ಲ ನೂಲು ಕೊಡಲಾರರು. ಆದರೆ ವಸ್ತುರೂಪದ ಇತರ ಅನೇಕ ಕಾಣಿಕೆಗಳಿವೆ. ಚಿನ್ನ, ಬೆಳ್ಳಿಗಳಿಂದ ಮಾಡಿದ ನೂಲಿನ ರಾಟೆಯ ಅಕೃತಿಗಳು ಮತ್ತು ಇತರ ನಿರುಪಯುಕ್ತ ಲೋಹ ಅಥವಾ ಕಟ್ಟಿಗೆಯ ಸಾಮುಗ್ರಿಗಳು ಬರುತ್ತವೆ. ಅಂಥ ಕಾಣಿಕೆಗಳಿಗೆ ಉತ್ತೇಜನ ಕೊಡಕೂಡದು. ಚಿನ್ನದ ರಾಟೆ ಮಾಡಬೇಕಾದರೆ ಹಿಡಿಯುವ ಶಿಲ್ಪದ ವೆಚ್ಚವೇ ಅದರಲ್ಲಿರುವ ಚಿನ್ನಕ್ಕಿಂತ ಹೆಚ್ಚಾಗಿರಬಹುದು. ಅಂಥ ಕಾಣಿಕೆಗಳನ್ನು ಕೊಡುವದಕ್ಕಿಂತ ಹಣವನ್ನೇ ಕೊಡುವದು ಲೇಸು. ನೂಲು ಅರಿವೆಗಳನ್ನು ಬಿಟ್ಟರೆ, ಹಳ್ಳಿಯ ಕೈಗಾರಿಕೆಯ ಅಥವಾ ಪ್ರಾಚೀನ ಕಲೆಯ ಅಪರೂಪ ಮಾದರಿಗಳು ಮತ್ತು ಮಹಿಳೆಯರು ಸ್ವಯಂಸ್ಫೂರ್ತಿಯಿಂದ ಗಾಂಧೀಜಿಗೆ ಅರ್ಪಿಸಬೇಕೆಂದು ಹಂಬಲಿಸುವ ಆಭರಣಗಳು-ಇವು ಮಾತ್ರ ಅಪವಾದಾತ್ಮಕ ವಸ್ತುರೂಪ ಕಾಣಿಕೆಗಳಾಗಿರತಕ್ಕದ್ದು.

ಸ್ವತಃ ಗಾಂಧೀಜಿಯ ಕುರೂಪ ವರ್ಣಚಿತ್ರಗಳ., ಛಾಯಾಚಿತ್ರಗಳು, ಅಥವಾ ಕಟ್ಟಿಗೆ, ಬೆಳ್ಳಿ, ಚಿನ್ನ, ದಂತ ಇಲ್ಲವೆ ಗಾಜಿನಿಂದ ಮಾಡಿದ ಅವರ ಪ್ರತಿಮೆ-ಪುತ್ಥಳಿಗಳು ಇಂಥವುಗಳ ಕಾಣಿಕೆಗೂ ಉತ್ತೇಜನ ಕೊಡಬಾರದು. ಅವು ಕಲಾಹೀನವಾಗಿರುತ್ತವೆ. ಗಾಂಧೀಜಿಯ ಕೆಟ್ಟ ಪ್ರತಿಚಿತ್ರಗಳ ಮೇಲೆ ಅವರಿಂದ ಸಹಿಪಡೆದುಕೊಳ್ಳಲು ಕಲೆಗಾರರಾಗಲಿ ಇತರರಾಗಲಿ ಬಯಸುವದೂ ತಪ್ಪು. ಯಾವುದೇ ಕ್ಷೇತ್ರದಲ್ಲಿ ಕೀಳ್ಮಟ್ಟದ ಕೃತಿಗಳಿಗೆ ಪ್ರೋತ್ಸಾಹ ಕೊಡುವದು ಜಾಣತನವಲ್ಲ. ಸುಂದರವಾದ ಛಾಯಾಚಿತ್ರಗಳನ್ನು ಸಂಪಾದಿಸುವದು ಜನರಿಗೆ ಅಷ್ಟು ಕಠಿಣವಲ್ಲ. —ಆ. ಕಾ.

ಮದ್ರಾಸ ಗಾಡಿಯಲ್ಲಿ ೪-೨-೪೬

ಮಹಾದೇವನಿಲ್ಲದ ಹರಿಜನ

(೭ನೇ ಪುಟದಿಂದ ಮುಂದರಿದುದು)

ಹೊರಗೆ ಬಿಟ್ಟು ಒಳಗೆ ಹೋಗಿದ್ದರು ಸರದಾರರು ತಮ್ಮದೇ ಆದ ವಿನೋದದಿಂದ ಅವರನ್ನು ಕೆಣಕಿದರು. 'ಮಹಾದೇವ, ನಿಮ್ಮ ಕಾಲ್ಮೊರೆಗಳನ್ನು ಅಲ್ಲಿಡಬೇಡಿರಿ. ಹೊಸದಾಗಿ ಬಂದವರಾರಾದರೂ ಅವನ್ನು 'ಹರಿಜನ'ದ ಹೊಸ ಮಾದರಿಯೆಂದು ತಿಳಿದುಕೊಂಡಾರು' ಎಂದರು. 'ಎಂ. ಡಿ.' ಅಂಕಿತವು ಹರಿಜನಕ್ಕಾಗಿಯೆ ಇದ್ದಂತಿತ್ತು.

ಮಹಾದೇವಭಾಯಿಯವರು ಅದ್ಭುತ ವಾಚಕರಾಗಿದ್ದರು. ಹಾಸಿಗೆಯಲ್ಲಿ ಬಿದ್ದುಕೊಂಡು ಓದದೆ ವಿನಾ ನಿದ್ದೆಹೋಗದ ದುಶ್ಚಟವು ಅವರಿಗೆ ಇತ್ತು. ತಾವು ಓದುವಾಗಲೆಲ್ಲ "ಹರಿಜನ"ಕ್ಕಾಗಿ ಉತ್ತಮ ವಿಷಯವನ್ನ ಸಂಗ್ರಹಿಸಬೇಕೆಂಬ ಬುದ್ಧಿಯಿಂದಲೆ ಓದುತ್ತಿದ್ದರು. ಅವರು ಕರ್ತವ್ಯದಲ್ಲಿ ಇಷ್ಟೊಂದು ತನ್ಮಯರಾಗಿದ್ದರು. ಅವರು ಮಡಿಯುವ ಅರ್ಧ ಗಂಟೆ ಪೂರ್ವದಲ್ಲಿ ಅವರ ಕೈಯಲ್ಲಿ ಆಂಡ್ರೆ ಮೂರಸರ "ಜೀವಿಸುವ ಕಲೆ"ಎಂಬ ಪುಸ್ತಕವಿತ್ತೆಂದು ಹೇಳಿದರೆ ಸಾಕೆಂದು ಅನಿಸುತ್ತದೆ. ಆ ಗ್ರಂಥದಲ್ಲಿ ಗುರುತಿಸಿದ ವಾಕ್ಯವೃಂದಗಳೂ ಬರೆದ ಟಿಪ್ಪಣಿಗಳೂ ಕಂಡುಬರುತ್ತವ.

ಇವರನ್ನು ಕಳೆದುಕೊಂಡದ್ದು ತುಂಬಿ ಬರಲಾರದ ಹಾನಿಯಾಗಿದೆ. ಹರಿಜನದ ಪುನರುಜ್ಜೀವನದಿಂದಂತೂ ಇದು ಹೆಚ್ಚಾಗಿ ಕಂಡು ಬರತೊಡಗಿದೆ.

ಸೇವಾಗ್ರಾಮ ಎಸ್. ಎನ್.

೯—೨—೪೬

ಕರ್ನಾಟಕ

ಧಾರವಾಡ

ಗದಗಿನಲ್ಲಿ ಹುಬ್ಬಳ್ಳಿ ಮೋಟಾರ ಸ್ಟ್ಯಾಂಡಿನ ಹತ್ತರ ಒಂದು ಮನೆಗೆ ಸಬ್ ಇನಸ್ಪೆಕ್ಟರ ಕುಲಕರ್ಣಿಯವರು ಮುತ್ತಿಗೆ ಹಾಕಿ ಜೂಜಾಡುತ್ತಿದ್ದ ೯ ಜನರನ್ನು ಬಂಧಿಸಿರುವರು.

ಗೋಕಾಕದ ಶಾರದಾ ನಾಟ್ಯ ಸಂಘದ ಒಡೆಯರಾದ ಶ್ರೀ ಹೊಸಮನಿ ಬಸವಣ್ಣೆಪ್ಪನವರು ತಾ॥ ೮ ನೇ ದಿನ ಹೊಸರಿತ್ತಿಯಲ್ಲಿ ಗೋಲ್ಡನ್ ರಿಂಗ ಎಂಬ ಸಾಮಾಜಿಕ ನಾಟಕ ಅಭಿನಯಿಸಿ ಅದರ ಅರ್ಧ ಉತ್ಪನ್ನವನ್ನು ಹೊಸರಿತ್ತಿ ಗಾಂಧಿ ಆಶ್ರಮಕ್ಕೆ ಅರ್ಪಿಸಿದರು.

ಧಾರವಾಡ ಜಿಲ್ಹಾ ಸೇವಾದಲ ಕಾರ್ಯಕರ್ತರು ತಾ॥ ೧೦ ನೇ ದಿನ ಧಾರವಾಡದಲ್ಲಿ ಕೆ. ಎ. ವೆಂಕಟರಾಮಯ್ಯನವರ ಅಧ್ಯಕ್ಷತೆಯಲ್ಲಿ ಸಭೆ ಸೇರಿ ಜಿಲ್ಹೆಯಲ್ಲಿ ಸಂಘಟನೆ ಬಲಪಡಿಸಲು ಜಿಲ್ಹಾ ಸಂಘಟಕನನ್ನು ನೇಮಿಸಬೇಕು, ನಿಧಿ ಕೂಡಿಸಬೇಕು, ಎಪ್ರಿಲ ೧ ನೇ ತಾರೀಖಿಗೆ ಜಿಲ್ಹಾ ಸೇವಾದಲದ ಕೂಟವನ್ನು ಜರುಗಿಸಬೇಕು ಎಂದು ನಿರ್ಣಯಿಸಿದರು.

ಹುಬ್ಬಳ್ಳಿಯಲ್ಲಿ ೮ ರಿಂದ ಆರಂಭವಾದ ಭಂಗಿ ಜನರ ಸಂಪು ಮ್ಯುನಸಿಪಾಲಿಟಿಯವರು ಅವರು ಕೇಳಿದ ೧೪ ರೂಪಾಯಿ ತುಟ್ಟಿಭತ್ತೆಗೆ ಒಪ್ಪಿದ್ದರಿಂದ ಎರಡು ದಿನ ನಡೆದು ನಿಂತಿತು.

ಹುಬ್ಬಳ್ಳಿಯಲ್ಲಿ ಕರ್ನಾಟಕ ಪ್ರಾಂತಿಕ ಪ್ರಾ. ಶಿಕ್ಷಕರ ಸಂಘದಲ್ಲಿ ಶ್ರೀ ವ್ಹಿ. ಬಿ. ನಾಯಕರ ಭಾಷಣವಾಯಿತು. ಪ್ರಾಥಮಿಕ ಶಿಕ್ಷಕರ ದುರವಸ್ಥೆ [illegible] ಕಳೆದುಕೊಂಡ ಮನುಷ್ಯತ್ವದ ಪುನಃ ಪ್ರತಿಷ್ಠಾಪನೆಯು ಶಿಕ್ಷಕರ [illegible] [illegible]ದಿನ ಅರ್ಥವಾಗಿದೆ ಎಂದು ಹೇಳಿದರು.

ಧಾರವಾಡದಲ್ಲಿ ಈ ವಾರದ ನಡುವೆ ಗೌಳಿಗರು ಹಾಗು ಹೊಟೆಲ ಒಡೆಯರ ನಡುವೆ ಹಾಲಿನ ವಿಷಯ ತಂಟೆ ಬಂದು ಹೊಟೆಲುಗಳೆಲ್ಲ ಒಂದು ದಿನ ಬಂದು ಇದ್ದವು. ಮರುದಿನ ೮ ದಿನಗಳದ್ದೊಂದು ತಾತ್ಪೂರ್ತಿಕ ಒಪ್ಪಂದವಾಗಿ ಈಗ ಕೆಲಸ ಸಾಗಿದೆ.

ರಾಣೆಬೆನ್ನೂರ ದುರ್ಘಟನೆಯಿಂದ ಜಾರಿ ಮಾಡಲಾಗಿದ್ದ ೧೪೪ ಕಲಮಿನ ಅವಧಿ ೮-೨-೪೬ಕ್ಕೆ ಮುಗಿಯಿತು. ಜನರು ತಮ್ಮ ವ್ಯವಹಾರವನ್ನು ಮೊದಲಿನಂತೆ ಸಾಗಿಸಿಕೊಂಡು ಹೋಗಬಹುದಾಗಿದೆ.

ಬೆಳಗಾವಿ

ಮಧ್ವನವಮಿ ಮಹೋತ್ಸವವು ಬೆಳಗಾವಿಯಲ್ಲಿ [illegible]ಂತಶಯನ ಗುಡಿಯಲ್ಲಿ ತಂಜಾವರ ರಾಮದಾ[illegible] [illegible]ರ್ತನ, ಪಂ [illegible] ಗಳವರ [illegible] ಭಾಷಣ, ಮಂತ್ರ, ಪರೀಕ್ಷೆ ಮೊದಲಾದ ಕಾರ್ಯಕ್ರಮಗಳಿಂದ ಸಾಂಗವಾಯಿತು.

ಬೆಳಗಾವ ಲಿಂಗರಾಜ ಕಾಲೇಜಿನ ಕರ್ನಾಟಕ ಸಂಘದ ವಾರ್ಷಿಕೋತ್ಸವಕ್ಕೆ ಪ್ರೊ. ಮುಗಳಿಯವರು ಮುಖ್ಯ ಅತಿಥಿಗಳಾಗಿ ಆಗಮಿಸಿ ಕರ್ನಾಟಕದ ಅನೇಕ ಸಮಸ್ಯೆಗಳನ್ನು ಚರ್ಚಿಸಿ ಭಾಷಣಮಾಡಿದರು.

ಬೈಲಹೊಂಗಲದಲ್ಲಿ ಹಗಲು ಹಾಡೆ ಕೊಲೆಗಳಾಗುತ್ತಿದ್ದರಿಂದ ಮೆಟಗುಡ್ಡ ವಕೀಲರ ಹಿರಿತನದಲ್ಲಿ ಸಭೆ ಸೇರಿ ಅತ್ಯಾಚಾರಗಳಾಗದಂತೆ ಉಪದೇಶ ಮಾಡಲಾಯಿತು. ಅಂದು ಸಭೆಯಲ್ಲಿ ಶ್ರೀ ಕಲ್ಲಳ್ಳಿ ಇನಾಮದಾರ ಮೊದಲಾದವರು ಮಾತನಾಡಿದರು.

ಪಾಚ್ಛಾಪುರ ಗುಂಪಿನ ಶಿಕ್ಷಕರ ಸಮ್ಮೇಲನವು ಶ್ರೀ. ಲ. ಲ. ತಳವಾರರ ಅಧ್ಯಕ್ಷತೆಯಲ್ಲಿ ಸಾಂಗವಾಯಿತು ಈ ಭಾಗದ ಎಲ್ಲ ಶಿಕ್ಷಕರೂ ಆಗಮಿಸಿದ್ದರು.

ಬೆಳಗಾವಿಯಲ್ಲಿ ೧೨ ವರ್ಷದ ಬಾಲಕನೊಬ್ಬನು ಸಾಯಕಲ್ ಅಪಘಾತಕ್ಕೆ ಸಿಲ್ಕಿ ಮರಣಕ್ಕೀಡಾದನು. ಎರಡು ಸಾಯಕಲ್ಲುಗಳು ಎದುರು ಬದುರಾಗಿ ಬಂದು ಒಂದಕ್ಕೊಂದು ತಾಗಲು ಬದಿಯಲ್ಲಿಯೆ ಹೋಗುತ್ತಿದ್ದ ಚಕ್ಕಡಿಯ ಗಾಲಿಯಲ್ಲಿ ಬಾಲಕನು ಸಿಕ್ಕು ಮೇಲೆ ಚಕ್ಕಡಿ ಹಾದು ಹೋದ್ದರಿಂದ ಕೂಡಲೆ ಮರಣ ಹೊಂದಿದನು

ಹೈದ್ರಾಬಾದ ಸಂಸ್ಥಾನದ ಕುಷ್ಟಗಿ, ಗಂಗಾವತಿ, ಸಿಂಧೂರ ತಾಲೂಕಗಳಲ್ಲಿ ಮುಂಗಾರಿ ಮತ್ತು ಹಿಂಗಾರಿ ಬೆಳೆ ಬರದ್ದರಿಂದ ಸರಕಾರದವರು ಬರಗಾಲ ಸಾರಿದ್ದಲ್ಲದೆ ಮಾನವಿ ಮತ್ತು ಪರೆಂಡಾ ತಾಲೂಕುಗಳ ಕೆಲವು ಭಾಗದಲ್ಲಿಯೂ ಸಾರಿದ್ದಾರೆ.

ವಿಜಾಪುರ

ಬಾಗಲಕೋಟೆಯಲ್ಲಿ ತಾ. ೮ ನೆಯ ದಿನ ಸೇವಾದಲದಲ್ಲಿ ಸಭೆ ಸೇರಿ ಹುಬ್ಬಳ್ಳಿಯಲ್ಲಿ ದಿವಾಕರರ ಮೇಲೆ ದುರುಳರು ನಡೆಸಿದ ದುಷ್ಕೃತ್ಯವನ್ನು ತೀವ್ರವಾಗಿ ಖಂಡಿಸಿದರು.

ಬೀಳಗಿ ಭಾಗದಲ್ಲಿ ಬರಗಾಲವು ಭೀಕರವಾಗಿದೆ. ಬೀಳಗಿ ಸುತ್ತಲಿನ ಹಳ್ಳಿಗಳಲ್ಲಿ ಜೋಳ ಹಂಚಿಕೆಕ್ಕೆ ಒಬ್ಬನನ್ನು ನೇಮಿಸಿದ್ದರಿಂದ ದುಡಿಯುವ ಜನಕ್ಕೆ ಬಹಳ ತೊಂದರೆಯಾಗಿದೆ. ಜೋಳ ದೊರಕಿಸಲು ಒಂದು ಒಪ್ಪತ್ತಿನ ಕೂಲಿ ಬಿಟ್ಟು ಎಡತಾಕಬೇಕು. ಕಾರಣ ಹಳ್ಳಿಗಳಲ್ಲಿಯೂ ಅಂಗಡಿಗಳನ್ನು ತೆರೆಯಬೇಕೆಂದು ರೈತರು ಕೇಳುತ್ತಾರೆ.

ವಿಜಾಪೂರದ ದರ್ಬಾರ ಹೈಸ್ಕೂಲಿನ ವಾರ್ಷಿಕ ಸ್ನೇಹಸಮ್ಮೇಲನವು ಶ್ರೀ ದ. ರಾ. ಬೇಂದ್ರೆಯವರ ಹಿರಿತನದಲ್ಲಿ ವಿವಿಧ ಕಾರ್ಯಕ್ರಮಗಳಿಂದ ಸಾಂಗವಾಯಿತು. ಅದೇ ಕಾಲಕ್ಕೆ ನಂದಾದೀಪ ಮತ್ತು ಕಾಣಿಕೆ ಎಂಬೆರಡು ಹಸ್ತಪತ್ರಿಕೆಗಳ ಪ್ರಕಟನಾ ಸಮಾರಂಭವೂ ಜರುಗಿತು.

ವಿಜಾಪುರ ಜಿಲ್ಹೆಯ ಪ್ರಾಥಮಿಕ ಶಿಕ್ಷಕರ ತುಟ್ಟಿ ಭತ್ತೆಯಲ್ಲಿ ಪಕ್ಷಪಾತವಿದೆಯೆಂದೂ ಕೆಲವರಿಗೆ ೬ ತಿಂಗಳ ಮರೆವಣಿ ಸಹಿತ ೧೫ ರೂ. ತುಟ್ಟಿಭತ್ತೆ ಸಿಕ್ಕಿದೆ ಎಂದೂ ಕೆಲವರಿಗೆ ೧೦ ರೂ.ಗಳೇ ದೊರೆಯುತ್ತವೆಯೆಂದೂ ತಿಳಿಯುತ್ತದೆ.

ಕೆರೂರಿನಲ್ಲಿ ನೀರಿನ ಕೊರತೆ ಬಹಳವಾಗಿದೆ. ಪ್ರತಿಮಂಗಳವಾರ ದನಗಳ ಸಂತೆ ನೆರೆಯುವದು ಆಗ ೬-೭ ಸಾವಿರ ದನಗಳು ಕೂಡುವವು. ಊರ ಜನಸಂಖ್ಯೆಯೂ ಹತ್ತು ಸಾವಿರ ಮಿಕ್ಕಿ ಇದೆ, ಅದಕ್ಕಾಗಿ ನೀರಿಲ್ಲದೆ ಗೋಳಾಟ ನಡೆದಿದೆ. ಸರಕಾರದವರು ನೀರಿನ ಪೂರೈಕೆ ಮಾಡಿಕೊಡಬೇಕು.

೯ಃ ಜಿಲ್ಹೆಯಿಂದ ಮುಂಬಯಿ ಶಾಸನ ಸಭೆಗೆ ಉತ್ತರ ಭಾಗದಲ್ಲಿ ಶ್ರೀ ಜಿ.ಎಸ್. ಸಜ್ಜನ (ಕಾಂ) ಶ್ರೀ ಮಗನಲಾಲ ಶಹಾ (ಕಾಂ) ಶ್ರೀ ಎಸ್. ಟಿ. ಪಾಟೀಲ ಶಿರೂರ (ರ್‍ಯಾ. ಡೆ.) ರಘೂತ್ತಮಾಚಾರ್ಯ ಜಹಗೀರದಾರ (ಸ್ವತಂತ್ರ) ಇವರೂ ದಕ್ಷಿಣದಲ್ಲಿ ಚನಬಸಪ್ಪ ಅಂಬಲಿ (ಕಾಂ) ಎಸ್. ಆರ್. ಕಂಠಿ (ಕಾಂ) ಎಸ್. ಬಿ. ದೇಸಾಯಿ ಸುಳ್ಳ (ಸ್ವತಂತ್ರ) ವ್ಹಿ. ಎಸ್. ಪಾಟೀಲ (ಸ್ವತಂತ್ರ) ಇವರೂ ಮುಸ್ಲಿಂ ಸ್ಥಳಕ್ಕೆ ಎಚ್. ಆರ್. ಪತ್ತೇವಾಲೆ (ಲೀಗ) ಎ. ಎಸ್. ಇಳಕಲ್ಲ (ಲೀಗ) ಎಸ್ ಎಂ. ಬಾಲಸಿಂಗ ಮಾಸ್ತರ (ಕಮ್ಯುನಿಸ್ಟ) ಪೀರಜಾದಾ ಹುಸೇನ ಪೀರದರ್ಗಾ, ಕೆ. ಎ. ಜಾನವೇಕರ ಸಯ್ಯದ ಹಬೀಬುದ್ದೀನ ಬಕ್ಷಿ (ಸ್ವತಂತ್ರರು)

ಹರಿಜನ ಸ್ಥಳಕ್ಕೆ ಬಾಬು ಹಜಾರೆ (ಕಾಂ) ರೇವಪ್ಪ ಕಾಳೆ (ಅಂಬೇಡಕರ ಪಕ್ಷ) ಘಟಕಾಂಬಳೆ (ಸ್ವತಂತ್ರ) ಹೀಗೆ ಜನರು ನಿಂತಿರುವರು.

ಮುದ್ದೇಬಿಹಾಳ ತಾಲೂಕಿನ ಬೆಳೆಗಳು ಬಹಳ ಕೆಟ್ಟುಹೋಗಿದ್ದು ಯೋಗ್ಯ ಆಣೆವಾರಿ ಆಗುವ ಕುರಿತು ಅಲ್ಲಿಯ ಕಾಂಗ್ರೆಸ ಕಾರ್ಯಕರ್ತರು ಹಳ್ಳಿಗಳನ್ನು ಸಂದರ್ಶಿಸಿ ಅಂಕಿ ಸಂಖ್ಯೆಗಳನ್ನು ಕಲೆಕ್ಟರರಿಗೆ ತಿಳಿಸಿದ್ದಾರೆ.

ಶಿರೂರ ಭಾಗದಲ್ಲಿ ಈ ಸಲ ಮಳೆಯಾಗದ ಮೂಲಕ ಬೆಳೆ ಬಾರದೆ ಇದ್ದುದರಿಂದ ಜನರ ಗೋಳು ಹೇಳತೀರದು. ಇದರಲ್ಲಿಯೆ ಲೆವಿ ವಸೂಲ ಆಗಬೇಕೆಂದು ಆಜ್ಞೆ ಬೇರೆ. ರೈತರು ಹೊಟ್ಟೆಗೇ ಇಲ್ಲದಾಗ ಲೆವ್ಹಿ ಎಲ್ಲಿಂದ ಕೊಡಬೇಕು ಎಂದು ಒದ್ದಾಡುತ್ತಾರೆ.

ಶಿರೂರಿಗೆ ನೀರಿನ ಅರಬು ಇದ್ದು ಸರಕಾರದವರು ಇತ್ತ ಲಕ್ಷವಿಡಬೇಕು ಮತ್ತು ಶಿರೂರನ್ನು ಬರಗಾಲಗ್ರಸ್ತವೆಂದು ಸಾರಬೇಕೆಂದು ರೈತರು ಬೇಡಿಕೊಳ್ಳುತ್ತಾರೆ.

ಮುಧೋಳ ಸಂಸ್ಥಾನದ ಹೊಸಕೋಟೆಯಲ್ಲಿ ಶ್ರೀ. ವೆಂಕರಡ್ಡಿ ಹೂಲಿ ಹಾಗು ಶ್ರೀರಂಗ ಕಾಮತರಿಗೆ ಅಪೂರ್ವ ಸ್ವಾಗತವಿತ್ತು ಬರಮಾಡಿಕೊಳ್ಳಲಾಯಿತು. ಡಾ. ಬೆಳವಡಿ ಅವರ ಅಧ್ಯಕ್ಷತೆಯಲ್ಲಿ ಅತಿಥಿಗಳ ಉಪನ್ಯಾಸವಾಯಿತು. ಸಭೆಗೆ ೩-೪ ಸಾವಿರ ಜನರು ಬಂದಿದ್ದರು.

ಕಾರವಾರ

ಶಿರಸಿಯಲ್ಲಿ ತಾ. ೬ ನೆಯ ದಿನ ಗೊಬ್ಬರ ತುಂಬಿದ ಗಾಡಿಯೊಂದು ರಾಯರಪೇಟೆಯಲ್ಲಿ ಭರದಿಂದ ಹೋಗುವಾಗ ೨-೩ ವರ್ಷದ ಚಿಕ್ಕ ಮಗುವಿನ ಮೇಲೆ ಹಾಯ್ದು ಮರಣಾಂತಿಕ ಗಾಯ ಉಂಟು ಮಾಡಿದೆ. ಬಂಡಿಯವನು ಎಲ್ಲೊ ಪಲಾಯನ ಹೇಳಿದ್ದಾನೆ.

ಸಿದ್ದಾಪುರನ ಯೋಗ್ಯ ದರದ ಅಂಗಡಿಗಳಲ್ಲಿ ಹತ್ತಿಕಾಳು ಬಂದಿದ್ದರೂ ಇನ್ನೂ ಚಿಲ್ಲರೆ ಮಾರಾಟಕ್ಕೆ ಅಪ್ಪಣೆಯಿಲ್ಲ. ಒಂದು ಕಡೆ ಹುಲ್ಲು ಸಿಗುವದಿಲ್ಲ. ಇನ್ನೊಂದು ಕಡೆ ಹತ್ತಿಕಾಳು ಸಿಗುವದಿಲ್ಲ. ಒಟ್ಟಿನಲ್ಲಿ ದನಕರುಗಳಿಗೆ ಉಪವಾಸದ ದಿನ ಬಂದಿವೆ.

ಹೊನ್ನಾವರ ತಾಲೂಕಿನ ಕಡತೋಕಾ, ಕೆಕ್ಕಾರ, ಮಾಡಗೇರಿ, ನವಿಲುಗೋಣ ಈ ಗ್ರಾಮಗಳ ಅಡಿಕೆ ಬೇಸಾಯಗಾರರು ಸಭೆಯಲ್ಲಿ ಅಡಿಕೆಯ ಕರ ನಿಷೇಧಿಸಿ ಗೊತ್ತುವಳಿಯನ್ನು ಭಾರತ ಸರಕಾರಕ್ಕೆ ಕಳಿಸಿದ್ದಾರೆ.

ಕುಮಟೆ ಕಾರವಾರಗಳಲ್ಲಿ ಶ್ರೀ. ದಿವಾಕರರ ಮೇಲಾದ ಅನ್ಯಾಯ ನಿಷೇಧಿಸುವ ಕುರಿತು ಸಭೆಗಳು ಜರುಗಿದವು.

ಸಿದ್ದಾಪುರದ ಹಸೂರ ಎಂಬ ಊರಲ್ಲಿ ಕರಡ ಕೊಯ್ಯುತ್ತಿದ್ದ ನಾಮಧಾರಿ ಜಾತಿಯ ರೈತನೊಬ್ಬನನ್ನು ಹಾಳಿಹದ್ದುಗಳು ಮುತ್ತಿ ಪೂರ್ಣ ತಿಂದು ಬಿಟ್ಟವೆಂದು ತಿಳಿದು ಬಂದಿದೆ.

ಗೋಕರ್ಣದ ದ್ವಾರಕಾನಾಥ ತೀರ್ಥ ಗುರುಗಳು ಹೊನ್ನಾವರದಿಂದ ಜೋಗ ಬೀಳಗಿ ಸಿದ್ದಾಪುರ ಮೊದಲಾದ ಊರುಗಳನ್ನು ಸಂಚರಿಸಿಲು ಹೊರಟಿದ್ದಾರೆ.

ಬಳ್ಳಾರಿ

ಪಂಪಾ ಕ್ಷೇತ್ರದ ಪುರಂದರದಾಸ ಮಂಟಪದಲ್ಲಿ ಪುರಂದರದಾಸರ ಪುಣ್ಯತಿಥಿಯು ಪುರಾಣ, ಉಪನ್ಯಾಸ, ಮೊದಲಾದ ಕಾರ್ಯಕ್ರಮಗಳಿಂದ ಸಾಂಗವಾಯಿತು.

ಬಳ್ಳಾರಿಯ ವೀರಶೈವ ಕಾಲೇಜಿಗೆ ಶ್ರೀಮಂತ ಹೊಳೆಗುಂದಿ ಪೊಂಪನಗೌಡರ ಮಕ್ಕಳಾದ ಶ್ರೀ ಸಿದ್ಧಮಲ್ಲನಗೌಡರು ೧೦೦೦೦ ರೂಪಾಯಿಗಳನ್ನು ದಾನವಾಗಿ ಕೊಟ್ಟಿದ್ದಾರೆ.

ಶ್ರೀ ಠಕ್ಕರಬಾಪಾರವರು ರಾಯದುರ್ಗದ ಭಾಗದ ಕೆಲವು ಹಳ್ಳಿಗಳನ್ನು ಸಂದರ್ಶಿಸಿ ಅಲ್ಲಿಯ ಆಹಾರದ ಸ್ಥಿತಿಗತಿಗಳನ್ನು ಅರಿತುಕೊಂಡರು. ಬರಗಾಲ ಪರಿಹಾರಕ್ಕಾಗಿ ಅಧಿಕಾರಿ ಅಧಿಕಾರೇತರರಿಂದ ಸಂಗತಿ ಸಂಗ್ರಹಿಸಿ ಬಳ್ಳಾರಿಯ ಹರಿಜನ ವಿದ್ಯಾರ್ಥಿ ವಸತಿಗೃಹ ನಿರೀಕ್ಷಿಸಿ ವರ್ಧಾಕ್ಕೆ ಹೋದರು.

ಕನ್ನಡ ಸಂಸ್ಥಾನಗಳು

ರಾಯಚೂರ ಮಕ್ಕಳ ಸಮ್ಮೇಲನವು ಕಳೆದ ವಾರ ಕುಮಾರ ಗೋವಿಂದ ನಾಯಕರ ಅಧ್ಯಕ್ಷತೆಯಲ್ಲಿ ಜರುಗಿತು. ಕುಮಾರಿ ಮೋಯಿನ್ ಪಾಶಾ ಅವರು ಸಮ್ಮೇಲನದ ಉದ್ಘಾಟನ ಮಾಡಿದರು. ಸದಾಶಿವ ರಾಜಪುರೋಹಿತರು ಸ್ವಾಗತಾಧ್ಯಕ್ಷರಾಗಿದ್ದರು. ಶ್ರೀ. ಸಿದ್ದರಾಮಪ್ಪ ಹಾಗು ರಾ. ಗು. ಜೋಶಿಯವರು ಮಕ್ಕಳ ಕರ್ತವ್ಯ ಕುರಿತು ಉಪದೇಶ ಮಾಡಿದರು. ಮಕ್ಕಳು ಶುಕ್ಲಾದೇವಿ, ಮಕ್ಕಳು ಮನೆದೇವರು ಸರೋಜಿನಿ ಎಂಬ ಪ್ರಹಸನಗಳನ್ನು ಅಭಿನಯಿಸಿದರು.

ಶಿವಮೊಗ್ಗಾ ಜಿಲ್ಹಾ ನ್ಯಾಯಾಧೀಶರ ಮಕ್ಕಳಾದ ನಜೀರರು ಬೆಂಗಳೂರಿನಲ್ಲಿ ಕ್ರಿಕೆಟ್ ಚಂಡು ಬಡೆದು ಮರಣ ಹೊಂದಿದರು.

ಮಿರಜ ಮಿಶನ್ ಆಸ್ಪತ್ರಿಯ ಸರ್ಜಿಕಲ್ ವಿಭಾಗದ ವರಿಷ್ಠರಾಗಿದ್ದ ಡಾ. ಅರವಟಗಿಯವರು ತಮ್ಮ ಹುದ್ದೆಗೆ ರಾಜೀನಾಮೆಕೊಟ್ಟಿದ್ದು, ಅವರು ಮಿರಜಿಯಲ್ಲಿ ಸ್ವತಂತ್ರವಾದ ದವಾಖಾನೆ ತೆರೆಯಲಿದ್ದಾರೆ.

ಚಿಕ್ಕ ಮಿರಜ ಅಧಿಪತಿಗಳು ಗುಡಗೇರಿ ತಾಲೂಕದ ಕೆಲವು ಹಳ್ಳಿಗಳಲ್ಲಿ ಹಪ್ತೆ ತಹಕೂಬ ಮಾಡಿ ಬರಗಾಲ ಕಾಮಗಾರಿಗಳೆಂದು ಪಶುಪತಿಹಾಳ ಕೆರೆ ಕೆಲಸ, ಯಲ್ಲಾಪೂರ-ಬಾಳೆಹೊಸೂರ ರಸ್ತೆ ಕೆಲಸ ಹರ್ಲಾಪುರ ಹಾಗು ಹಿರೇವಡಟ್ಟಿ ಒಡ್ಡುಗಳ ದುರಸ್ತಿ ಕೈಕೊಳ್ಳಲು ನಿರ್ಧರಿಸಿದ್ದಾರೆ.

ಜಮಖಂಡಿ ಶಾಸನ ಸಭೆ ಚುನಾವಣೆಗಳು ಮಾರ್ಚ ೫ ಹಾಗು ೬ನೇ ತಾರೀಖಿಗೆ ನಡೆಯುವವು ಪಿ. ಎಂ. ಬಂಗಿಯವರು ಪ್ರಜಾ ಪರಿಷತ್ತಿನಂತೆ ನಡೆಯದೆ ಹೋಗಿದ್ದರಿಂದ ಈ ಸಲ ಅವರು ಬೇರೊಂದು ಸಂಸ್ಥೆಯಿಂದ ನಿಲ್ಲಲಿರುವರು.

ಸಾಂಗಲಿ ವಿಲಿಂಗಡನ್ ಕಾಲೇಜದ ಕರ್ನಾಟಕ ಸಂಘದಲ್ಲಿ ತಾ. ೭ನೇ ದಿನ ಶ್ರೀ. ಜಿನರಾಜ ಹೆಗಡೆಯವರ ಭಾಷಣವಾಯಿತು. ಅವರು ಕರ್ನಾಟಕ ಬಗ್ಗೆ ಅನ್ಯಪ್ರಾಂತಗಳ ಅಜ್ಞಾನ ಉಲ್ಲೇಖಿಸಿ, ಪ್ರತ್ಯೇಕ ಪ್ರಾಂತವಿಲ್ಲದ್ದರಿಂದ ಕನ್ನಡಿಗರಿಗೂ ಕರ್ನಾಟಕಕ್ಕೂ ಆಗುತ್ತಿರುವ ಹಾನಿಯನ್ನು ವಿವರಿಸಿ ಭಾರತದ ಭಾವೀ ಘಟನೆಯಲ್ಲಿ ಕರ್ನಾಟಕಕ್ಕೆ ಪ್ರತ್ಯೇಕ ಪ್ರಾಂತ ಅವಶ್ಯವಿದೆಯೆಂದು ಹೇಳಿದರು. ೯ನೇ ತಾರೀಖಿನ ದಿನ ವರುಣಕುಂಜದ ಸಭೆಯಲ್ಲಿ ಪ್ರಗತಿಶೀಲ ಸಾಹಿತ್ಯ ಬಗ್ಗೆ ಚರ್ಚೆಯಾಯಿತು. ಶ್ರೀ. ಎ. ಎನ್. ಮೂರ್ತಿರಾಯರು ಬಂದಿದ್ದರು.

ಶ್ರೀಮತ್ ರಾಘವೇಂದ್ರಸ್ವಾಮಿಗಳ ಮಠದಲ್ಲಿ ಶ್ರೀ ಸುಯಮೀಂದ್ರತೀರ್ಥ ಶ್ರೀಪಾದಂಗಳವರು ಮಧ್ವನವಮಿಯನ್ನು ನೆರವೇರಿಸಿದರು, ಮಧ್ವವಿಜಯ ಪುರಾಣ ಮಂಗಳ ಮೆರವಣಿಗೆ ಆದ ಮೇಲೆ ಗುನ್ನಾಳ ವೆಂಕೋಬಾಚಾರ್ಯರ ಉಪನ್ಯಾಸವಾಯಿತು. ಸಂಜೆಯಲ್ಲಿ ಮತ್ತೆ ಶ್ರೀ ಅರ್ಚಕ ರಾಘವೇಂದ್ರಾಚಾರ್ಯರು ದ್ವೈತಮತದ ವೈಶಿಷ್ಟ್ಯದ ಮೇಲೆ ಮಾತನಾಡಿದರು.

ಹಿಂದುಸ್ತಾನ

ಮುಂಬಯಿ

ಅಹಮ್ಮದಾಬಾದ ನಗರ ಸಭೆ ರದ್ದು ಮಾಡಿದ್ದನ್ನು ಮುಂಬಯಿ ಹಾಯಕೋರ್ಟದವರು ಕಾಯದೆಗನುಸರಿಸಿರುವದಿಲ್ಲೆಂದು ನಿರ್ಣಯಿಸಿದ್ದರಿಂದ ಮ್ಯಾನೇಜಿಂಗ ಕಮೀಟಿಯವರು ಅದನ್ನು ಜನರ ಪ್ರತಿನಿಧಿಗಳಿಗೆ ತಿರುಗಿ ಒಪ್ಪಿಸಿದ್ದಾರೆ. ಇದರಂತೆ ಸುರತ ನಗರ ಸಭೆಯೂ ಮೇಲಿನ ನಿರ್ಣಯಕ್ಕನುಸಾರವಾಗಿ ಲೋಕ ಪ್ರತಿನಿಧಿಗಳಿಗೆ ಕೊಡಲ್ಪಟ್ಟಿರುವದು. ೧೯೪೨ನೇ ಚಳವಳಿಯಲ್ಲಿ ಈ ಎರಡೂ ಮುನಿಸಿಪಾಲಿಟಿಗಳು ಮುಖಂಡರ ಸ್ಥಾನಬದ್ಧತೆ ನಿಷೇಧಾರ್ಥ ಕಾರ್ಯ ಸ್ಥಗಿತ ಮಾಡಿದ್ದೇ ಅವುಗಳ ರದ್ದತಿಗೆ ಕಾರಣವಾಗಿತ್ತು.

ಭಡೋಚ ಜಿಲ್ಹೆಯ ಪಾನೋಲಿಯಲ್ಲಿ ೪ ಮನೆಗಳು ಸುಟ್ಟು ೧ ಲಕ್ಷ ರೂ. ಹಾನಿ ಸಂಭವಿಸಿದೆ ಒಂದು ಮನೆಯಲ್ಲಿ ೩೦ ಸಾವಿರ ರೂಪಾಯಿಯ ನೋಟುಗಳು ಭಸ್ಮವಾಗಿರುವವು.

ಸರಕಾರದಿಂದ ಪುಣೆಯಲ್ಲಿ ನಿರ್ಬಂಧದಲ್ಲಿ ಇಡಲ್ಪಟ್ಟ ಅಫಗಾನ ಸರದಾರರು ಜವಾಹರಲಾಲರಿಗೆ ಪತ್ರ ಬರೆದು ತಮ್ಮ ಬಿಡುಗಡೆಗಾಗಿ ಪ್ರಯತ್ನಿಸಬೇಕೆಂದು ಕೇಳಿದ್ದರು. ಅದಕ್ಕೆ ಜವಾಹರರು ಸದ್ಯದ ಸರಕಾರವು ಹೊಣೆಗೆಟ್ಟಿದ್ದು ಹಾಗು ಜನರ ಅಭಿಪ್ರಾಯ ಲೆಕ್ಕಿಸದಿದ್ದುದು ಇರುವದೆಂದೂ ಅದರ ಸ್ಥಳದಲ್ಲಿ ಲೋಕಪ್ರಿಯ ಸರಕಾರವು ತೀವ್ರ ಬರಲಿವೆಂದೂ ಉತ್ತರವಿತ್ತಿದ್ದಾರೆ.

ಮುಂಬಯಿ ಇಲಾಖಾ ಪ್ರಾಥಮಿಕ ಶಿಕ್ಷಕ ಸಂಘದ ಕ್ರಿಯಾಸಮಿತಿಯವರು ತಾ. ೧೦ನೇ ದಿನ ಪುಣೆಯಲ್ಲಿ ಸಭೆ ಸೇರಿ ತಮ್ಮ ಸಂಬಳದ ಹೆಚ್ಚಳದ ಬೇಡಿಕೆಯನ್ನು ಸರಕಾರವು ಮಾನ್ಯ ಮಾಡದಿದ್ದರೆ ಮಾರ್ಚ ೧ರಿಂದ ಸಂಪು ಹೂಡಬೇಕೆಂದೂ ತಾ. ೨೦ನೇ ದಿನ ಪ್ರಾಥಮಿಕ ಶಿಕ್ಷಕ ದಿನ ಪಾಲಿಸಬೇಕೆಂದೂ ಅಂದು ಯಾರೂ ಶಾಲೆಗೆ ಹೋಗತಕ್ಕದ್ದಲ್ಲವೆಂದೂ ನಿರ್ಧರಿಸಿದರು.

ಮದ್ರಾಸ

ಮದ್ರಾಸ ಕೌ[illegible] ಮುಸ್ಲಿಂ ಲೀಗದವರು [illegible] ಸಾಹೇಬ ಹಾಗು ಖಾ. ಬ. ವಿ ಹಮೀದ ಸುಲ್ತಾನ ಮಾರಕೇರರನ್ನು ದಕ್ಷಿಣ ಮಧ್ಯ ಭಾಗಕ್ಕೂ ಕೆ. ಉಪ್ಪಿಸಾಹೇಬರನ್ನು ಪಶ್ಚಿಮ ಕರಾವಳಿ ಭಾಗಕ್ಕೂ ನಿಲ್ಲಿಸಿದ್ದಾರೆ.

ರಾಜಾಜಿಯವರ ಮುಖಂಡತ್ವ ಕಳೆದುಕೊಳ್ಳಬೇಡಿರಿ ಎಂದು ಮಹಾತ್ಮಾ ಗಾಂಧಿಯವರು ಹರಿಜನ ಪತ್ರಿಕೆಯಲ್ಲಿ ಸೂಚಿಸಿದ್ದನ್ನು ಅನುಲಕ್ಷಿಸಿ ತಮಿಳನಾಡು ಕಾಂಗ್ರೆಸ್ ಕಮೀಟಿಯ ಅಧ್ಯಕ್ಷರಾದ ಕಾಮರಾಜ ನಾಡರರು ಪ್ರಾಂತಿಕ ಚುನಾವಣ ಮಂಡಳಕ್ಕೆ ರಾಜೀನಾಮೆ ಕೊಟ್ಟಿದ್ದಾರೆ. ಗಾಂಧೀಜಿಯವರ ಬರಹದಿಂದ ತಮಗೆ ಆಘಾತವಾಯಿತೆಂದೂ ಅವರು ಹೇಳಿದ ಮಾತು ತಮಗೇ ಅನ್ವಯಿಸುವವೆಂದೂ ಅವರು ಹೇಳಿರುವರು.

ಮಧ್ಯಪ್ರಾಂತ

ಮರಾಠಾ ಲಾಯಿಟ ಇನಫಂಟ್ರಿಯ ಸ್ಟಾಫ ಆಫೀಸರರಾದ ಕ್ಯಾಪ್ಟನ್ ಡಿಸಿಲ್ವಾ ಅವರು ತಾ. ೧೦ ನೇ ದಿನ ನಾಗಪುರ ಸ್ಟೇಶನದಲ್ಲಿ ಒಂದು ಪ್ಲಾಟಫಾರ್ಮದಿಂದ ಮತ್ತೊಂದು ಪ್ಲಾಟಫಾರ್ಮಿಗೆ ಹೋಗುವಾಗ ಮುಂಬಯಿಯಿಂದ ಬಂದ ಕಲಕತ್ತಾ ಮೇಲ ಗಾಡಿ ಬುಡದಲ್ಲಿ ಸಿಕ್ಕು ಮರಣ ಹೊಂದಿದರು.

ಡಾ. ಖರೆಯವರು ವ್ಹಾಯಿಸರಾಯರಿಗೂ ಚಕ್ರವರ್ತಿ ಸರಕಾರದವರಿಗೂ ಫೀಲ್ಡಮಾರ್ಶಲ್ ಜನರಲ್ ಸ್ಮಟ್ಸರೊಡನೆ ಹಿಂದೀಯರ ಸಮಸ್ಯೆ ಬಗ್ಗೆ ಚರ್ಚೆ ಮಾಡಲು ಮಹಾತ್ಮರನ್ನು ದಕ್ಷಿಣ ಆಫ್ರಿಕೆಗೆ ಕಳಿಸಲು ಸೂಚಿಸಿದ್ದಾರೆಂದೂ ಈ ಸೂಚನೆ ಮಾನ್ಯವಾಗಲಿಲ್ಲವಾದರೆ ಅವರು ರಾಜೀನಾಮೆ ಕೊಡಲಿರುವರೆಂದೂ ಹಿತವಾದ ಪತ್ರಿಕೆಯಲ್ಲಿ ಪ್ರಕಟವಾಗಿರುವದು.

ಅಖಿಲ ಭಾರತ ಗೋಸೇವಾ ಸಂಘದ ದ್ವಿತೀಯ ಪರಿಷತ್ತು ವರ್ಧಾದಲ್ಲಿ ತಾ. ೧೧ ನೇ ದಿನ ಮಹಾತ್ಮರಿಂದ ಪ್ರಾರಂಭಿಸಲ್ಪಟ್ಟು ಅಂದು ಅವರ ಮೌನ ದಿನವಿದ್ದುದರಿಂದ ಮರುದಿನ ಅವರ ಭಾಷಣವಾಯಿತು. ಡಾ. ರಾಜೇಂದ್ರ ಪ್ರಸಾದರು ಅಧ್ಯಕ್ಷತೆ ವಹಿಸಿ ಭಾರತದ ಆರ್ಥಿಕ ಜೀವನದಲ್ಲಿ ಗೋಗಳ ಮಹತ್ವ ವಿವರಿಸಿದರು.

ಮಹಾತ್ಮರ ಹರಿಜನ ಪತ್ರಿಕೆಯು ತಾ. ೧೦ ರಿಂದ ಶ್ರೀ ಪ್ಯಾರೇಲಾಲರ ಸಂಪಾದಕತ್ವದಲ್ಲಿ ಪುನಃ ಪ್ರಾರಂಭವಾಗಿದೆ.

ಹೊಸದಿಲ್ಲಿ

ಡಾ. ಎನ್. ಬಿ. ಖರೆಯವರು ಬ್ರಿಟಿಶ ಪಾರ್ಲಮೆಂಟರಿ ಶಿಷ್ಟಮಂಡಳದವರಿಗೆ ವೈಯಕ್ತಿಕ ನಾತೆಯಿಂದ ಮನವಿ ಅರ್ಪಿಸಿ ಪಾಕಿಸ್ತಾನಕ್ಕೆ ವಿರೋಧ ಪ್ರದರ್ಶಿಸಿರುವರಲ್ಲದೆ ಪ್ರಾಂತಗಳಿಗೆ ಶೇಷಾಧಿಕಾರ ಕೊಟ್ಟು ಹಿಂದುಸ್ತಾನವನ್ನು ಅವಿಭಾಜ್ಯವೆಂದು ತಿಳಿದು ಅದರ ಘಟನೆ ಸಿದ್ಧಪಡಿಸಬೇಕಾಗಿ ಕೇಳಿಕೊಂಡಿದ್ದಾರೆ.

ಹಿಂ. ರಾ. ಸೈನ್ಯದ ಸುಬೇದಾರ ಸಿಂಗಾರಾಸಿಂಗ ಮತ್ತು ಜಮೇದಾರ ಫತ್ತೇಖಾನರು ದಂಡಿನ ನ್ಯಾಯಾಲಯದಲ್ಲಿ ತಮ್ಮ ಹೇಳಿಕೆಗಳಲ್ಲಿ ಭಾರತ ಸ್ವಾತಂತ್ರ್ಯ ದೊರಕಿಸುವ ಉದ್ದೇಶದಿಂದಲೆ ತಾವು ಎಲ್ಲ ಕೃತ್ಯಗಳನ್ನೆಸಗಿರುವದರಿಂದ ನ್ಯಾಯಾಲಯದ ತೀರ್ಪು ತಮಗೆ ಸಂಬಂಧಿಸಿಲ್ಲವೆಂದೂ ತಮ್ಮ ದೇಶಬಾಂಧವರ ತೀರ್ಪೇ ತಮಗೆ ಮಾನ್ಯವೆಂದೂ ಹೇಳಿದರು.

ಹಿಂ. ರಾ. ಸೈನ್ಯದ ಕ್ಯಾಪ್ಟನ್ ಅಬ್ದುಲ್ ರಶೀದರಿಗೆ ವಿಧಿಸಿದ ಶಿಕ್ಷೆಯ ನಿಷೇಧಾರ್ಥವಾಗಿ ದಿಲ್ಲಿ ಮುಸಲ್ಮಾನರು ತಾ. ೧೧ನೇ ದಿನ ಹರತಾಳ ಪಾಲಿಸಿದರು ಮತ್ತು ೨೦೦೦ ಜನರು ಮೆರವಣಿಗೆಯಿಂದ ಅಸೆಂಬ್ಲಿಗೆ ಹೋಗಿ ವಿರೋಧ ವ್ಯಕ್ತಮಾಡಿದರು. ಅವರು ಕೆಲವು ಬ್ರಿಟಿಶ ಸೈನಿಕರನ್ನೂ ನಾಗರಿಕರನ್ನೂ ಹೊಡೆದು ಮಿಲಿಟರಿ ಲಾರಿ ತಡೆದರೆಂದು ತಿಳಿಯುತ್ತದೆ.

ದಿಲ್ಲಿ ಲೋಕಲ್ ಬೋರ್ಡ ಚುನಾವಣೆಯಲ್ಲಿ ೧೨ ಸ್ಥಳಗಳಲ್ಲಿ ಕಾಂಗ್ರೆಸ್ಸಿಗೆ ೮ ಸ್ಥಳಗಳು ಸಿಕ್ಕಿವೆ ಮೂವರು ಸ್ವತಂತ್ರ ಸಭಾಸದರು ಕಾಂಗ್ರೆಸದಲ್ಲಿ ಕೂಡಲು ಒಪ್ಪಿರುವರು.

ವಿಶ್ವಾಸಭಂಗ ಹಾಗು ರಾಜದ್ರೋಹ ಆರೋಪದಿಂದ ಮಲಾಯಾದಲ್ಲಿ ಬಂಧಿಸಲ್ಪಟ್ಟ ಎಸ್. ಸಿ. ಗೋಹೋ ಅವರು ಜಾಮೀನ ಮೇಲೆ ಬಿಡಲ್ಪಟ್ಟಿರುವರು.

ಸಂಯುಕ್ತ ಸಾಮ್ರಾಜ್ಯ ಹಾಗು ಅಮೇರಿಕೆಗೆ ಹೋಗುವ ಆಹಾರ ಶಿಷ್ಟಮಂಡಳದ ಸರ್ ಎಸ್ ವಿ ರಾಮಮೂರ್ತಿ, ಸರ್ ಎಸ್. ಮಾಧವರಾವ ಹಾಗು ಎ. ಡಿ. ಗೋರವಾಲಾ ಅವರು ತಾ. ೧೧ಕ್ಕೆ ಲಂಡನಕ್ಕೆ ಪ್ರಯಾಣ ಬೆಳಿಸಿದರು. ಸರ್ ನಾಜೀಮುದ್ದೀನ, ಡಾ. ವ್ಹಿ. ಕೆ. ಆರ್. ವ್ಹಿ. ರಾವ, ಸರ್ ಇಬ್ರಾಹಿಮ ರಹಿಮತುಲ್ಲಾ, ಸರದಾರ ಸಂತಸಿಂಗ ಅವರೂ ಬೇಗನೆ ಹೋಗಲಿರುವರು.

ವ್ಹಾಯಿಸರಾಯರ ಆಮಂತ್ರಣ ಮೇರೆಗೆ ಜಿನ್ನಾರವರು ಆಹಾರ ಪರಿಸ್ಥಿತಿ ಚರ್ಚಿಸಲು ವ್ಹಾಯಿಸರಾಯರಲ್ಲಿ ಹೋಗಿ ೪೦ ಮಿನೀಟು ಮಾತುಕತೆಯಾಡಿ ಬಂದರು. ಕಾಂಗ್ರೆಸ ಅಧ್ಯಕ್ಷರಿಗೂ ವ್ಹಾಯಿಸರಾಯರು ಆಮಂತ್ರಣ ಕಳಿಸಿದ್ದು ಅದನ್ನು ಅವರು ಮಾನ್ಯ ಮಾಡಿದ್ದಾರೆ.

ಬ್ರಿಟಿಶ ಪಾರ್ಲಮೆಂಟರಿ ಶಿಷ್ಟಮಂಡಳದ ಸದಸ್ಯರು ತಾ. ೧೧ನೇ ದಿನ ಲಂಡನ್ನಿಗೆ ತಿರುಗಿ ಹೋದರು.

ಫಿರೋಜಪುರ ಜೇಲಿನಲ್ಲಿ ಸೆಕ್ಯೂರಿಟಿ ಕೈದಿಗಳಾಗಿದ್ದ ಶ್ರೀಕೃಷ್ಣನ್ ನಾಯರರು ಬಿಡಲ್ಪಟ್ಟಿದ್ದಾರೆ. ಕಳೆದ ೩ ವರ್ಷಗಳಿಂದ ಇವರು ಜೇಲಿನಲ್ಲಿದ್ದರು.

ಬಂಗಾಲ--ಆಸಾಮ

ಕಾಂಗ್ರೆಸ ವರ್ಕಿಂಗ ಕಮೀಟಿಯ ಮುಂದಿನ ಅಧಿವೇಶನವು ಮಾರ್ಚ ೨ ನೇ ವಾರದಲ್ಲಿ ಜರುಗುವದು. ಈ ಸಲದ ಸಭೆಯಲ್ಲಿ ಆಹಾರ ಪರಿಸ್ಥಿತಿ ಚರ್ಚೆಗೆ ಬರುವದೆಂದು ತಿಳಿಯುತ್ತದೆ.

ಬಂಗಾಲದ ಹೊಸ ಗವರ್ನರರಾದ ಸರ್ ಫ್ರೆಡರಿಕ ಜಾನ ಬರೋಜರವರು ತಮ್ಮ ಪತ್ನಿ ಹಾಗು ಖಾಸಗಿ ಸೆಕ್ರೆಟರಿ ಮಿಸ್ ಫಿಲಿಸರೊಡನೆ ತಾ ೧೧ ನೆ ದಿನ ಆಗಮಿಸಿರುವರು.

ಕಾಂಗ್ರೆಸ ಅಧ್ಯಕ್ಷರಾದ ಮೌಲಾನಾ ಆಝಾದರು ಸಾದುಲ್ಲಾ ಅವರ ಭೆಟ್ಟಿ ತೆಗೆದುಕೊಂಡು ಮಂತ್ರಿ ಮಂಡಳದಲ್ಲಿ ಸಹಕರಿಸಲು ಆಮಂತ್ರಣವಿತ್ತರು. ಆದರೆ ಅವರು ನಿರಾಕರಿಸಿದರು.

ಡಾ. ರಾಜೇಂದ್ರ ಪ್ರಸಾದರು ತಾ. ೧೦ ನೇ ದಿನ ಮಹಾತ್ಮರ ಭೆಟ್ಟಿ ತೆಗೆದುಕೊಂಡು ವಿಧಾಯಕ ಕಾರ್ಯಕ್ರಮ ಕುರಿತು ಅವರೊಡನೆ ದೀರ್ಘ ಚರ್ಚೆ ನಡೆಸಿದರು.

ಸಂಯುಕ್ತಪ್ರಾಂತ

ವೀರಭಾರತ ಎಂಬ ಹಿಂದಿ ದೈನಿಕ ಪತ್ರದ ಉಪಸಂಪಾದಕರಾದ ರಾಮದಯಾಳ ಪಾಂಡೆ ಅವರು ೧೯೪೨ ನೇ ಇಸ್ವಿ ಗಲಭೆ ಸಂಬಂಧದಲ್ಲಿ ಶಹಾಬಾದದಲ್ಲಿ ಬಂಧಿಸಲ್ಪಟ್ಟಿದ್ದಾರೆ.

ಪಂ. ಜವಾಹರಲಾಲರು ಒಂದು ಪ್ರಕಟನೆ ಹೊರಡಿಸಿ ಕ್ಯಾಪ್ಟನ್ ರಶೀದರಿಗೆ ವಿಧಿಸಿದ ಶಿಕ್ಷೆ ಅನ್ಯಾಯದ್ದಿರುವದೆಂದೂ ಮೊದಲನೆ ಖಟ್ಲೆಯಲ್ಲಿ ತೋರಿಸಿದ ಜಾಣತನ ಹಾಗು ದೂರದೃಷ್ಟಿಯನ್ನು ಉಳಿದ ಖಟ್ಲೆಗಳಲ್ಲೂ ಮುಖ್ಯ ಸೇನಾಪತಿಗಳು ತೋರಿಸುವದು ಅವಶ್ಯವಿದೆಂದೂ ಅಭಿಪ್ರಾಯ ವ್ಯಕ್ತಮಾಡಿದ್ದಾರೆ.

ಮುಸ್ಲಿಂಲೀಗ ಕಾರ್ಯಕಾರಿ ಮಂಡಳದ ಹುಸೇನ ಇಮಾಮರು ಕ್ಯಾ. ರಶೀದರಿಗಾದ ಶಿಕ್ಷೆಯನ್ನು ಪ್ರತಿಭಟಿಸಿ ಕಾಂಗ್ರೆಸ್ಸಿಗೆ ಬೆದರಿ ಸರಕಾರವು ಮೊದಲನೆ ಖಟ್ಲೆಯವರನ್ನು ಬಿಟ್ಟಂತೆ ತೋರುತ್ತದೆಂದೂ ಇಲ್ಲದಿದ್ದರೆ ಈ ರೀತಿ ತಾರತಮ್ಯವಾಗುತ್ತಿರಲಿಲ್ಲೆಂದೂ ಮುಸಲ್ಮಾನರೂ ಕಾಂಗ್ರೆಸ್ಸಿಗಿಂತ ಹೆಚ್ಚು ತೊಂದರೆ ಕೊಡುವರೆಂಬುದನ್ನು ಮರೆಯತಕ್ಕದ್ದಲ್ಲವೆಂದೂ ಸರಕಾರವನ್ನು ಎಚ್ಚರಿಸಿದ್ದಾರೆ.

ಗೋದಿ ಸೀದಾ ಅರ್ಧ ಕಡಿಮೆ ಮಾಡಿದ ಬಗ್ಗೆ ಪ್ರಾಂತದಲ್ಲೆಲ್ಲ ಅಸಂತೋಷವುಂಟಾಗಿದೆ [illegible]ಪುರದಲ್ಲಿ ಎಲ್ಲ ಪಕ್ಷಗಳ ಪ್ರಚಂಡ ಸಭೆ ಸೇರಿ ಕೇಂದ್ರ ಅಧಿಕಾರಿಗಳ ದೌರ್ಬಲ್ಯವೇ ಈ ಅವ್ಯವಸ್ಥೆಗೆ ಕಾರಣವೆಂದೂ ಅವರು ಲೋಕಪ್ರಿಯರಿಗೆ ಸ್ಥಳಬಿಟ್ಟು ಕೊಡಬೇಕೆಂದೂ ಕೇಳಲಾಯಿತು. [illegible]ಬಾದದಲ್ಲಿಯೂ ಸಭೆ ಹರತಾಳ ನಡೆದು ಜಿಲ್ಲಾ ಮ್ಯಾಜಿಸ್ಟ್ರೇಟರಲ್ಲಿ ದವುಡುಗಳು ಹೋಗಿ [illegible] ಸರಕಾರಿ ಮುದ್ರಣಾಲಯ ಕೆಲಸಗಾರರೂ ಸಂಪಿನ ಬೆದರಿಕೆ ಹಾಕಿರುವರು.

ಅ. [illegible] ವೃತ್ತಪತ್ರ ಸಂಪಾದಕರ ಪರಿಷತ್ತಿನ [illegible]ಟನವು ತಾ. ೧೬ ನೇ ದಿನ ಅಲಹಾಬಾದದಲ್ಲಿ [illegible] ಜವಾಹರಲಾಲರ ಹಸ್ತದಿಂದ ನಡೆ[illegible] ರ್ ತೇಜಬಹದ್ದೂರ ಸಪ್ರೂರವರು [illegible]ತ್ತಿನಲ್ಲಿ ಹಿಂದುಸ್ತಾನದಲ್ಲಿ ಮುದ್ರಣ [illegible]ಂಧ ಕಾಯಿದೆ ಬಗ್ಗೆ ಭಾಷಣ ಮಾಡಿದರು.

ಸಿಂಧ-ಪಂಜಾಬ-ಸರಹದ್ದ

ಸರಹದ್ದ ಶಾಸನಸಭೆಯ ೫೦ ಸ್ಥಳಗಳಲ್ಲಿ ಈ ವರೆಗೆ ೨೧ ಕಾಂಗ್ರೆಸ್ಸಿಗೆ, ೯ ಮುಸ್ಲಿಂ ಲೀಗಿಗೆ ೧ ರಾಷ್ಟ್ರೀಯ ಮುಸಲ್ಮಾನರಿಗೆ ಸಿಕ್ಕಿವೆ. ಶಿಕ್ಷಣ ಮಂತ್ರಿ ಕಾಜಿ ಅತಾವುಲ್ಲಾಖಾನರು, ಆರ್ಥಿಕ ಮಂತ್ರಿ ಭಂಜುರಾಮ ಗಾಂಧಿಯವರು ಆರಿಸಿ ಬಂದಿರುವರು.

ಸಿಂಧ ಶಾಸನಸಭೆ ಆಯವ್ಯಯ ಅಧಿವೇಶನವು ಮಾರ್ಚ ೧೨ಕ್ಕೆ ಪ್ರಾರಂಭವಾಗುವದು.

ಪಂಜಾಬ ಶಾಸನಸಭೆ ಚುನಾವಣೆಯಲ್ಲಿ ಕಾಂಗ್ರೆಸ್ಸಿನ ಡಾ. ಗೋಪೀಚಂದ ಭಾರ್ಗವರು ಲಾಲ್ಯ ಮನೋಹರಲಾಲರನ್ನು ಸೋಲಿಸಿ ಆರಿಸಿ ಬಂದಿರುವರು. ಮನೋಹರಲಾಲರು ಸದ್ಯದ ಮಂತ್ರಿಮಂಡಲದಲ್ಲಿ ಹಣಕಾಸಿನ ಮಂತ್ರಿಗಳಿರುವರು.

ಪಂಜಾಬದ ಕೆಲವು ಸ್ಥಳಗಳಲ್ಲಿ ಮತದಾನ ಕಾಲಕ್ಕೆ ಲೀಗ ಹಾಗು ಯೂನಿಯನಿಸ್ಟ ಪಂಗಡದವರಲ್ಲಿ ತಿಕ್ಕಾಟವುಂಟಾಗಿದ್ದರಿಂದ ಮತದಾನವನ್ನೆ ನಿಲ್ಲಿಸಲಾದ ಸುದ್ದಿ ಬಂದಿದೆ.

ಬಿಹಾರ

ಶಾಸನ ಸಭೆ ಚುನಾವಣೆ ಮಾರ್ಚ ಮೊದಲನೆ ವಾರದಲ್ಲಿ ಜರುಗುವದು. ೧೫೨ ಸ್ಥಳಗಳಲ್ಲಿ ಈಗಾಗಲೆ ೪೩ ಕಾಂಗ್ರೆಸ್, ೨ ಮುಸ್ಲಿಂ ಲೀಗ, ೫ ಸ್ವತಂತ್ರ ಹಾಗು ೨ ಇತರ ಹೀಗೆ ೫೨ ಜನರು ಅವಿರೋಧ ಆರಿಸಿ ಬಂದಿರುವರು.

ಸಿಂಹಳ ಹಿಂದೀಯರ ಹರತಾಳ

ಸಿಂಹಳದ ಹೊಸ ರಾಜ್ಯಘಟನೆಯನ್ವಯ ಹಿಂದೀಯರಿಗೆ ಮೂಲಭೂತ ನಾಗರಿಕ ಹಕ್ಕುಗಳನ್ನು ಕೂಡ ಕೊಟ್ಟಿಲ್ಲವಾದುದರಿಂದ ಇದನ್ನು ನಿಷೇಧಿಸಲು ಸಿಂಹಳದ ೬ ಲಕ್ಷ ಹಿಂದೀಯರು ತಾ. ೧೨ ಕ್ಕೆ ಹರತಾಳವನ್ನು ಆಚರಿಸಿದರು.

ಸುಭಾಸ ಬೋಸರು ಭಾರತದಿಂದ ಪಾರಾದ ಕಥೆ

ಸುಭಾಷಚಂದ್ರ ಬೋಸರು ಹಿಂದುಸ್ತಾನದಿಂದ ಪಾರಾಗಿ ಹೋದ ಸ್ವಾರಸ್ಯ ಘಟನೆಯನ್ನು ಕುರಿತು ಮಾಸ್ತರ ತಾರಾಸಿಂಗರು ತಮ್ಮ "ಸಂತ ಸಿಪಾಹಿ" ಪತ್ರಿಕೆಯಲ್ಲಿ ಕೆಲ ಸಂಗತಿಗಳನ್ನು ಹೊರಗೆಡಹಿದ್ದಾರೆ.

ಸೆರೆಮನೆಯಲ್ಲಿರುವಾಗಲೇ ಸುಭಾಸರು [illegible] ಓಟ ಕೀಳುವ ಯೋಜನೆಯನ್ನು ಮಾಡಿದ್ದರಂತೆ. ಗಡ್ಡ ಬೆಳೆಸುವದು ಅವರ ಯೋಜನೆಯ ಮುಖ್ಯ ಅಂಗವಾಗಿತ್ತು. ಸೆರೆಮನೆಯಲ್ಲಿರುವಾಗಲೆ ಅವರು ಗಡ್ಡ ಬೋಳಿಸುವದನ್ನು "ಅಲಕ್ಷಿಸ" ತೊಡಗಿದ್ದರು. ಬಿಡುಗಡೆಯಾದ ಮೇಲೆ ಅವರು ಈ ಗಡ್ಡ ಬೆಳೆದುದು ಜನರಿಗೆ ತಿಳಿಯಬಾರದೆಂದು ಏಕಾಂತದಲ್ಲಿಯೆ ಉಳಿದಿದ್ದರು. ಸಾಲದ್ದಕ್ಕೆ ಸುಭಾಸರಿಗೆ "ಆಧ್ಯಾತ್ಮಿಕ ಒಲವು" ಅಂಟಿದೆಯೆಂದು ಜಾಹೀರುಪಡಿಸಲಾಯಿತು. ಈ ಸೋಗು ಬಹಳ ಚನ್ನಾಗಿ ಕೆಲಸ ಮಾಡಿತು. ನಿಜವಾಗಿ ಸುಭಾಸರು ಬರಿ ಗಡ್ಡ ಬೆಳೆಸುತ್ತಿದ್ದರು. ಕೊನೆಕೊನೆಗೆ ಅವರ ಕೋಣೆಗೆ ಅವರ ಇಬ್ಬರು ಸೋದರಳಿಯಂದಿರ ಹೊರತು ಯಾರಿಗೂ ಪ್ರವೇಶವಿದ್ದಿಲ್ಲ.

ಮುಸ್ಲಿಮ ವೇಷ

ಜನೆವರಿ ೧೬, ೧೯೪೧ ನೆ ದಿನ ಅವರು ತಮ್ಮ ಮನೆಬಿಟ್ಟು ಹೊರಟುಹೋದರು. ಆಗ ಅವರು ಮುಸ್ಲಿಂ ಮೌಲವಿಯಂತೆ ಪೋಷಾಕು ಹಾಕಿದ್ದು ಉದ್ದನ್ನ ಟೊಪ್ಪಿಗೆ ಧರಿಸಿದ್ದರು. ಹೌರಾ ನಿಲ್ದಾಣದಿಂದ ಇಡೀ ದ್ವಿತೀಯ ವರ್ಗದ ಡಬ್ಬಿಯೊಂದನ್ನು ಮುಸ್ಲಿಂ ಶಾಸನ ಸಭಾ ಸದಸ್ಯ[illegible]ಬ್ಬನ ಹೆಸರಲ್ಲಿ ಅವರಿಗಾಗಿ ಮೀಸಲಿರಿಸಲಾಗಿತ್ತು. ಗುಪ್ತ ಪೋಲೀಸರಿಗೆ ಮಂಕುಬೂದಿ ಎರಚುವ ಸಲುವಾಗಿ ಅವರು ೬೦ ಮೈಲು ಕಾರಿನಲ್ಲಿ ಸಾಗಿ ರೇಲುಗಾಡಿ ಹತ್ತಿದರು. ಅವರಿನ್ನೂ ಕಲಕತ್ತೆಯಲ್ಲೇ ಇರುವರೆಂಬ ಭ್ರಮೆ ಹುಟ್ಟಿಸುವ ಸಲುವಾಗಿ ಅವರ ಕೋಣೆಗೆ ದಿನಾಲೂ ಅವರ ಊಟವನ್ನು ಕಳಿಸಲಾಗುತಿತ್ತು. ಆ ಊಟವನ್ನು ಅವರ ಅಳಿಯಂದಿರೇ ತಿಂದುಬಿಡುತ್ತಿದ್ದರು. ಹತ್ತು ದಿನಗಳ ನಂತರ, ಜನೆವರಿ ೨೬ ಕ್ಕೆ ಅವರು ನ್ಯಾಯಸ್ಥಾನದಲ್ಲಿ ಹಾಜರಾಗದೆ ಹೋದಾಗಲೆ ಅವರು ಓಡಿಹೋದುದು ಹೊರಬಿತ್ತು.

ಮೋಸ ಮಾಡಿದರು

ಪೇಶಾವರಕ್ಕೆ ಮುಟ್ಟುವ ವರೆಗೂ ಅವರು ಜಡ್ಡಾದವರಂತೆ ನಟಿಸುತ್ತ ಮಲಗಿಬಿಟ್ಟಿದ್ದರು. ಪೇಶಾವರ ಮುಟ್ಟಿದ ನಂತರ ಅವರು [illegible]ಖಾನ ಎಂಬವರಲ್ಲಿ ಉಳಿದುಕೊಂಡಿದ್ದರು. ಅಬ್ದುಸಖಾನಎಂಬವರನ್ನು ಮುಂದೆಬಂಧಿಸಲಾಯಿತು. ಅವರು ಇದೇ ಈಗ ಬಿಡುಗಡೆ ಹೊಂದಿದ್ದಾರೆ.

ಪೇಶಾವರದಿಂದ ಅರ್ಧ ಮೋಟಾರಿನಲ್ಲಿ, ಅರ್ಧ ಕಾಲ್ನಡಿಗೆಯಲ್ಲಿ ಗುಡ್ಡಗಾಡಿನ ಜನರ ಸಹಾಯದಿಂದ ಸಾಗಿ ಅವರು ಕಾಬೂಲ ಸೇರಿದರು. ಅವರನ್ನು ಪಾರುಮಾಡಲು ಸಹಾಯ ಮಾಡಿದ ಕಮ್ಯುನಿಷ್ಟರು, ಕಾಬೂಲಿನಲ್ಲಿರುವ ಸೋವಿಯೆಟ ರಾಯಭಾರಿಗೃಹದವರು ಅವರನ್ನು ಮುಂದೆ ಸಾಗಲು ಸಹಾಯ ಮಾಡುವರೆಂದು ತಿಳಿಸಿದ್ದರು. [illegible]ರೊಡನೆ ಮೂವರು ಕಮ್ಯುನಿಷ್ಟ [illegible]ದ್ದರು. ಆದರೆ ಅಷ್ಟುಹೊತ್ತಿಗೆ ಬ್ರಿ[illegible] ರಶಿಯನ್ನರ ಸಂಬಂಧ ಸುಧಾರಿಸಿತ್ತು. ಆದುದರಿಂದ ಸೋವಿಯಟ್ ಸರಕಾರ ಸಹಾಯ ನೀಡಲಿಲ್ಲ. ಕೆಲಕಾಲ ಬೋಸರು ಮೀನಮೇಷ ಎಣಿಸುತ್ತ ಕೆಟ್ಟ ಆಹಾರ ತಿನ್ನುತ್ತ ಕಾಬೂಲದಲ್ಲಿ ನಿಜವಾಗಿ ಜಡ್ಡಾಗಿ ಮಲಗಿದ್ದರು. ಆಗ ಅವರಿಗೆ ಹಿಂದೀ ರೇಡಿಯೋ ವ್ಯಾಪಾರಿ [illegible] ಆಶ್ರಯವಿತ್ತಿದ್ದರು. ಮುಂದೆ ಉತ್ತಮಚಂದ[illegible] ಕಾಬೂಲಿನಿಂದ ಪೇಶಾವರಕ್ಕೆ ಗಡಿಪಾರು [illegible] ಬಂಧಿಸಲಾಯಿತು.

ಇಷ್ಟರಲ್ಲಿ ಪೋಲೀಸು ಉಪದ್ರವ ಹೆಚ್ಚಾಯಿತು. ಬೋಸರಿಗೆ ರಶಿಯನ್ ಸಹಾಯವನ್ನೇ ಪಡೆಯುವ ಆಶೆಯಿತ್ತು. ಜರ್ಮನ ಸಹಾಯ ಪಡೆಯುವ ಮನಸ್ಸಿದ್ದಿಲ್ಲ. ಆದರೆ ಸೋವಿಯೆಟ ಸಹಾಯ ದೊರಕದ್ದರಿಂದ ಅವರು ನಿರುಪಾಯರಾಗಿ ಜರ್ಮನರ ಸಹಾಯ ಅಂಗೀಕರಿಸಿದರು. ಜರ್ಮನರು ಅವರಿಗಾಗಿ ಇಟಾಲಿಯನ ಪಾಸಪೋರ್ಟ ದೊರಕಿಸಿದರು. ಅವರು ವಿಮಾನ ಮುಖಾಂತರ ಜರ್ಮನಿಗೆ ಪಾರಾದರು.

ಮುಂಬಯಿ ಶಾಸನ ಸಭೆ

(೪ನೇ ಪುಟದಿಂದ ಮುಂದರಿದುದು)

ಉಳಿದ ಕಡೆಗೆ ಕಾಂಗ್ರೆಸದಿಂದ ನಿಂತ ಹುರಿಯಾಳುಗಳಲ್ಲಿ ಆರ್. ಬಿ. ಘೋರ್ಪಡೆ, ಸುಮತಿಬಾಯಿ ಗೋಕೆ, ಪೋಪಟಲಾಲ ಶಹಾ, ಬಿ. ಎಂ. ಗುಪ್ತೆ (ಪುಣೆ), ಡಾ. ಅಂತ್ರೋಳಿಕರ, ಧುಮ್ಮಾ. ಭೆನ್ನುಸಿಂಗ, ಟಿ. ಎಸ್. ಜಾಧವ (ಸೊಲ್ಲಾಪುರ), ಗೋವಿಂದ ಹರಿ ದೇಶಪಾಂಡೆ (ನಾಸಿಕ), ಗುಲಝಾರಿ ಲಾಲ ನಂದಾ ಅಹಮದಾಬಾದ, ಆರ್. ...ಗಿರಮೆ, ಕೆ ಎಸ್. ಫಿರೋದಿಯಾ ಅಹಮದನಗರ ಮೊದಲಾದವರು ಪ್ರಮುಖರಿರುವರು. ಹಿಂದೂ ಮಹಾಸಭೆಯವರೂ ಅಂಬೇಡಕರ ಪಕ್ಷದವರೂ ಅಲ್ಲದೆ ಕೆಲವು ಸ್ವತಂತ್ರರೂ ಇವರನ್ನು ವಿರೋಧಿಸಿರುವರು.

ಕರ್ನಾಟಕದಲ್ಲಿ ಕೆಳಗಿನವರು ನಿಂತಿರುವರು.

ಧಾರವಾಡ ಜಿಲ್ಲೆ

ಧಾರವಾಡ ಜಿಲ್ಲೆಯ ಉತ್ತರ ಭಾಗ ೪ ಸ್ಥಳಗಳು:-೧ ಅಂದಾನೆಪ್ಪ ದೊಡ್ಡಮೇಟಿ ಕಾಂ ೨ ೧ ಶ್ರೀ ಹುಕ್ಕೇರಿಕರ ಕಾಂ ೩ ಕೆ. ಬಿ. ದುಂದೂರ ಕಾಂ. ೩ ಟಿ. ಆರ್. ನೇಸ್ವಿ ಕಾಂ. ೪ ಸರ್ ಸಿದ್ದಪ್ಪ ಕಂಬಳಿ ಸ್ವತಂತ್ರ

ಧಾರವಾಡ ಜಿಲ್ಲೆ ದಕ್ಷಿಣ ಭಾಗ ೨ ಸ್ಥಳಗಳು- ೧ ಈರನಗೌಡ ಪಾಟೀಲ ಕಾಂ ೨ ಕಲ್ಲನಗೌಡ ಪಾಟೀಲ ಕಾಂ ೩ ಲಿಂಗರಾಜ ಮುದ್ದಣ್ಣವರ ರ್‍ಯಾಡಿಕಲ್ ಡೆಮೊಕ್ರಾಟ.

ರಾಣೆಬೆನ್ನೂರ ತಾಲೂಕ ಸ್ತ್ರೀಸ್ಥಳ ೧:- ೧ ಎಲ್ಲವ್ವ ಸಾಂಬ್ರಾಣಿ ಕಾಂ ೨ ಸೌ. ಪಂಚವ್ವ ಸರದಾರ ರ್‍ಯಾಡಿಕಲ್ ಡೆಮೊಕ್ರಾಟ (ಸೊಲ್ಲಾಪುರದ ಬ್ಯಾರಿಸ್ಟರ ಸರದಾರರ ಪತ್ನಿಯವರು).

ಮುಸಲ್ಮಾನ ಸ್ಥಳಗಳು ೨:- ೧ ಆರ್. ಎಚ್. ಗೂಡವಾಲಾ ಲೀಗ ೨ ಎ. ಎ. ಕಿತ್ತೂರ ಲೀಗ ೩ ಅಬ್ದುಲ್ ಅಜೀಜ ಧಾಲಾಯಿತ ಕಾಂ.

ಉತ್ತರ ಕನ್ನಡ ಜಿಲ್ಲೆ

ಸಾಮಾನ್ಯ ಸ್ಥಳಗಳು ೩:— ೧. ಎಸ್. ಎಸ್. ಶಾಸ್ತ್ರಿ ಕಾಂ, ೨. ಎಸ್. ಪಿ. ಗಾಂವಕರ ಕಾಂ, ೩. ಆರ್. ಎಂ. ಪ್ರಭು ಕಾಂ, ೪. ಜಿ. ಎಸ್. ಹೆಗಡೆ ವಕೀಲ ಕುಮಟಾ ರ್‍ಯಾಡಿಕಲ ಡೆಮೊಕ್ರಾಟ.

ಮುಸಲ್ಮಾನರ ೧ ಸ್ಥಳ- ೧. ಜಿ. ಎಚ್. ಶಮಸುದ್ದೀನ ಮುಸ್ಲಿಂ ಲೀಗ, ೨. ಎ. ಎಂ ಹಾಶೀಮಜಿ ಸ್ವತಂತ್ರ, ೩. ಮುಹಮ್ಮದ ಅಕಬರ ಕಾಂಟ್ರಾಕ್ಟರ ಸ್ವತಂತ್ರ.

ವಿಜಾಪುರ ಜಿಲ್ಲೆ

ದಕ್ಷಿಣ ಭಾಗ ೨ ಸ್ಥಳಗಳು:- ೧. ಚನಬಸಪ್ಪ ...ಬ್ಬಲಿ ಕಾಂ. ೨. ಎಸ್. ಆರ್. ಕಂಠಿ ವಕೀಲ ... ಎಸ್. ಬಿ. ದೇಸಾಯಿ ಸುಳ್ಳ ಸ್ವತಂತ್ರ, ... ಎಸ್. ಪಾಟೀಲ ಸ್ವತಂತ್ರ.

ಉತ್ತರ ಭಾಗ ೨ ಸ್ಥಳಗಳು:- ೧. ಜಿ. ಎಸ್, ಸಜ್ಜನ ಕಾಂ. ೨. ಮಗನಲಾಲ ಶಹಾ ಕಾಂ. ೩. ಎಸ್. ಟಿ. ಪಾಟೀಲ ಶಿರೂರ ರ್‍ಯಾಡಿಕಲ ಡೆಮಾಕ್ರಾಟ, ೪. ರಘೂತ್ತಮಾಚಾರ್ಯ ಜಹಾಗೀರದಾರ ಸ್ವತಂತ್ರ.

ಹರಿಜನ ೧ ಸ್ಥಳ:- ೧. ಬಾಬು ಹುಜರೆ ಕಾಂ. ೨. ರೇವಪ್ಪ ಕಾಳೆ ಅಂಬೇಡಕರರ ಪಕ್ಷ, ೩. ಘಟಕಾಂಬಳೆ ಸ್ವತಂತ್ರ.

ಮುಸಲ್ಮಾನ ಸ್ಥಳ ೨— ೧. ಎಚ್. ಆಯ. ಹತ್ತಿವಾಲೆ ಲೀಗ, ೨. ಎ. ಎನ್. ಇಳಕಲ್ಲ ಲೀಗ, ೩. ಎನ್. ಎಂ. ಬಾಲಸಿಂಗ ಮಾಸ್ತರ ಕಮ್ಯುನಿಸ್ಟ ೪. ಪೀರಜಾದಾ ಹ.ಸೇನ ಪೀರದರ್ಗಾ ಸ್ವತಂತ್ರ, ೫. ಕೆ.ಎನ್. ಜಾನವೇಕರ ಸ್ವತಂತ್ರ, ೬. ಸಯ್ಯದ ಹಬೀಬುದ್ದೀನ ಬಕ್ಷಿ ಸ್ವತಂತ್ರ.

ಬೆಳಗಾವ ಜಿಲ್ಲೆ

ಉತ್ತರ ಭಾಗ ೩ ಸ್ಥಳಗಳು-- ೧. ಎ. ಬಿ. ಲಠ್ಠೆ ಕಾಂ. ೨. ರಾಘವೇಂದ್ರರಾವ ಕುಲಕರ್ಣಿ ಕಾಂ. ೩. ಎಂ.ಪಿ. ಪಾಟೀಲ ಕಾಂ. ೪. ಎಂ.ಎಚ್. ಪಾಟೀಲ ರ್‍ಯಾಡಿಕಲ ಡೆಮಾಕ್ರಾಟ, ೫. ಜಿ.ಜೆ. ಗಿಜವಾನೆ ಸ್ವತಂತ್ರ.

ದಕ್ಷಿಣ ಭಾಗ ೩ ಸ್ಥಳಗಳು-- ೧. ಎಸ್.ಎನ್. ಅಂಗಡಿ ಕಾಂ. ೨. ಸದಾಸಿವರಾವ ಕುಟ್ರೆ ಕಾಂ. ೩. ...ನಿಂಗಪ್ಪ ದಳವಾಯಿ ಕಾಂ. ೪. ಬಿ.ಬಿ. ಮಮದಾಪುರ ಸ್ವತಂತ್ರ.

ಮುಸಲ್ಮಾನ ೧ ಸ್ಥಳ-- ೧. ಅಬ್ದುಲ ರಜಾಕ ಬಾಬಾಸಾಹೇಬ ಹವಾಲದಾರ ರಾಷ್ಟ್ರೀಯ ಮುಸಲ್ಮಾನ, ೨. ಎ. ಎ. ಘೀವಾಲಾ ಲೀಗ, ೨. ಹಾಶಮಸಾಹೇಬ ಜಮಾದಾರ ೪. ಖಾದಿರಸಾಹೇಬ ಶೇಖ.

ಕೇಂದ್ರ ಶಾಸನ ಸಭೆ

ಮುಂದಿನ ವಸಂತದಲ್ಲಿ ಬ್ರಿಟಿಶರ ಅಧಿಕಾರತ್ಯಾಗ ?

ಸರಕಾರಕ್ಕೆ ಮತ್ತೆರಡು ಸೋಲು— ದಿಲ್ಲಿ ಲೀಗ್ ಪ್ರಮುಖರಿಗೆ ಕೈಬೇಡಿ ತೊಡಿಸಿದ್ದರ ಖಂಡನೆ— "ಅಝಾದ ಸೈನಿಕರ ವಿಚಾರಣೆಯ ಹಗರಣ ಇನ್ನು ಸಾಕು, ನಿಲ್ಲಿಸಿರಿ !"

ಕೇಂದ್ರ ಶಾಸನ ಸಭೆಯಲ್ಲಿ ಈ ವಾರ ಮತ್ತೂ ಎರಡು ನಿಲುವಳಿ ಸೂಚನೆಗಳು ಸ್ವೀಕೃತವಾದವು. ಈಗೀಗ ಸರಕಾರ ಈ ಸೋಲುಗಳನ್ನು ಮನಸ್ಸಿಗೆ ಹಚ್ಚಿಕೊಳ್ಳುವದನ್ನೇ ಬಿಟ್ಟುಬಿಟ್ಟಂತಿದೆ ಹೋರಾ ವಸೋಗನ್ನು ಕೂಡ ಹಾಕದೆ ಅದು ತಣ್ಣಗೆ ಸೋಲನ್ನು ಒಪ್ಪಿಕೊಂಡು ಕೂತು ಬಿಡುತ್ತಿದೆ.

ಅಝಾದ ಸೈನಿಕರ ವಿಚಾರಣೆ

ಈ ವಾರ ಶಾಸನ ಸಭೆ ಅಝಾದ ಹಿಂದ ಸೈನಿಕರ ವಿಚಾರಣೆಯನ್ನು ನಿಲ್ಲಿಸಿಬಿಟ್ಟು ಅವರನ್ನೆಲ್ಲ ಬಿಡುಗಡೆ ಮಾಡಬೇಕೆಂಬ ಪಂಡಿತ ಗೋವಿಂದ ಮಾಲವೀಯರ ಗೊತ್ತುವಳಿಯ ಚರ್ಚೆಯಿಂದ ಪ್ರಾರಂಭವಾಯಿತು. ಅದರ ಚರ್ಚೆ ಇನ್ನೂ ಮುಗಿಯದೆ ಮುಂದಿನ ಅಧಿಕಾರೇತರ ದಿನಕ್ಕೆ ಮುಂದುವರಿಸಲ್ಪಟ್ಟದ್ದರೂ ವಿರೋಧಿ ಪಕ್ಷ ಪ್ರಮುಖರೂ ಸರಕಾರದ ಕಡೆಯಿಂದ ಯುದ್ಧಕಾರ್ಯದರ್ಶಿ ಮತ್ತು ಗೃಹಮಂತ್ರಿಗಳೂ ಈಗಾಗಲೆ ಮಾತಾಡಿದ್ದಾರೆ. ತಮ್ಮ ದೀರ್ಘ, ಸಮಾಧಾನಯುಕ್ತ ಭಾಷಣದಲ್ಲಿ ಅಝಾದ ಸೈನಿಕರ ವಿಚಾರಣೆ ಮತ್ತು ದಂಡನೆಯಲ್ಲಿ ಸರಕಾರ ವಹಿಸಿದ ಧೋರಣವನ್ನು ಯುದ್ಧಕಾರ್ಯದರ್ಶಿ ಮೇಸನ್ನರು ವಿವರಿಸಿದರು. ಹಿಂದೀ ಸೇನೆಯನ್ನು ನಂಬಿಕೆಗೆ ಪಾತ್ರವಾಗುವಂತೆ ಮಾಡುವದು, "ಯಾವುದೇ ಸರಕಾರ" ಬರಲಿ, ಅದರ ಆಜ್ಞೆಯನ್ನು ಅದು ಪಾಲಿಸುವಂತೆ ಶಿಸ್ತನ್ನು ಕಾಯ್ದುಕೊಳ್ಳುವದು ಸರಕಾರದ ಉದ್ದೇಶ, ಎಂಬದಾಗಿ ಅವರು ತಿಳಿಹೇಳಿದರು. ಹಿಂದೀ ಸೇನೆಯಿಂದ ಆಝಾದ ಸೇನೆಗೆ ೨೦೦೦೦ ಜನರು ಸೇರಿದ್ದರೂ ಆಗಿನ ಪರಿಸ್ಥಿತಿಯನ್ನು ಲಕ್ಷಿಸಿ ಅವರಲ್ಲಿ ಕೆಲವರನ್ನೇ ವಿಚಾರಣೆಗೆ ಗುರಿಪಡಿಸಲಾಗುವದೆಂದು ಅವರು ಹೇಳಿದರು. ಕ್ಯಾ. ಅಬ್ದುಲ ರಶೀದರಿಗೆ ಕೊಡಲ್ಪಟ್ಟ ೭ ವರ್ಷದ ಶಿಕ್ಷೆಯ ಮಾತನ್ನು ಎತ್ತಿ ಮೇಸನ್ನರು, ಅಬ್ದುಲ ರಶೀದರ ಮೇಲೆ ಅವರ ಕೈಕೆಳಗಿದ್ದ ಯುದ್ಧ ಕೈದಿ ಶಿಬಿರದಲ್ಲಿ ಹೀನವಾದ ಪಾಶವ ಹಿಂಸೆಗಳನ್ನು ನಡೆಸಿದ ಆರೋಪ ಸಿದ್ಧವಾದುದರಿಂದ ಅವರನ್ನು ಕ್ಷಮಿಸಲಾಗಿಲ್ಲವೆಂದು ವಿವರಿಸಿದರು.

ವಿರೋಧಿ ಸದಸ್ಯರು ಸರಕಾರದ ನೆವಗಳನ್ನು ಹರಿದು ಚೂರುಚೂರು ಮಾಡಿದರು. ಅಸಫ ಅಲ್ಲಿಯವರು ಯುದ್ಧ ಕಾರ್ಯದರ್ಶಿಗಳ ಸೌಹಾರ್ದಾಪೇಕ್ಷಿ ಭಾಷಣವನ್ನು ವ್ಯಂಗ್ಯವಾಗಿ ಸ್ವಾಗತಿಸಿ ಹಿಂದೀ ಸೈನ್ಯದಲ್ಲಿರುವ ದೋಷವೆಂದರೆ ಅದನ್ನು ಸರಕಾರ ದೇಶಭಕ್ತ ಸೈನ್ಯವಾಗಿ ಬೆಳೆಸದಿದ್ದುದು ಎಂದು ಹೇಳಿದರು. ಕರ್ನಲ್ ಹಂಟರು ಸಿಂಗಾಪುರದಲ್ಲಿ ಹಿಂದೀ ಸೈನಿಕರನ್ನು ಕುರಿಗಳಂತೆ ಜಪಾನರ ವಶಕ್ಕೊಪ್ಪಿಸಿದ್ದನ್ನು ಅವರು ನೆನಪು ಮಾಡಿಕೊಟ್ಟು ಮಲಯಾದ ಪರಾಭವಕ್ಕೆ ಕಾರಣರಾದ ಜನರಲ್ ಪರ್ಸಿವಲ್ಲರನ್ನೇ ವಿಚಾರಣೆಗೆ ಗುರಿಪಡಿಸಬೇಕಾಗಿತ್ತು ಹೊರತು, ಈ ಸೈನಿಕರನ್ನಲ್ಲವೆಂದರು. " ಆ ಮಹನೀಯರ ಮೋರೆಯನ್ನು ನ್ಯಾಯಸ್ಥಾನದಲ್ಲಿ ನೋಡುವ ಅಪೇಕ್ಷೆ ನನಗೆ ಬಹಳ ಇತ್ತು, ಆದರೆ ಸರಕಾರ ಅವರನ್ನು ತರಲೊಪ್ಪಲಿಲ್ಲ." ಎಂದು ಆಸಫ ಅಲ್ಲಿ ಹೇಳಿದರು.

ನಾಮುಕರಣ ಸದಸ್ಯ ಲೆ. ಕ. ಚಟರ್ಜಿಯವರು ವಂಗಭಂಗದ ಕಾಲದಿಂದೀಚೆಗೆ ಎಂದೂ ಇಂಥ ಪ್ರಚಂಡ ಜನಕ್ಷೋಭೆ ಹಿಂದುಸ್ತಾನದಲ್ಲಿ ವ್ಯಕ್ತವಾದುದಿಲ್ಲವೆಂದೂ ಈ ವಿಚಾರಣೆಗಳನ್ನು ಪೂರ್ಣವಾಗಿ ನಿಲ್ಲಿಸಿಬಿಡುವದೇ ಸದುಪಾಯವೆಂದೂ ಸೂಚಿಸಿದರು.

ಜಿನ್ನಾಸಾಹೇಬರ ಭಾಷಣ ಎಲ್ಲರಿಗಿಂತ ಉಗ್ರವಾಗಿತ್ತು. ಈ ವಿಚಾರಣೆಯನ್ನು ಪ್ರಾರಂಭಿಸಿದ್ದೇ ಮೂರ್ಖತನವೆಂದು ಅವರು ಉಸುರಿದರು ವಿಚಾರಣೆಮಾಡಿ ತಪ್ಪಿತಸ್ಥರೆಂದು ಸಿದ್ಧರಾದ ಮೂವರನ್ನು ಸರಕಾರ ಕ್ಷಮಿಸಿತು: ಏಕೆಂದರೆ ಆಗ ಜನಕ್ಷೋಭೆ ಬಹಳವಾಗಿತ್ತು. ಈಗ ಆ ಕ್ಷೋಭೆ ತಣ್ಣಗಾಗಿದ್ದು ನೋಡಿ ಸರಕಾರ ರಶೀದರಿಗೆ ಶಿಕ್ಷೆ ವಿಧಿಸಿತೆಂದು ಅವರು ಹೇಳಿ, ರಶೀದರ ಶಿಕ್ಷೆ ಅನ್ಯಾಯದ್ದೆಂದು ಸಾಧಿಸಿದರು. ಕೊನೆಗಾಲಕ್ಕಾದರೂ ಸರಕಾರ "ಸುಸಂಸ್ಕೃತ ಸರಕಾರ"ದಂತೆ ವರ್ತಿಸಿ ಆಝಾದ ಸೈನಿಕರನ್ನೆಲ್ಲ ಬಿಡುಗಡೆ ಮಾಡಬೇಕೆಂದು ಅವರು ಸೂಚಿಸಿದರು.

ಮಲಯಾದ ಅಝಾದ ಅಧಿಕಾರಿಗಳು

ಮಲಯಾದಲ್ಲಿ ಈ ಯುದ್ಧ ಕಾಲದಲ್ಲಿ ಮಾಡಿದ ರಾಜದ್ರೋಹದ "ಗಂಭೀರ ಆರೋಪ" ಗಳಿಗೆ ಗುರಿಯಾದ ಮಲಯಾ ಹಿಂದೀಯರಿಗೆ ಕಾಯಿದೆ ರಕ್ಷಣೆ ಕೊಡಲು ಹಿಂದುಸ್ತಾನ ಸರಕಾರ ವ್ಯವಸ್ಥೆ ಮಾಡುವದೆಂದು ಪ್ರೊ. ರಂಗಾರ ಪ್ರಶ್ನೆಗೆ ಉತ್ತರ ಬಂತು. ಈ ಆರೋಪಿಗಳಿಗೆ ದಯದೋರಿ ಕ್ಷಮಿಸಿಬಿಡುವ ಅಧಿಕಾರ ಆಗ್ನೇಯ ಏಶಿಯಾ ಸೇನಾಪತಿಗಳಿಗಿದೆಯೆಂದೂ ತಿಳಿಸಲಾಯಿತು.

ಜಪಾನದಲ್ಲಿ ಆರ್ಯ ಸೇನೆಯನ್ನು ಕಟ್ಟಿದ ರಾಜಾ ಮಹೇಂದ್ರ ಪ್ರತಾಪರನ್ನು ಬಂಧಿಸಲು ಜನರಲ್ ಮೆಕಾರ್ಥರರು ಆಜ್ಞಾಪಿಸಿದ್ದು ಮತ್ತು ನಂತರ ಅವರ ಬಿಡುಗಡೆಯಾದುದು ಅಧಿಕೃತವಾಗಿ ತಮಗೆ ತಿಳಿದಿಲ್ಲವೆಂದೂ ಪತ್ರಿಕಾ ವರದಿಗಳಿಂದಲೇ ತಮಗೆ ಅದು ತಿಳಿಯಿತೆಂದೂ ಸರಕಾರದ ಪರವಾಗಿ ಹೇಳಲಾಯಿತು. ರಾಜಾ ಮಹೇಂದ್ರರು ಹಿಂದೀ ನಾಗರಿಕತ್ವವನ್ನು ಬಿಟ್ಟು ಕೊಟ್ಟಿರುವದರಿಂದ ಹಿಂದೀ ಸರಕಾರ ಅವರ ವಿಷಯ ವಿಚಾರಿಸುವದಿಲ್ಲೆಂಬ ಭಾವ ಸರಕಾರದ್ದಾಗಿತ್ತು.

ಸರಕಾರದ ಅಸಡ್ಡೆ

ಕಾಂಗ್ರೆಸ್ ಪಕ್ಷದ ಉಪಧುರೀಣ ಆಸಫ ಅಲ್ಲಿಯವರು ಮಂಗಳವಾರ ಇಂಡೋನೇಶಿಯಾದ ಸಂಬಂಧದಲ್ಲಿ ನಿಲುವಳಿ ಸೂಚನೆ ಮಂಡಿಸಿದಾಗ ಅದನ್ನು ವಿರೋಧಿ ಪಕ್ಷದವರೆಲ್ಲ ಏಕಕಂಠದಿಂದ ಬೆಂಬಲಿಸಿದರು. ಅದು ಮತಗಣನೆ ಕೂಡ ಇಲ್ಲದೆ ಸ್ವೀಕೃತವಾಯಿತು. ಇಂಡೋನೇಶಿಯಾದ ರಾಷ್ಟ್ರೀಯರ ವಿರುದ್ಧ ಆಂಗ್ಲೊ-ಡಚ್ಚರು ನಡೆಸಿದ ಕೃತ್ಯಗಳನ್ನು ಕುರಿತು ಈ ಹಿಂದೆ ಈ ಶಾಸನ ಸಭೆ ಒಂದು ಗೊತ್ತುವಳಿ ಮಾಡಿದ್ದರೂ ಅದನ್ನು ಯುಕ್ತ ರಾಷ್ಟ್ರ ಭದ್ರತಾ ಮಂಡಲಕ್ಕೆ ತಿಳಿಸಲು ಸರಕಾರ ಅಲಕ್ಷಿಸಿದ್ದನ್ನು ಖಂಡಿಸಲು ಈ ನಿಲುವಳಿ ಮಂಡಿಸಲ್ಪಟ್ಟಿತ್ತು. ಹಿಂದುಸ್ತಾನದ ಪ್ರತಿನಿಧಿಗಳೆಂದು ಹೇಳಿಕೊಂಡು ಯುಕ್ತ ರಾಷ್ಟ್ರ ಸಂಘಗಳಲ್ಲಿರುವ ಹಿಂದೀ ಸರಕಾರದ ಪ್ರತಿನಿಧಿಗಳು, ಭದ್ರತಾ ಮಂಡಲದ ಮುಂದೆ ಇಂಡೋನೇಶಿಯಾದ ಪ್ರಶ್ನೆ ಬಂದಾಗ ಹಿಂದೀ ಶಾಸನ ಸಭೆಯ ಅಭಿಪ್ರಾಯವನ್ನು ತಿಳಿಸುವದು ಅವರ ಕರ್ತವ್ಯವಾಗಿತ್ತು. ಅದರ ಬದಲಿಗೆ ಅವರು ತಮ್ಮ ಒಡೆಯನ ಆಜ್ಞೆಯಂತೆ ಸುಮ್ಮನಿದ್ದಾರೆಂದು ಅಸಫ ಅಲ್ಲಿಯವರು ಹೇಳಿದರು. ಸರ್ ಹಸನ್ ಸುಹ್ರವರ್ದಿ, ಲಿಯಾಕತ ಅಲ್ಲಿ ಮೊದಲಾದ ಲೀಗ ಸದಸ್ಯರೂ ಕೆ. ಸಿ. ನಿಯೋಗಿ, ಡಾ. ದೇಶಮುಖ ಮೊದಲಾದ ಕಾಂಗ್ರೆಸ್ಸಿಗರೂ ಸರಕಾರದ ಈ ಧೋರಣವನ್ನು ಖಂಡಿಸಿದರು. ವಿದೇಶ ಕಾರ್ಯದರ್ಶಿ ವೇಟಮನ್ನರೂ ಸರ್ ಎಡ್ವರ್ಡ ಬೆಂಥಾಲರೂ ಭದ್ರತಾ ಮಂಡಲದಲ್ಲಿ ಹಿಂದುಸ್ತಾನಕ್ಕೆ ಸ್ಥಾನವಿದ್ದಿಲ್ಲವಾದ್ದರಿಂದ ಈ ವಿಷಯ ಬಂದಾಗ ಹಿಂದೀ ಶಿಷ್ಟಮಂಡಲದವರು ಶಾಸನ ಸಭೆಯ ಅಭಿಪ್ರಾಯವನ್ನು ತಿಳಿಸಲಾಗಲಿಲ್ಲವೆಂದೂ ಭಾರತ ಮಂತ್ರಿಗಳಿಗೆ ಈ ವಿಷಯ ತಿಳಿಸಲಾಗಿತ್ತೆಂದೂ ನೆವ ಹೇಳಿದರು.

ಬೇಡಿ ಹಾಕಿದ ಪ್ರಸಂಗ

ಬುಧವಾರ ದಿನ ಲೀಗ್ ಪಕ್ಷದ ಸರ್ ಸೌಮನ್‌ರು ಇನ್ನೊಂದು ನಿಲುವಳಿ ಸೂಚನೆ ಮಂಡಿಸಿದರು. ಅಬ್ದುಲ ರಶೀದರಿಗೆ ಏಳು ವರ್ಷ ಶಿಕ್ಷೆ ವಿಧಿಸಿದ್ದರ ನಿಷೇಧಾರ್ಥವಾಗಿ ದಿಲ್ಲಿಯ ಮುಸ್ಲಿಂ ಲೀಗ ನೇತೃತ್ವದಲ್ಲಿ ಸಭೆ ಮೆರವಣಿಗೆ ನಡೆಸಿದ ಸಂಬಂಧದಲ್ಲಿ ೩೧ ಜನ ಮುಸ್ಲಿಮರನ್ನು ಬಂಧಿಸಿ ಬೇಡಿ ಹಾಕಿ ಬೀದಿಗಳಲ್ಲಿ ಕೊಂಡೊಯ್ದುದ್ದರ ಚರ್ಚೆಗಾಗಿ ನಿಲುವಳಿ ಮಂಡಿಸಲ್ಪಟ್ಟಿತ್ತು. ಸಭೆ ಮೆರವಣಿಗೆಗಳು ಶಾಂತ ರೀತಿಯಿಂದ ಜರಗಿದ್ದರೂ ಮರುದಿನ ಲೀಗ ಕಾರ್ಯಕರ್ತರಾದ ಗೌರವಾರ್ಹ ಜನರನ್ನು ಈ ಸಂಬಂಧವಾಗಿ ಬಂಧಿಸಿದ್ದಲ್ಲದೆ ಅವರನ್ನು ಬೇಡಿ ಹಾಕಿ ಬೀದಿಗಳಲ್ಲಿ ಬಹಿರಂಗವಾಗಿ ಪ್ರದರ್ಶನ ಮಾಡುತ್ತ ಒಯ್ದುದು ಬೇಕೆಂದೇ ಜನರನ್ನು ಪ್ರಕ್ಷೋಭಗೊಳಿಸಿ ಗೋಳಿಬಾರುಮಾಡುವ ಪ್ರಸಂಗವನ್ನು ತಂದುಕೊಂಡು ಜನರ ವಿರೋಧ ಶಕ್ತಿಯನ್ನು ಹತ್ತಿಕ್ಕಬೇಕೆಂದು ಪೋಲೀಸರು ಹೂಡಿದ ತಂತ್ರವೆಂದು ಹಲವು ಸದಸ್ಯರು ಆರೋಪಿಸಿದರು. ಗೌರವಾರ್ಹ ಜನರಿಗೆ ಬೇಡಿ ತೊಡಿಸಿದ್ದನ್ನು ಖಂಡಿಸುವಲ್ಲಿ ಕಾಂಗ್ರೆಸ್ಸಿಗರೂ ದನಿಗೂಡಿಸಿದರು. ಸರಕಾರದ ಪರವಾಗಿ ಗೃಹಮಂತ್ರಿ ಥಾರ್ನರು ಪೋಲೀಸರ ಮೇಲೆ ಸಭಿಕರು ಮಾಡಿದ ಆರೋಪಕ್ಕೆ ಸಾತ್ವಿಕ ನಿಷೇಧ ವ್ಯಕ್ತ ಮಾಡಿದರು. ಸೆರೆ ಹಿಡಿದವರು ಗಡಿಬಿಡಿ ಮಾಡಲೆಳಸಿದ್ದರಿಂದ ಬೇಡಿ ತೊಡಿಸಲಾಯಿತೆಂದು- ಅವರ ಹೇಳಿಕೆಯಾಗಿತ್ತು. ಆದರೆ ನಿಲುವಳಿ ಸೂಚನೆಗೆ ಅಂಗೀಕಾರ ದೊರೆಯಿತು.

ಪ್ರಶ್ನೋತ್ತರ

ಯುದ್ಧ ಕಾಲದಲ್ಲಿ ಹಿಂದುಸ್ತಾನದಲ್ಲಿ ೨೪೬೦೦೦ ಬ್ರಿಟಿಶ ೧೭೦೦೦೦ ಅಮೇರಿಕನ್, ೫೪೩೯೩ ಇತರ ಮಿತ್ರ ಸೇನೆ ಇತ್ತು. ಈಗ ಎಷ್ಟಿದೆಯೆಂದು ತಿಳಿಸುವದು ಸಾರ್ವಜನಿಕ ಹಿತದೃಷ್ಟಿಯಿಂದ ಸಾಧ್ಯವಿಲ್ಲ. ನೌಕಾ ಸೌಕರ್ಯ ದೊರೆತೊಡನೆ ಬ್ರಿಟಿಶ ಮತ್ತು ಆಫ್ರಿಕನ್ ಸೈನ್ಯಗಳನ್ನು ಕಳಿಸಲಾಗುವದು. ಅಮೇರಿಕನ್ ಸೈನ್ಯ ಮಾರ್ಚ ಅಂತ್ಯದೊಳಗಾಗಿ ಹೊರಟು ಹೋಗುವದು. ಸೈನ್ಯ ವಿಸರ್ಜನೆಯ ಸಂಬಂಧದಲ್ಲಿ, ಎಪ್ರಿಲ ೧, ೧೯೪೭ ರಷ್ಟು ಹೊತ್ತಿಗೆ, ಸೈನ್ಯದಲ್ಲಿರುವ ಹೆಚ್ಚಿನ ಜನರನ್ನು ವಿಸರ್ಜಿಸಲಾಗುವದು. ೩೨೦೦೦ ಬ್ರಿಟಿಶ ಅಧಿಕಾರಿಗಳನ್ನು ೭೦೦೦ ಹಿಂದೀ ಅಧಿಕಾರಿಗಳನ್ನು, ೧೮೦೦೦೦ ಬ್ರಿಟಿಶ ಮತ್ತು ೧೫೪೦೦೦೦ ಹಿಂದೀ ಸೈನಿಕರನ್ನು ಕಡಿಮೆ ಮಾಡಲಾಗುವದು. ಇತ್ಯಾದಿಯಾಗಿ ತಿಳಿಸಲಾಯಿತು.

* * *

ಸುಭಾಸಚಂದ್ರ ಬೋಸರ ಮರಣವಾರ್ತೆಯನ್ನು ದೃಢಪಡಿಸಿಕೊಳ್ಳುವ ಸಲುವಾಗಿ ಜಪಾನದ ಆಡಳಿತಾಧಿಕಾರಿ ಜ. ಡೊಗ್ಲಾಸ್ ಮ್ಯಕಾರ್ಥರರೊಡನೆ ಸಂಪರ್ಕ ಬೆಳೆಸಲಾಗಿದೆಯೆಂದು ಸರದಾರ ಮಂಗಲಸಿಂಗರಿಗೆ ತಿಳಿಸಲಾಯಿತು.

* * *

ಕೇಂದ್ರ ಶಾಸನ ಸಭೆಯ ಅಧ್ಯಕ್ಷರ ಆಯ್ಕೆಯ ಕಾಲದಲ್ಲಿ ಸರ್ ಎಡ್ವರ್ಡ ಬೆಂಥಾಲರು ವಹಿಸಿದ್ದ ಪಾತ್ರವನ್ನು ಕುರಿತು ಪತ್ರಿಕೆಗಳಲ್ಲಿ ಪ್ರಕಟವಾದ ವರದಿಗಳೆಲ್ಲ ಸುಳ್ಳೆಂದು ಶ್ರೀ ಸಕ್ಸೇನಾರಿಗೆ ಕೊಟ್ಟ ಉತ್ತರದಲ್ಲಿ ತಿಳಿಸಲಾಯಿತು.

* * *

ಬರಗಾಲಕ್ಕೀಡಾದ ಅನಂತಪುರ, ಕಡಪಾ, ಕರ್ನೂಲ ಜಿಲ್ಲೆಗಳಿಗೆ ಸದ್ಯ ಪರಿಹಾರ ನೀಡಲು ಮದ್ರಾಸ ಸರಕಾರ ೩೦೦೦೦ ಟನ್ ಅಕ್ಕಿ ಬೇಡಿದೆಯೆಂದೂ ಆ ಬಗ್ಗೆ ವ್ಯವಸ್ಥೆ ಮಾಡಿದೆಯೆಂದೂ ತಿಳಿಸಲಾಯಿತು. ಚಿತ್ತೂರು ದಕ್ಷಿಣ ಕನ್ನಡ ಜಿಲ್ಲೆಗಳಲ್ಲಿ ಬೆಳೆ ೧೦೦ ಕ್ಕೆ ೧೦ ರಿಂದ ೫೦ ರಷ್ಟು ಹೊರಡಬಹುದೆಂದು ಅಂದಾಜು ಮಾಡಲಾಗಿದೆ.

* * *

ಕೇಂದ್ರದಲ್ಲಿ ಹೊಸ ಸರಕಾರವನ್ನು ಸ್ಥಾಪಿಸಿ ಮುಂದಿನ ಬೇಸಿಗೆಯಲ್ಲಿ ಅಧಿಕಾರವನ್ನು ಬಿಟ್ಟುಕೊಡಲಾಗುವದೆಂದು ಕೇಂದ್ರ ಶಾಸನ ಸಭೆಯಲ್ಲಿ ಕೇಳಿದ ಪ್ರಶ್ನೆಗೆ ಯುದ್ಧ ಖಾತೆಯ ಕಾರ್ಯದರ್ಶಿ ಫಿಲಿಪ್ ಮೇಸನ್‌ರವರು ಸೂಚಿಸಿದರು.

ಹಿಂದುಸ್ತಾನದಲ್ಲಿ ಹೊಸ ಸರಕಾರ ಯಾವಾಗ ರಚಿಸಲ್ಪಡುವದು ಎಂದು ಕೇಳಲು "ಮುಂದಿನ ಬೇಸಿಗೆಯಲ್ಲಿ ಅಧಿಕಾರ ದಾನ ಮಾಡಲಾಗುವದೆಂದು ನನ್ನ ತಿಳುವಳಿಕೆಯಾಗಿದೆ" ಎಂದವರು ಉತ್ತರವಿತ್ತರು.

ಸಂಸ್ಥಾನದಲ್ಲಿ ವಾಯಿಸರಾಯರು

ವಾಯಿಸರಾಯ ಲಾರ್ಡ ವೇವೆಲ್ಲರು ಕಳೆದವಾರ ಬೆಂಗಳೂರಿಗೆ "ಹಾರಾಟದ ಭೆಟ್ಟಿ" ಕೊಟ್ಟು ಮುಂದೆ ಮದ್ರಾಸ ಪ್ರಾಂತದ ಸಂತ್ರಸ್ತ ಭಾಗಗಳನ್ನು ಸಂಚರಿಸಿದವರು ಪುನಃ ಬೆಂಗಳೂರಿಗೆ ಬಂದರು. ಅಲ್ಲಿಂದ ಅವರು ವಿಮಾನದಿಂದಲೂ ಮೋಟಾರಿನಿಂದಲೂ ಸಂಸ್ಥಾನದ ಬರಗಾಲ ಪ್ರದೇಶಗಳನ್ನು ಸಂಚರಿಸಿದರು. ಮಧುಗಿರಿಯಲ್ಲಿ ಅವರಿಗೆ ಆಹಾರ ಪರಿಸ್ಥಿತಿ ಕೆಟ್ಟು ಜನರು ಕಾಡಿನಲ್ಲಿ ಸಿಕ್ಕಿದ್ದನ್ನು ತಿನ್ನುತ್ತಿರುವದನ್ನು ತೋರಿಸಿದ್ದಲ್ಲದೆ ಕುಡಿಯುವ ನೀರು ಕೂಡ ಸೀವಾದಿಂದ ಪೂರೈಸಲ್ಪಡುತಿರುವ ಪಾಡನ್ನು ಅವರ ಮುಂದೆ ತೋರಿಸಿಕೊಂಡದ್ದಾಯಿತು. ಸಿರಾಕ್ಕೆ ಹೋದಾಗ ಅವರೊಡನೆ ಶ್ರೀಮನ್ಮಹಾರಾಜರೂ ಇದ್ದರು. ಅಲ್ಲಿ ಹಳ್ಳಿಗರು ಅವರನ್ನು ಸುತ್ತುಗಟ್ಟಿದರು ಹೇಳಿದರು: ನಮಗೆ ದಿನಕ್ಕೆ ೪॥ ಔಂಸ ಬಟಾಟೆ, ಶೇಂಗಾ ಮತ್ತು ರಾಗಿ ಕೊಡಲಾಗುತ್ತಿದೆ. ಅದು ಸಾಲುವದಿಲ್ಲ. ನಮಗೆ ರೂಢಿಬಿದ್ದಿರುವ ರಾಗಿ ಸಾಕಷ್ಟು ಸಿಗದಿದ್ದರೆ ರೋಗಕ್ಕೆ ಬಲಿಬಿದ್ದೇವು, ಎಂದು.

ಬರಗಾಲ ಪರಿಸ್ಥಿತಿಗೆ ಆಹಾರ ಕೊರತೆಯೇ ಕಾರಣ ಹೊರತು ಹಂಚುವಿಕೆಯ ಅವ್ಯವಸ್ಥೆ ಕಾರಣವಲ್ಲೆಂದು ಕೇಂದ್ರ ಆಹಾರ ಕಾರ್ಯದರ್ಶಿ ಸೇನರಿಗೆ ಮೈಸೂರ ಅಧಿಕಾರಿಗಳು ತಿಳಿಸಿದರು.

ಒಂದು ಆಹಾರ ಪರಿಷತ್ತೂ ಕೂಡಿಸಲ್ಪಟ್ಟಿತ್ತು ಅದರಲ್ಲಿ ಕೇಂದ್ರ, ಮೈಸೂರು, ಮದ್ರಾಸ, ಮುಂಬಯಿ ಪ್ರಾಂತಿಕ ಅಧಿಕಾರಿಗಳು ಭಾಗವಹಿಸಿ ಆಯಾ ಪ್ರಾಂತದ ಪರಿಸ್ಥಿತಿಗಳನ್ನು ವಿವರಿಸಿದರು. ಕರ್ನಲ್ ಜೋಝುಮನ್ನರು (ಹಿಂದುಸ್ತಾನ ಸರಕಾರದ ಆರೋಗ್ಯ ಕಮೀಶನರ) ಆಹಾರ ಕೊರತೆಯಿಂದ ಸಾರ್ವಜನಿಕ ಆರೋಗ್ಯದ ಮೇಲಾಗುವ ಪರಿಣಾಮಗಳನ್ನು ಎದುರಿಸಲು ಕೈಕೊಳ್ಳಲಾದ ಉಪಾಯಗಳನ್ನು ವಿವರಿಸಿದರು.

ಪತ್ರಿಕೋದ್ಯೋಗಿ ಸಮ್ಮೇಲನ

ಮೈಸೂರು ಸಂಸ್ಥಾನದ ಪತ್ರಿಕೋದ್ಯೋಗಿಗಳ ೪ ನೆ ಸಮ್ಮೇಲನ ಹಾಸನದಲ್ಲಿ ಇದೇ ತಾ. ೯-೧೦ ಕ್ಕೆ ನಡೆಯಿತು. ಸಮ್ಮೇಲನದ ಅಧ್ಯಕ್ಷರು "ಅಲ್--ಕಲಂ" ಉರ್ದೂ ಪತ್ರಿಕೆಯ ಸಂಪಾದಕರಾಗಿದ್ದ ಕಲೀಂ ಉಲ್-ಮುಲ್ಕ ಸೈಯ್ಯದ ಗೌಸ ಮೋಹಿಯುದ್ದೀನರು. ಸಮ್ಮೇಲನವನ್ನು ಉದ್ಘಾಟನ ಮಾಡಿದವರು ಮದ್ರಾಸ ಹಿಂದೂ ಪತ್ರಿಕೆಯ ಉಪಸಂಪಾದಕರಾದ ವಿಶ್ವನಾಥ ಅಯ್ಯರರು. ಸಮ್ಮೇಲನ ೧೭ ದೀರ್ಘ ಗೊತ್ತುವಳಿಗಳನ್ನು ಮಾಡಿತು.

ಅಧ್ಯಕ್ಷ ಮೋಹಿಯುದ್ದೀನರು ಪತ್ರಿಕಾ ವ್ಯವಸಾಯಿಯ, ಲೇಖನಿಯ ಅದಮ್ಯ ಶಕ್ತಿಯನ್ನು ಕುರಿತು, ಪತ್ರಿಕೆಗಳ ಆದರ್ಶದ ಬಗ್ಗೆ ದೀರ್ಘವಾಗಿ ಉಪನ್ಯಾಸ ಮಾಡಿದರು. ಆದರೆ ಪತ್ರಿಕಾ ವ್ಯವಸಾಯಿಗಳ ತಲೆಯ ಮೇಲೆ ತೂಗುತ್ತಿರುವ "ಮುದ್ರಣ ಕಾಯಿದೆ" "ಸಂರಕ್ಷಣ ಕಾಯಿದೆ" ಕೋರ್ಟು ಅವಮಾನದ ಕಾಯಿದೆಗಳ ಘೋರ ಖಡ್ಗಗಳು ಹೇಗೆ ಹದಿನಾರಾಣೆ ಸತ್ಯವಾದಿಯನ್ನೂ ಉಚ್ಚಾಧಿಕಾರಿಗಳ ರೋಷಕ್ಕೆ ಬಲಿಕೊಡುತ್ತವೆಯೆಂಬುದನ್ನೂ ಅವರು ಉಲ್ಲೇಖಿಸದಿರಲಿಲ್ಲ ಪತ್ರಿಕೋದ್ಯೋಗಿಗಳು ಟ್ರೇಡ ಯೂನಿಯನ್ ಮಾಡಿಕೊಂಡು, ಪಿಂಚಣಿ, ಗ್ರ್ಯಾಚ್ಯುಯಿಟಿ, ವಿಮೆ ಮೊದಲಾದ ಸಾಮಾಜಿಕ ಭದ್ರತೆಯ ಸೌಕರ್ಯಗಳನ್ನು ಪತ್ರಿಕೆಗಳ ಒಡೆಯರಿಂದ ದೊರಕಿಸಿಕೊಳ್ಳುವದೇ ಪತ್ರಿಕೋದ್ಯೋಗಿಗಳ ದಾರುಣ ಪರಿಸ್ಥಿತಿಯನ್ನು ಸುಧಾರಿಸುವ ಮಾರ್ಗವೆಂದೂ ಅವರು ಸೂಚಿಸದಿರಲಿಲ್ಲ.

ವಿಶ್ವನಾಥ ಅಯ್ಯರರು ಉದ್ಘಾಟನ ಭಾಷಣದಲ್ಲಿ ಪತ್ರಿಕೋದ್ಯೋಗಿಗಳಲ್ಲಿ ಈಗ ಕಂಡು ಬರುವ ಅಸಾಮರ್ಥ್ಯವೇ ಮೊದಲಾದ ದೋಷಗಳಿಗೆ ಅವರಿಗಿರುವ ಸೌಕರ್ಯಗಳ ಅಭಾವವೇ ಕಾರಣವೆಂದೂ ಅದು ಅವರ ದೋಷವಲ್ಲವೆಂದೂ ಸಾರಿದರು. ಪತ್ರಿಕೋದ್ಯೋಗಿಗಳಿಗೊಂದು ಹಕ್ಕುಗಳ ತಾಮ್ರಪಟ ಸಿದ್ಧವಾಗಿ ಅಂಗೀಕೃತವಾಗಬೇಕೆಂದು ಅವರ ಅಭಿಪ್ರಾಯವಾಗಿತ್ತು. ಅಂಥ ತಾಮ್ರಪಟ ಬರಲಿ ಬಾರದಿರಲಿ, ಪತ್ರಿಕೋದ್ಯೋಗಿ ತನ್ನ ಉದಾತ್ತ ಕರ್ತವ್ಯವನ್ನು ಸಾಗಿಸಿಕೊಂಡು ಹೋಗಬೇಕೆಂದು ಅವರು ಉಪದೇಶಿಸಿದರು.

ಗೊತ್ತುವಳಿಗಳಲ್ಲಿ ಪ್ರಮುಖವಾಗಿರುವವೆಂದರೆ ಸಂಸ್ಥಾನದಲ್ಲಿ ಪತ್ರಿಕೆಗಳ ಮೇಲಿರುವ ಮುದ್ರಣ ಕಾಯಿದೆಯೇ ಮೊದಲಾದ ನಿರ್ಬಂಧಗಳನ್ನು ದೂರೀಕರಿಸಬೇಕು, ಮೈಸೂರು ಸಂಸ್ಥಾನ ಪತ್ರಿಕಾ ಸಲಹೆ ಸಮಿತಿಯನ್ನು ವಿಸರ್ಜಿಸಿ ಪತ್ರಿಕೋದ್ಯೋಗಿ ಸಮ್ಮೇಲನದ ಸ್ಥಾಯೀ ಸಮಿತಿಯನ್ನೇ ಅದರ ಸ್ಥಾನದಲ್ಲಿ ಪುರಸ್ಕರಿಸಬೇಕು, ಪ್ರಜಾಮತ, ಜನವಾಣಿ, ವಿಶ್ವಕರ್ನಾಟಕ, ಮೈಸೂರು ಪತ್ರಿಕೆಗಳಿಂದ ಪಡೆದಿರುವ ಠೇವು ಹಣವನ್ನು ಅನಿರ್ಬಂಧವಾಗಿ ತಿರುಗಿ ಕೊಡಬೇಕು ಎಂಬವು.

ಬೆಂಗಳೂರು—ಮೈಸೂರು

ಬೆಂಗಳೂರಲ್ಲಿ ನಡೆದ ಟಪಾಲ ಖಾತೆಯ ನೌಕರರ ವಿಶೇಷ ಸಭೆಯೊಂದರಲ್ಲಿ ಸರಕಾರದವರು ಈಗಿನಂತೆ ಟಪಾಲ ನೌಕರರ ಮೂಲಭೂತ ಬೇಡಿಕೆಗಳನ್ನು ಅಲಕ್ಷಿಸಿದರೆ ಅಥವಾ ಯುದ್ಧಕಾಲದಲ್ಲಿ ಅವಶ್ಯ ಸೇವೆ ಅರ್ಪಿಸಿದ ನೌಕರರನ್ನು ಕೆಲಸದಿಂದ ತಳ್ಳಿಹಾಕಿದರೆ ಸಂಪುಹೂಡಲು ಸಿದ್ಧರಾಗಿದ್ದೇವೆಂದು ಒಂದು ಗೊತ್ತುವಳಿ ಮಾಡಿದ್ದಾರೆ.

ಮೈಸೂರು ಸರಕಾರದ ಕಾಯಿದೆ ಕಾರ್ಯದರ್ಶಿ ಮತ್ತು ಮುಖ್ಯ ಪತ್ರಿಕಾ ಸಲಹೆಗಾರ ಶ್ರೀ ಆರ್. ವೆಂಕಟರಾಮಯ್ಯನವರನ್ನು ಮೈಸೂರು ಹಾಯಕೋರ್ಟಿನ ನ್ಯಾಯಾಧೀಶ ಪದವಿಗೇರಿಸಲಾಗಿದೆ.

ಮೈಸೂರು ಕಾಂಗ್ರೆಸ್ಸಿನವರು ಸಂಸ್ಥಾನದ ಕ್ಷಾಮಪೀಡಿತ ಹಳ್ಳಿಗಳಲ್ಲಿ ಸದ್ಯವೇ ೫ ಪರಿಹಾರ ಕೇಂದ್ರಗಳನ್ನು ಸ್ಥಾಪಿಸಲು ನಿರ್ಧರಿಸಿದ್ದಾರೆ.

ಇದೇ ತಾ. ೬ ಕ್ಕೆ ಬೆಂಗಳೂರಲ್ಲಿ ಆರಂಭವಾದ ಅ. ಭಾ. ಒಲಿಂಪಿಕ ಕ್ರೀಡಾ ಸ್ಪರ್ಧೆಗಳು ತಾ. ೮ ರ ವರೆಗೆ ನಡೆದು ಮಹಿಳಾ ವಿಭಾಗದಲ್ಲಿ ಮೈಸೂರಿಗೂ ಪುರುಷ ವಿಭಾಗದಲ್ಲಿ ಪತಿಯಾಲಾ ಸಂಸ್ಥಾನಕ್ಕೂ ವಿಜಯ ದೊರೆಯಿತು. ಹಿಂದುಸ್ತಾನ ಸಿಂಹಳ ಸ್ಪರ್ಧೆಯಲ್ಲಿ ಹಿಂದುಸ್ತಾನವೆ ವಿಜಯಿಯಾಯಿತು.

ಮೈಸೂರು ಸಂಸ್ಥಾನದ ಬರಗಾಲ ಪ್ರದೇಶಗಳಲ್ಲಿ ಸಂಚರಿಸಿರುವ ಶ್ರೀ ಥಕ್ಕರಬಾಪಾ ಅವರು ತಾವು ಕಂಡ ಸಂಗತಿಗಳನ್ನು ದಿವಾಣರಿಗೆ ತಂತಿ ಮೂಲಕ ತಿಳಿಸಿರುವರೆಂದು ಗೊತ್ತಾಗಿದೆ.

ಇದೀಗ ಸುಮಾರು ೮೦ ದಿನಕ್ಕೂ ಮೇಲ್ಪಟ್ಟು ಸಾಗಿರುವ ಕೋಲಾರದ ಚಿನ್ನದ ಗಣಿಯ ಕೂಲಿಕಾರರ ಸಂಪು ಇನ್ನೂ ಸಾಗಿದೆ. ಕೆಲಸಗಾರರ ಪರಿಸ್ಥಿತಿ ಬಹಳ ಕಷ್ಟದಾಯಕವಾಗಿದೆ.

ಕಾಂಗ್ರೆಸ್ ವರ್ಕಿಂಗ ಕಮಿಟಿ ಸದಸ್ಯರಾದ ಶ್ರೀ ಜೆ. ಬಿ. ಕೃಪಲಾನಿಯವರ ಪತ್ನಿ ಸುಚೇತಾ ದೇವಿಯವರು ಬೆಂಗಳೂರಿಗೆ ಬಂದಿದ್ದಾರೆ. ಅವರು ಕಸ್ತೂರ ಬಾ ಸ್ಮಾರಕ ಸಮಿತಿಯ ಆಶ್ರಯದಲ್ಲಿ ವಿಧಾಯಕ ಕಾರ್ಯಕ್ರಮ, ಕಸ್ತೂರ ಬಾ ಕಾರ್ಯಕ್ರಮಗಳನ್ನು ಕುರಿತು ಭಾಷಣ ಮಾಡುತಿದ್ದಾರೆ.



ಮುಂಬಯಿ ಶೇರ ಪೇಟೆ

ಕಳೆದ ವಾರ ಶೇರ ಪೇಟೆಯಲ್ಲಿ ಕಂಡು ಬಂದ ಇಳಿಮುಖತೆ ಟಾಟಾ ಪಾಲುಗಳ ಮಟ್ಟಿಗಾದರೂ ಕ್ಷಣಿಕವೆಂದು ಸಿದ್ಧವಾಯಿತು. ಏಕೆಂದರೆ ಈ ವಾರಾರಂಭದಲ್ಲಿ ವ್ಯಾಪಾರಸ್ಥರೆ ಮೇಲ್ಲಾಟದಿಂದ ಟಾಟಾ ಪಾಲುಗಳು ೩೭೩೭ ಕ್ಕೆ ಮುಟ್ಟಿದ್ದಲ್ಲದೆ ಬುಧವಾರದಷ್ಟು ಹೊತ್ತಿಗೆ ೩೭೬೫-೦-೦ ಕ್ಕೇರಿದವು. ಡಾಯಿಂಗ ಪಾಲುಗಳು ಪ್ರಾರಂಭದಲ್ಲಿ ೩೩೩೭-೮-೯ ಯ ಉಚ್ಚಮಟ್ಟದಲ್ಲಿ ತೊಡಗಿದ್ದರೂ ಮರು ದಿನ ೩೯೯೭-೮-೦ ಕ್ಕೆ ಇಳಿದವು. ಸ್ವದೇಶಿ ಪಾಲು ೭೧೧-೮-೦ ರಿಂದಾರಂಭಿಸಿ ೭೦೩-೦-೦ ಕ್ಕಿಳಿದು ೭೦೬ ಕ್ಕೆ ಹೋದರೆ ಸೆಂಚುರಿ ೯೫೫-೦-೦ ೯೪೫-೦-೦ ಕ್ಕಿಳಿಯಿತು. ಸೆಂಟ್ರಲ ಇಂಡಿಯಾ ೪೪೩-೮-೦ ರಿಂದ ೪೩೭-೮-೦ ಕ್ಕೂ ಬೇಲಾಪುರ ೩೫೦-೮-೦ ರಿಂದ ೩೪೯-೦-೦ ಕ್ಕೂ ಅಸೋಸಿಯೇಟೆಡ ಸಿಮೆಂಟ್ಸ ೩೩೯-೪-೦ ರಿಂದ ೩೩೭-೮-೦ ಕ್ಕೂ ಬಂದು ಕಳೆದ ವಾರಕ್ಕಿಂತ ಕೆಳಮಟ್ಟದಲ್ಲಿ ಮುಗಿದವು. ಬ್ಯಾಂಕ್ ಪಾಲುಗಳಲ್ಲಿ ಸೆಂಟ್ರಲ ಇಂಡಿಯಾ ೩೦೭-೮-೦ ಯಲ್ಲಿ ಸ್ಥಿರವಾಗಿದ್ದರೆ ಇಂಪೀರಿಯಲ್ ಎಫ್. ಸಿ. ೩೪೦೭-೮-೦ ಯಿಂದ ೩೪೦೦-೦-೦ ಕ್ಕಿಳಿಯಿತು. ರಿಝುರ್ವ ಬ್ಯಾಂಕ್ ೧೫೬-೮-೦ ರಲ್ಲಿ ಯಥಾಸ್ಥಿತಿ. ಸರಕಾರಿ ಭದ್ರತೆಗಳು ಒಂದೆರಡಾಣೆ ಅಂತರ ತೋರಿ ಜಿ. ಪಿ. ನೋಟು ೧೦೩-೪-೦ ರಿಂದ ೧೦೩-೬-೦ ಕ್ಕೂ ೩॥ ದರದ ೧೯೫೦ ರ ಸಾಲ ೧೦೧-೭-೦ ರಿಂದ ೧೦೧-೧೦-೦ ಕ್ಕೂ ಹೋದರೆ ೩॥ ದರದ ೧೯೪೭-೫೦ ಸಾಲ ೧೦೩-೪-೦ ರಲ್ಲಿ ಇದ್ದಂತೆಯೆ ಇದೆ.

ಚಿನ್ನ—ಬೆಳ್ಳಿ

ಚಿನ್ನದ ದರ ೯೩-೮-೦ ರ ವರೆಗೂ ಹೋಗಿ ೯೨-೧೨-೦ ಕ್ಕಿಳಿಯಿತು. ಬೆಳ್ಳಿ ಮಾತ್ರ ಕಳೆದ ವಾರಕ್ಕಿಂತ ಈ ವಾರ ಬಹಳ ಏರಿ ೧೮೮-೮-೦ ರ ಉಚ್ಚಮಟ್ಟದಲ್ಲಿ ನಿಂತಿದೆ. ಕಲಕತ್ತೆಯ ವ್ಯಾಪಾರಿಗಳ ಪ್ರಭಾವದಿಂದ ಹೀಗಾಗಿದೆಯೆಂದು ನಂಬಲಾಗಿದೆ.

ಅರಳೇ ಪೇಟೆ

ಅರಳೇ ದರಗಳು ವಿಶೇಷ ಅಂತರ ತೋರಿಸಲು ಕಾರಣವಿಲ್ಲ. ಅದರೂ ತೇಜೀ ಮಂದೀ ವ್ಯಾಪಾರಿಗಳು ದರಗಳನ್ನು ಕೆಳಗೆ ತಳ್ಳಲು ಪ್ರಯತ್ನಿಸುವ ಲಕ್ಷಣಗಳಿವೆ. ಹೀಗೆ ಸೋಮವಾರ ರೂ. ೪೫೭-೦-೦ ರಲ್ಲಿದ್ದ ಮಾರ್ಚ ವಾಯಿದೆ ಅರಳೆ ಮುಂದೆ ೪೪೯-೦-೦ ಕ್ಕಿಳಿಯಿತು. ಮೇ ವಾಯಿದೆ ರೂ. ೪೬೦-೪-೦ ಜುಲೈ ೪೭೦-೧೨-೭ ಮತ್ತು ಸೆಪ್ಟೆಂಬರ ೪೭೭-೪-೦ ರಲ್ಲಿವೆ.

ಎಣ್ಣೆಕಾಳು

ಶೇಂಗಾ	ರೂ. ೧೦೫-೦-೦
ಅಗಸಿ	೨೨-೮-೦
ಅಗಸಿ ಎಣ್ಣೆ	೧೩-೬-೦

ಸಾಂಗಲಿ ಪೇಟೆ

ಬೆಲ್ಲ (ಹೇರು)	ರೂ.	೪೨ — ೫೯
ಅರಿಸಿಣ	,,	೬೭ — ೭೩
ಮೆಣಸಿನಕಾಯಿ	,,	೧೩೫ — ೧೫೫
ಶೇಂಗಾ (ಖಂಡಿ)	,,	೮೮ — ೯೨
ದೇಶಿ ತಂಬಾಕು	,,	೧೦೦-೧೭೫

ಶಿವಮೊಗ್ಗೆ

ತೀರ್ಥಳ್ಳಿ ದೇಶಾವರ ಅಡಿಕೆ ಮಣ ರೂ.	೨೦-೨೫
ಕಡಿ ಹಸನ್	೨೫-೨೬
ತೊರಸಾಲು	೧೮-೨೧॥
ಅನ್ನಾವರಂ	೧೮-೨೨
ಕೊಪ್ಪ ಶೃಂಗೇರಿ	೧೯-೨೪
ರಾಜಾ ಆಲವು	೨೨-೨೫
ರಾಶಿ ಬೆಟ್ಟೆ	೧೦-೧೧॥
ನಯ ಬೆಟ್ಟೆ	೧೦-೧೨
ವಂತಿ	೧೨॥-೧೩
ನುಲಿ	೨೨-೨೫

ಸಿಂಗಾಪುರ ಅಡಿಕೆ ಬಂದಿದೆಯೆಂಬ ಸುದ್ದಿ ಹಬ್ಬಿ ಪೇಟೆಯಲ್ಲಿ ಕಳವಳವುಂಟಾಗಿತ್ತು. ಅದು ನಿರಾಧಾರವೆಂದು ಈಗ ತಿಳಿದು ಬಂದಿದೆ.

ಹುಬ್ಬಳ್ಳಿ ಪೇಟೆ

ಜಯವಂತಿ ಹತ್ತಿ ನಂ. ೧	೩೧೦—೩೨೫
ಜಿನ	೨೦೦-೨೨೫
ಅ. ಡಬಲರೋಲರ	೧೮೦-೨೦೦
ಜ. ಹತ್ತಿಕಾಳು	೧೭ ಪೌಂಡ

ದಕ್ಷಿಣ ಕನ್ನಡ

ಸೆಂಟ ಅಲೋಸಿಯಸ್ ಕಾಲೇಜಿನ (ಮಂಗಳೂರ) ಹಾಸ್ಟೆಲ್ ಯೂನಿಯನ್ ವಾರ್ಷಿಕೋತ್ಸವ ತಾ. ೩ ಕ್ಕೆ ಜನಾಬ ಗುಲಾಮ ಮಹಮ್ಮದರ ಅಧ್ಯಕ್ಷತೆಯಲ್ಲಿ ಸಾಂಗವಾಯಿತು.

ಪುತ್ತೂರ ಭಾಗದಿಂದ ಕಾಂಗ್ರೆಸ ಪರವಾಗಿ ಚುನಾವಣೆಗೆ ನಿಂತಿರುವ ಶ್ರೀ ಕೆ. ಆರ್. ಕಾರಂತರನ್ನು ಎದುರಿಸಿ ಎಂ. ಎನ್. ರಾಯರ ರ್‍ಯಾಡಿಕಲ್ ಡೆಮೊಕ್ರಟಿಕ ಪಕ್ಷದ ಪರವಾಗಿ ಶ್ರೀ ನಗ್ರಿ ಮೂಲೆ ಶಂಕರಭಟ್ಟರು ನಿಲ್ಲುವರೆಂದು ತಿಳಿದು ಬಂದಿದೆ.

ಕಾರ್ಕಳದ ಕರ್ನಾಟಕ ಸಂಘದವರು ಪ್ರಾರಂಭಿಸಿರುವ "ಭಾರತಿ" ಎಂಬ ಕೈಬರಹದ ಮಾಸಪತ್ರಿಕೆಯ ಉದ್ಘಾಟನಾ ಸಮಾರಂಭ ತಾ. ೯ ಕ್ಕೆ ಶ್ರೀ ಲಲಿತಕೀರ್ತಿ ಭಟ್ಟಾರಕ ಸ್ವಾಮಿಗಳ ಅಧ್ಯಕ್ಷತೆಯಲ್ಲಿ ಶ್ರೀ ಕಡೆಕಾರು ರಾಜಗೋಪಾಲಕೃಷ್ಣರಾಯರ ಹಸ್ತದಿಂದ ಸಾಂಗವಾಯಿತು.

ಕಾರ್ಕಳದ ವಕೀಲ ಇರ್ವತ್ತೂರ ನಾರಾಯಣ ನಾಯಕರ ಪುತ್ರಿ ಮತ್ತು ಅಧ್ಯಾಪಕ ಶ್ರೀ ಸದಾನಂದ ನಾಯಕರ ಪತ್ನಿಯಾದ ಶ್ರೀಮತಿ ಗಿರಿಜಾಬಾಯಿಯವರು ತಮ್ಮ ೨೪ ನೇ ವಯಸ್ಸಿನಲ್ಲಿ ನಿಧನ ಹೊಂದಿದರು. ಶ್ರೀಮತಿಯವರು ಇಂಗ್ಲೀಷಿನಲ್ಲಿ ಹಾಯಸ್ಕೂಲ ಶಿಕ್ಷಣವನ್ನು ಮುಗಿಸಿದವರಾಗಿದ್ದು ಸಂಸ್ಕೃತ, ಹಿಂದೀ ಅಭ್ಯಾಸಮಾಡಿ ವಿದ್ವಾನ್, ವಿಶಾರದ ಪರೀಕ್ಷೆಗಳಲ್ಲಿ ತೇರ್ಗಡೆಯಾಗಿ ಅನೇಕ ಬಹುಮಾನಗಳನ್ನು ಗಳಿಸಿದ್ದರು.

ಪ್ರಥಮ ಚಿಕಿತ್ಸೆಯನ್ನು ಕುರಿತಾದ ಶಿಕ್ಷಣ ತರಗತಿಗಳು ಮಂಗಳೂರಿನ ಕೆನರಾ ಹಾಯಸ್ಕೂಲಿನಲ್ಲಿ ಪ್ರಾರಂಭವಾಗಿದ್ದು ಜಿಲ್ಹಾ ಆರೋಗ್ಯಾಧಿಕಾರಿ ಡಾ. ಕೆ. ಎಲ್. ಕಿಣಿಯವರು ಭಾಷಣಗಳ ಮೂಲಕ ಶಿಕ್ಷಣ ಕೊಡುವರು ಮತ್ತು ಉತ್ತೀರ್ಣರಾದವರಿಗೆ ಪ್ರಮಾಣಪತ್ರ ಕೊಡಲಾಗುವದು.

ದಕ್ಷಿಣ ಕನ್ನಡ ಜಿಲ್ಹೆಯಲ್ಲಿ ಶ್ರೀ ಕಣಕಪ್ಪನವರು ಸಂಘಟಿಸಿದ ಟ್ರೇಡ ಯೂನಿಯನ್ ಸಭೆಯೊಂದು ಶ್ರೀ ಕೆ. ಆರ್. ಕಾರಂತರ ಅಧ್ಯಕ್ಷತೆಯಲ್ಲಿ ನಡೆಯಿತು. ಒಡೆಯರೂ ಕೂಲಿಕಾರರೂ ಸೌಹಾರ್ದದಿಂದ ನಡೆದುಕೊಳ್ಳುವ ಅವಶ್ಯಕತೆಯನ್ನೊತ್ತಿ ಹೇಳುವ ಭಾಷಣಗಳಾದವು. ಅಧ್ಯಕ್ಷರು, ಕೂಲಿಕಾರರು ಅಲ್ಪಸಂತುಷ್ಟರಾಗಿರಬಾರದೆಂದೂ ಆದರೆ ಒಮ್ಮೆಲೆ ದುಡುಕಿ ಮುಷ್ಕರ ಹೂಡದೆ ಆದಷ್ಟು ಸಮಾಧಾನ ಮಾರ್ಗದಿಂದ ತಮ್ಮ ಬೇಡಿಕೆಯನ್ನು ಪಡೆಯಬೇಕು ಮತ್ತು ಅದು ಸಾಧ್ಯವಾಗದಿದ್ದರೆ ಮಾತ್ರ ಮುಷ್ಕರ ಹೂಡಬೇಕು ಎಂದೂ ಉಪದೇಶಿಸಿದರು.

ದಕ್ಷಿಣ ಕನ್ನಡ ಜಿಲ್ಹಾ ತಂಬಾಕು ಬೆಳೆಯುವವರ ಸಮ್ಮೇಲನವೊಂದನ್ನು ಮಾರ್ಚ ಅಂತ್ಯಕ್ಕೆ ಜರುಗಿಸಬೇಕೆಂದು ಜಿಲ್ಹಾ ತಂಬಾಕು ಬೆಳೆಸುವವರ ಸಂಘದವರು ನಿರ್ಣಯಿಸಿದ್ದಾರೆ. ಸಮ್ಮೇಲನದ ಅಧ್ಯಕ್ಷತೆ ಮತ್ತು ಉದ್ಘಾಟನೆಗೆ ಕೇಂದ್ರ ಶಾಸನ ಸಭಾ ಸದಸ್ಯರಾದ ಹಾಜಿ ಅಬ್ದುಲ್ಲಾ ಸತ್ತಾರ ಸೇಠ ಮತ್ತು ಕರುಣಾಕರ ಮೆನನರನ್ನು ಬರಮಾಡಿಕೊಳ್ಳುವ ವಿಚಾರವಿದೆ.

ಪುತ್ತೂರು ತಾಲೂಕಿನಲ್ಲಿ ಆಹಾರದ ಅಭಾವವನ್ನು ಆದಷ್ಟು ಮಟ್ಟಿಗೆ ಎದುರಿಗುವ ಸಲುವಾಗಿ ಮರಗೆಣಸು, ಗೆಣಸು ಮತ್ತು ಶೇಂಗಾ ಬೆಳೆಸುವ ವಿಧಾನವನ್ನು ಕುರಿತು ಪ್ರಚಾರ ಮಾಡಲು ಸ್ಥಳೀಯ "ಹೆಚ್ಚು ಆಹಾರ ಬೆಳೆಯಿರಿ" ಸಮಿತಿಯವರು ಶ್ರೀ. ಬಿ. ವೆಂಕಪ್ಪಗೌಡ ಎಂಬವರನ್ನು ಪ್ರಚಾರಕರಾಗಿ ನೇಮಿಸಿದ್ದಾರೆ. ಶ್ರೀ. ಗೌಡರು ಮೂಲ್ಕಿಯಲ್ಲಿ ನಡೆದ ಮನೆ ಕೈಗಾರಿಕೆ ಪ್ರದರ್ಶನದಲ್ಲಿ ಬಹುಮಾನ ಪಡೆದವರಿದ್ದಾರೆ.

ಅಫಗಾಣಿಸ್ತಾನದ ಹಿಂದಿನ ಅರಸು ಮನೆತನಕ್ಕೆ ಸೇರಿದ ೬ ಜನ ಗಂಡಸರನ್ನೂ ೪ ಜನ ಹೆಂಗಸರನ್ನೂ ಹಿಂದುಸ್ತಾನದಲ್ಲಿ ಸ್ಥಾನಬದ್ಧರಾಗಿರಿಸಲಾಗಿದೆಯೆಂದೂ ಅವರು ನೆರೆರಾಜ್ಯವೂ ಗೆಳೆರಾಜ್ಯವೂ ಆದ ಅಫಗಾಣಿಸ್ತಾನದ ಸರಕಾರವನ್ನುರುಳಿಸಲು ಹಿಂದುಸ್ತಾನದಲ್ಲಿರುವ ಠಾಣೆಗಳಿಂದ ಒಳಸಂಚು ನಡೆಸುತ್ತಿದ್ದುದರಿಂದ ಅವರನ್ನು ಸ್ಥಾನಬದ್ಧತೆಯಲ್ಲಿರಿಸಲಾಗಿದೆಯೆಂದೂ ಶ್ರೀಪ್ರಕಾಶರು ಕೇಳಿದ ಪ್ರಶ್ನೆಗೆ ಉತ್ತರವಾಗಿ ಶಾಸನ ಸಭೆಯಲ್ಲಿ ತಿಳಿಸಲಾಯಿತು.

ಜನವರಿ ಇಪ್ಪತ್ತಾರು

ಕತೆಗಾರ : ಶ್ರೀ. ಸೇವ ನಮಿರಾಜ ಮಲ್ಲ

“ ಜನವರಿ ಇಪ್ಪತ್ತಾರು ! ”

“ ಈತನಕ ನೀನು ನೋಡಿಲ್ಲವೇ ? ನಾನು ಅಂದೇ ನಿನ್ನ ಕೆಲೆಂಡರಿನಲ್ಲಿ ಗುರುತು ಹಾಕಿದ್ದೆ ! ಒಳ್ಳೆಯ ದೇಶಸೇವಕ ನೀನು ! ಹ್ಹ ! ” ಎಂದು ಭಾಸ್ಕರ ಹಲ್ಲು ಕಿರಿಯುತ್ತ ಹೇಳಿದ ನನಗೆ.

—ಒಳಗೆ ಕಾಫಿ ಕುದಿಯುವುದು ಕೇಳಬರುತ್ತಿತ್ತು; ಲತಾಳ ಬಿರುಸು ನಡಿಗೆಯ ಧ್ವನಿಯೂ ಅದರೊಡನೆ ಮಿಲನಗೊಂಡಿತ್ತು.

“ ಲತಾ ! ಒಂದು ಲೋಟ ನೀರು ಹೆಚ್ಚು ” ಎಂದೆ ನಾನು.

ಭಾಸ್ಕರ ಆಗ ಇದು ತನಗಾಗಿ ಎಂದು ತಿಳಿದು “ ಬೇಡ. ತಡವಾಗುತ್ತದೆ. ನಾನು ಈಗ ಹೊಟೇಲಲ್ಲಿ ಕುಡಿದೇ ಬಂದಿರುವೆನು ” ಎಂದು ಸ್ವಾಭಾವಿಕವಾದ ತನ್ನ ಸೋಗಿನ ತಿರಸ್ಕಾರಬುದ್ಧಿಯನ್ನು ವ್ಯಕ್ತಪಡಿಸಿದನು.

ಹೀಗೆ ನಾವು ಕುಳಿತಿದ್ದಂತೆಯೇ ಲತಾ ಒಂದು ಲೋಟ ಕಾಫಿಯನ್ನೂ ಒಂದು ಲೋಟ ನೀರನ್ನೂ ಸ್ವಲ್ಪ ತಿನಸನ್ನೂ ಮೇಜಿನ ಮೇಲೆ ತಂದಿಟ್ಟಳು.

“ ಇದೇಕೆ ನೀರು ?” ನಾನು ತುಸು ಕೋಪದಿಂದಲೇ ಕೇಳಿದೆ.

“ ನೀವು ಹೇಳಿದರಲ್ಲ ! ”

“ ಚಿಂತೆಯಿಲ್ಲ ! ಇನ್ನೊಂದು ಲೋಟ ಕಾಫಿ!”

“ ನೀವು ಹೇಳಲಿಲ್ಲವಲ್ಲ !”

ಅಷ್ಟೊತ್ತಿಗೆ ಭಾಸ್ಕರನು ಸಹಾನುಭೂತಿಯಿಂದ “ ಬೇಡವೆಂದು ನಾನು ಆಗಲೇ ಹೇಳಲಿಲ್ಲವೇ ? ನೀನು ಬೇಗ ಕುಡಿ ಮಹಾರಾಯಾ ” ಎಂದು ಕೈಗಡಿಯಾರದ ಮೇಲೆ ಇಳಿದಿದ್ದ ಅಂಗಿಯ ಕೈಯನ್ನು ಮೇಲೆ ತಳ್ಳಿ ಅದನ್ನು ನೋಡುತ್ತ ಹೇಳಿದನು.

“ ಆಗಲಿ ಭಾಸ್ಕರ. ಇದನ್ನು ನಾವು ಪಾಲು ಮಾಡಿ ದೇವರು ಕೊಟ್ಟದ್ದೆಂತ ಭಾವಿಸಿ ಕುಡಿಯೋಣ ” ಎನ್ನುತ್ತ ನಾನು ನೀರಿನ ಲೋಟದಲ್ಲಿದ್ದ ನೀರನ್ನು ಖಾಲಿಮಾಡಲು, ಕೈತಪ್ಪಿ ಕಾಫಿಯ ಲೋಟವನ್ನೆತ್ತಿ ಚೆಲ್ಲಿದೆ. ಕಾಫಿ ಎಲ್ಲ ಹೊರಗಾಯಿತು.

ಭಾಸ್ಕರನು ಇದರಿಂದ ಬಹಳ ಕುಗ್ಗಿ ಹೋಗಿದ್ದರೂ ಉಬ್ಬಿದವನಂತೆ ನಟಿಸುತ್ತಾ “ ಇಗೋ ಇದಕ್ಕೆ ಹೇಳುವದು What man proposes, [illegible] disposes. (ಮನುಷ್ಯನು ಏನನ್ನು [illegible]ಸುತ್ತಾನೋ ಅದನ್ನು ದೇವರು ಆಗಗೊಡುವದಿಲ್ಲ) ಇನ್ನಾದರೂ ಹೋಗೋಣವೇ ? ನಿನ್ನ ಕಾಫಿಯ ಆಟ ಆಯಿತಲ್ಲ ! ” ಎನ್ನುತ್ತ ನಿರಾಶನಾಗಿ ನನ್ನ ಬೆನ್ನು ತಟ್ಟಿದ.

—ಆದರೆ ಅವನ ಆಗಿನ ಹೊಟ್ಟೆಯ ಒಳಗಿನ ಚಿತ್ರವನ್ನು ತೆಗೆಯಲು ಕ್ಷ-ಕಿರಣ ಬೇಕಾಗಿರಲಿಲ್ಲ; ಅವನ ಮುಖವೇ ಅದನ್ನು ಸೂಚಿಸುತ್ತಿತ್ತು.

ನಾನು ನೀರನ್ನೇ ಕುಡಿದು ಬೇಗಬೇಗನೇ ಅಂಗಿಯನ್ನು ಹಾಕಿಕೊಂಡು ಮುಂಚಿನ ದಿನವೇ ಕೆಲಸಕ್ಕೆ ನೇಮಿಸಲ್ಪಟ್ಟ ಖಾದಿ ಟೊಪ್ಪಿಗೆಯನ್ನು ತಲೆಗಿಟ್ಟು ಭಾಸ್ಕರರೊಡನೆ ಹೊರಟೆ.

ಎದುರಿನಿಂದ ದೊಡ್ಡ ಮೆರವಣಿಗೆಯೊಂದು ಬರುತ್ತಿತ್ತು. ತ್ರಿವರ್ಣ ಧ್ವಜಗಳು ಸಾವಿರಾರು ಗಾಳಿಯಲ್ಲಿ ರಪರಪನೆ ಹಾರುತ್ತಿದ್ದುವು. “ ಭಾರತಮಾತಾಕೀ ಜೈ ” ಘೋಷ ಕೇಳಬರುತ್ತಿತ್ತು.

“ಭಾಸ್ಕರಾ, ಬೇಗ ನಡೆ. ಅವರು ಆಗೋ ಆ ಮಾರ್ಗದಿಂದ ತಿರುಗುತ್ತಿರುವರು. ನಾವಲ್ಲೇ ಅವರನ್ನು ಕೂಡಿಕೊಳ್ಳಬೇಕಾಗಿದೆ ” ಎನ್ನುತ್ತ ಬೇಗ ಬೇಗನೆ ಕಾಲು ಹಾಕುತ್ತಿದ್ದೆ.

ಭಾಸ್ಕರನು “ ನಿಲ್ಲು ಮಹಾರಾಯಾ ! ನಿನಗೇನು ! ನೀನು ನೀರನ್ನಾದರೂ ಕುಡಿದಿರುವಿ. ನಾನು ಅದನ್ನೂ ತೆಗೆದುಕೊಳ್ಳಲಿಲ್ಲ. ಜೊತೆಗೆ ಮನೆಯಿಂದ ಹೊರಡುವ ಅವಸರದಲ್ಲಿ ಹಣದ ಚೀಲವೂ ಅಲ್ಲೇ ಉಳಿಯಿತು ” ಹೀಗೆಂದು ಉಗಿಬಂಡಿಯು ನಿಲ್ದಾಣದಿಂದ ಹೊರಡುವಾಗ ಬುಸುಗುಟ್ಟುವಂತೆ ಹೇಳಿದ.

“ಶಾಭ್ಬಾಸ್ ಭಾಸ್ಕರಾ! ಜನವರಿ ಇಪ್ಪತ್ತಾರು! ನೀನೂ ನೇಸ್ಟ್ ಅವರ ಬರವನ್ನು ಅನೇಕ ದಿನಗಳಿಂದ ನಿರೀಕ್ಷಿಸಿದ್ದೆವಲ್ಲ ! ಸ್ವಾತಂತ್ರ್ಯ ದಿನ ! ನಮ್ಮ ದೇಶದ ಜನಗಳ ಬರಗಾಲದ ಬೇಗೆಯನ್ನು ಇಂದಾದರೂ ನಾವಿಬ್ಬರು ಅನುಭವಿಸಿದೆವಲ್ಲ !”

“ ಅದೆಲ್ಲ ಗೊಳ್ಳು ಮಾತು.......”

“ಗೊಳ್ಳು ಮಾತು! ಆಹ್ಹss! ನೀನು ಹೊಟ್ಟೆ ತುಂಬ ಉಂಡರೆ, ನಿನ್ನ ದೇಶದ ಸ್ವಾತಂತ್ರ್ಯದ ಗೊಡವೆ ಬಿಡು, ನಿನ್ನ ಗೊಡವೆಯಾದರೂ ನಿನಗೆ ಉಳಿಯುವದೇ ? ಇಂದಾದರೋ ನಿನಗೆ ಸಂದರ್ಭವು ತನ್ನಿಂದ ತಾನೇ ಒದಗಿದೆ. ಈ ಸುವರ್ಣ ಸಂದರ್ಭದ ಪೂರ್ಣ ಉಪಯೋಗವನ್ನು ನೀನು ಮಾಡಿಕೊಳ್ಳಬೇಕು. ”

“ ಆಹಾರ ತೆಗೆದುಕೊಳ್ಳದಿದ್ದರೆ ಸ್ವಾತಂತ್ರ್ಯ ಸಿಗುವದೇ ? ”

“ ಸಿಕ್ಕಿಯೇ ಸಿಕ್ಕುವದು. ಅದು ಪೂರ್ಣ ಸ್ವಾತಂತ್ರ್ಯ. ದೇಹದಿಂದಲೇ ಸ್ವಾತಂತ್ರ್ಯ. ಬಂಗಾಲದಲ್ಲಿ ಅನ್ನದೇವನು ಹೂಡಿದ ಬರಗಾಲ ಯುದ್ಧದಿಂದಾಗಿ ಎಷ್ಟು ಲಕ್ಷ ಮಂದಿ ಸ್ವತಂತ್ರರಾಗಲಿಲ್ಲ ! ”

“ನೀನು ತರ್ಕ ಶಾಸ್ತ್ರಿ ಎಂಬುದು ನನಗೆ ಗೊತ್ತಿದೆ ಮಹಾರಾಯಾ! ಕಿಸೆಯಲ್ಲಿ ಏನಾದರೂ ಚಿಲ್ಲರೆ ಉಂಟೋ ನೋಡು. ಈ ಹೋಟೇಲಿಗೆ ಹೋಗೋಣ.”

ನನ್ನ ಹತ್ತರ ಹಣವಿಲ್ಲವೆಂದು ನಾನು ಮುಂಬರಿಯುತ್ತಲೇ ಇದ್ದೆ. ಮೆರವಣಿಗೆ ನಮ್ಮ ಸಮೀಪವಾಗುತ್ತಲಿತ್ತು. ಭಾಸ್ಕರನ ಹಣದ ಕೇಳಿಕೆಯು, ಬೇಡಿಕೆ, ಯಾಚನೆ, ಪ್ರಾರ್ಥನೆ ಇತ್ಯಾದಿ ಹಲವು ರೂಪಗಳನ್ನು ತಾಳಿತು.

ನಾನು ಅವುಗಳಿಗೆಲ್ಲ ಕಿವುಡನಾಗಿದ್ದೆ. ಭಾಸ್ಕರನ ಗುಣವೆಲ್ಲ ನಾನು ಪೂರ್ಣ ಅರಿತದ್ದೇ. ಹಣವಿದ್ದುಕೊಂಡು ಹಣವಿಲ್ಲದವನೆಂದು ಯಾಚಿಸುವ ಕೃತಕ ಹೃದಯಿಗಳಲ್ಲಿ ನನ್ನ ಈ ಮಿತ್ರನು ಅಗ್ರಗಣ್ಯ. ಅದಲ್ಲದೆ ದೊಡ್ಡ ಸಂಭಾವಿತನಂತೆ ನನ್ನನ್ನು ಹೊರಡಲು ಒತ್ತಾಯಪಡಿಸಿದ್ದ. ಇವೆಲ್ಲ ನನ್ನನ್ನು ನನ್ನ ಈ ಹಸಿವಿನಿಂದ ನರಳುತಿದ್ದ ಮಿತ್ರನನ್ನು ನಿರ್ದಯದಿಂದ ನೋಡುವಂತೆ ಮಾಡಿದುವು.

ಮೆರವಣಿಗೆಗೆ ಹೇಗಾದರೂ ನಾವು ಸೇರಿದೆವು. ಭಾಸ್ಕರನಿಗೆ ಆಗ ನನ್ನ ಮೇಲೆ ಬಂದಿದ್ದ ಕೋಪವನ್ನಳೆಯಲು ಆಟಂ ಬಾಂಬಿನ ಉಷ್ಣತೆಯನ್ನಳೆಯುವ ಉಷ್ಣಮಾಪಕ ಯಂತ್ರದಿಂದಲಾದರೂ ಸಾಧ್ಯವಾಗುತಿತ್ತೋ ಇಲ್ಲವೋ!

ಸ್ವಾತಂತ್ರ ಸೇನೆ, ಇಳಿಜಾರಿನಲ್ಲಿ ಹರಿಯುತ್ತಿರುವ ನದಿಯ ಗತಿಯಂತೆ, ವೇಗದಿಂದ ಹೋಗುತ್ತಲಿತ್ತು- ನಮಗೆ ಪಟ್ಟಣದ ಮೈದಾನನ್ನು ಮುಟ್ಟಬೇಕಾಗಿತ್ತು. ಜಯಘೋಷಗಳು ರಣನಾದಕ್ಕಿಂತಲೂ ನಾಸಾರು ಪಟ್ಟು ಮಿಗಿಲಾಗಿ ನಮ್ಮ ಬಾಯಿಯಿಂದ ಮೊಳಗುತಿದ್ದವು. -ಮತ್ತೆ ಭಾಸ್ಕರನೂ ನಮ್ಮೊಡನೆ ಘೋಷಣೆ ಮಾಡುತಿದ್ದನೋ ಇಲ್ಲವೋ ಎಂಬುದು ನಾನು ಪರೀಕ್ಷಿಸದ ವಿಚಾರ.

ಸರಿ. ಮೈದಾನನ್ನು ತಲುಪಿದೆವು. ಪ್ರಭಾತ ಫೇರಿಯಾಯಿತು. ಭಾಸ್ಕರನು ಯಾವಾಗಲೂ ಇಂಥ ಕೆಲಸಗಳಲ್ಲಿ ಬಹಳ ಮುಂದಾಗಿದ್ದರೂ ಇಂದು ಸಪ್ಪೆ ಮೋರೆ ಮಾಡಿಕೊಂಡು ಹಿಂದೆಯೇ ಉಳಿದಿದ್ದನು. ಒಂದೆರಡು ಸರ್ತಿ ಮೆಲ್ಲನೆ ಜಾರಿಬಿಡುವ ಹವಣಿಕೆಯನ್ನು ಕೂಡ ಮಾಡಿದ್ದನು; ಆದರೆ ಅವನು ಸರ್ವಸಾಧಾರಣ ಎಲ್ಲರಿಗೂ ಪರಿಚಿತ ವ್ಯಕ್ತಿಯಾಗಿದ್ದುದರಿಂದ, ಈ ಹವಣಿಕೆಯನ್ನು ಕಾರ್ಯರೂಪಕ್ಕೆ ತರಲು ಸಾಧ್ಯವಾಗಲಿಲ್ಲ; ಕೊನೆಗೆ ಬಹುಶಃ ಆ ಪ್ರಯತ್ನವನ್ನು ಬಿಟ್ಟೇಬಿಟ್ಟದ್ದನು.

ಸಭಾ ವೇದಿಕೆಯಲ್ಲಿ “ಜನವರಿ ಇಪ್ಪತಾರು” ಎಂಬುದನ್ನು ರಕ್ತಾಕ್ಷರಗಳಿಂದ ಬರೆದಿದ್ದರು. ಹೌದು. ಅದು ನಮ್ಮ ದೇಶದ ಆಧುನಿಕ ಇತಿಹಾಸದಲ್ಲಿ ದೊಡ್ಡ ದಿನ. ನೆನೆಗುದಿಯಿಂದ ಕಡೆಗಣಿಸಲ್ಪಟ್ಟಿರುವ ನಮ್ಮ ಸ್ವಾತಂತ್ರ್ಯದ ಕೇಳಿಕೆಯನ್ನು ಪುನರುಜ್ಜೀವಿತಗೊಳಿಸುವ ದಿನ!

ದಿನದ ಮಹತ್ವವನ್ನು ವಿವರಿಸುತ್ತಾ ಸಭಾಧ್ಯಕ್ಷರು ಸ್ವಾತಂತ್ರ್ಯಸಮರದ ಸಂಕ್ಷಿಪ್ತ ಇತಿಹಾಸವನ್ನೇ ಜನರ ಮುಂದಿಟ್ಟರು. ಎಲ್ಲರೂ ಕೈಚಪ್ಪಾಳೆ ಹೊಡೆಯುತಿದ್ದರು.

-ದೊಡ್ಡವರು, ಸಣ್ಣವರು, ಮಹಿಳೆಯರು, ಇತ್ಯಾದಿ ಎಲ್ಲ ವರ್ಗಗಳ ಜನರೂ ಸಭೆಯಲ್ಲಿದ್ದರು. ಕಿರಿಯ ಮಕ್ಕಳು ಕೂಡ ಅತ್ಯಾತುರದಿಂದ ಕೈಚಪ್ಪಾಳೆ ಹೊಡೆಯುತಿದ್ದುವು ಅವುಗಳ ನಗುವನ್ನು ನೋಡುವಾಗ ಪ್ರಾಯಬಂದ ನಮ್ಮವರ ಅಸಮರ್ಥತೆಗೆ ಮೂದಲಿಸುವಂತೆ ಕಾಣುತಿತ್ತು. ಅಂತೂ ಅವುಗಳ ಹುರುಪು ಹೇಳತೀರದು. ಮತ್ತೆ ಉಳಿದವರ ಸ್ಫೂರ್ತಿ ಹೇಗಾದರೂ ಉಂಟಲ್ಲ! —ಅವರವರ ಜಾಗೃತ ಹೃದಯಗಳೊಳಗೆ!

ನಮ್ಮ ಭಾಸ್ಕರ ಮಾತ್ರ ಇಳಿಮೋರೆ ಮಾಡಿದ್ದ. ಚಪ್ಪಾಳೆ ಹೊಡೆಯಲೂ ಅವನ ಕೈಗಳಿಗೆ ಬಹುಶಃ ಸಾಮರ್ಥವಿರಲಿಲ್ಲವೆಂದು ತೋರುತಿತ್ತು: ನನಗವನ ಪರಿಸ್ಥಿತಿಯನ್ನು ದಯಾದೃಷ್ಟಿಯಿಂದ ವಿವೇಚಿಸಿ ಅತ್ಯಂತ ವಿಷಾದವಾಯಿತು. ಮರುಗಳಿಗೆಯಲ್ಲಿಯೇ ನನ್ನ ಮನಸ್ಸು “ಅವನು ಬೆಳಿಗ್ಗೆ ಒಂದು ಸಲ ಕಾಫಿ ಕುಡಿಯದಿದ್ದರೆ ಸತ್ತುಹೋಗುವುದಿಲ್ಲ; ಹಸಿವಿನ ರುಚಿಯರಿಯದಿದ್ದರೆ ಯಾವ ಸ್ವಾತಂತ್ರ್ಯಸಮರವೂ ಸಾಧ್ಯವಿಲ್ಲ!” ಎಂದು ನನ್ನ ದಯಾ ದೃಷ್ಟಿಯನ್ನು ದೂರಕ್ಕೋಡಿಸಿತು.

ಭಾಸ್ಕರ ಹೇಗಾದರೂ ಹೊರಗೆ ನುಸುಳಲು ಒಂದು ದಾರಿ ಹುಡುಕುತಿದ್ದ. ಹೀಗಿರುವಾಗ ಅಲ್ಲಿ ಏನೋ ಬರೆಯಲಿಕ್ಕೆ ಒಂದು ತುಣುಕು ಕಾಗದ ಬೇಕಾಯಿತು. ಭಾಸ್ಕರನು “ನಾನು ತರುತ್ತೇನೆ” ಎನ್ನುತ್ತ ಮುಂದೆ ಮುಂದೆ ಹೋದ. ನಾನು ಅಷ್ಟರಲ್ಲಿ ಅಡ್ಡಗಟ್ಟಿ ಅವನೊಡನೆ “ ನೀನು ದಣಿಯಬೇಡ. ಬರೀ ಹೊಟ್ಟೆಯಲ್ಲಿ ನಡೆಯುವುದು ಹಾಳು” ಎಂದು ನಕ್ಕೆ.

ಭಾಸ್ಕರನು, ಕೈಯಿಂದ ಉಣ್ಣುತ್ತಿರುವ ಅನ್ನದ ತುತ್ತನ್ನು ಎಳೆದವನನ್ನು ನೋಡುವಂತೆ, ನನ್ನನ್ನು ದುರುಗುಟ್ಟಿ ನೋಡಿದ; ಆ ಸಭೆಯಲ್ಲಿ ಅಹಿಂಸೆಗೆ ಪೂರ್ಣ ಮಾನ್ಯತೆಯಿದ್ದುದರಿಂದ ಅವನೇನೂ ಅದನ್ನು ಮುರಿಯುವ ಯತ್ನ ಮಾಡಲಿಲ್ಲ. ಆದರೆ ಅವನಿಗೆ ದುರ್ವಾಸ ವಿಶ್ವಾಮಿತ್ರ ಮೊದಲಾದ ಋಷಿಗಳಂತೆ ಶಾಪವಿಡುವ ಶಕ್ತಿಯಿರುತಿದ್ದರೆ ನನ್ನನ್ನು ಹಲವು ಶತಮಾನ ಈ ಲೋಕದಲ್ಲಿ ಜನ್ಮವೆತ್ತದಂತೆ ಮಾಡಿಬಿಡುತಿದ್ದ[illegible] ಏನೋ!

ಇದಾದ ಬಳಿಕ ಭಾಸ್ಕರ ತುಸುಹೊತ್ತು ಸ್ತಬ್ಧನಾಗಿ ಕುಳಿತ. ಸಭೆಯ ಕಾರ್ಯಕಲಾಪಗಳು ಯಾವುವೂ ಅವನ ಮನಸ್ಸಿಗೆ ಸೇರುತ್ತಲೇ ಇರಲಿಲ್ಲ. ಅಷ್ಟರಲ್ಲಿ ಪೋಲೀಸರು ಬಂದರೆಂಬ ಗಲಭೆ ಹಬ್ಬಿತು. ಅಧ್ಯಕ್ಷರು ಎಲ್ಲರೂ ಶಾಂತವಾಗಿರಬೇಕೆಂದು ಅಜ್ಞಾಪಿಸಿದರು. ಇದರಿಂದಾಗಿ ಓಡಲು ಹವಣಿಸುತಿದ್ದ ಕೆಲವರ ಸ್ಫೂರ್ತಿಭಂಗವಾಯಿತು. ಭಾಸ್ಕರನಿಗಾದ ನಿರಾಶೆ ಅಷ್ಟಿಷ್ಟಲ್ಲ. ಪೋಲೀಸರು ಸುಮ್ಮನೆ ಬಂದು ನಿಂತರಲ್ಲದೆ ಮತ್ತೇನೂ ಮಾಡಲಿಲ್ಲ.

ಅಧ್ಯಕ್ಷರು ಕೊನೆಗೆ ಸ್ವಾತಂತ್ರ್ಯ ಪ್ರತಿಜ್ಞೆಯನ್ನು ಓದಿ ಹೇಳಿದರು. ಅದರಲ್ಲಿ ಜಾತೀಯ ಐಕ್ಯ, ಸ್ವಾತಂತ್ರ್ಯ ಚಳವಳಿ, ಆರ್ಥಿಕ ಸಮುಸ್ಯೆ ಮೊದಲಾದ ಗುರುತರವಾದ ಸಮಸ್ಯೆಗಳಿಗೆ ಪ್ರತಿ ಒಬ್ಬ ವ್ಯಕ್ತಿಯು ಹೇಗೆ ಕಾರ್ಯಕಲಾಪಗಳನ್ನು ಮಾಡಬೇಕು ಎಂಬುದು ಅಡಕವಾಗಿತ್ತು. ಅಧ್ಯಕ್ಷರ ಅಧಿಕಾರವಾಣಿ ಎಲ್ಲರ ಎದೆಯೊಳಗೂ ಮಾರ್ದನಿಗೊಂಡಿತು. ಪೋಲೀಸಪಡೆಯು ಸುಮ್ಮನಿದ್ದು ಎಲ್ಲವನ್ನೂ ಆಲಿಸುತಿತ್ತು.

ಭಾಸ್ಕರ ಮಾತ್ರ ಮರದ ತುಂಡಿನಂತಾಗಿದ್ದ. . .

ಮತ್ತೆ ಸಭೆ ಚದುರಿತು. ನಾನು ಭಾಸ್ಕರನನ್ನು ಒಟ್ಟಿಗೆ ಹೋಗೋಣ ಎಂದು ನಿಲ್ಲಹೇಳಿದೆ. ಆದರೆ ಅವನು ಕೇಳಿಯೂ ಕೇಳದವನಂತೆ ಮುಂದೆ ಓಡುತಿದ್ದ. ಕಡೆಗೆ ನಾನು ಹೇಗಾದರೂ ಅವನ ಬೆನ್ನು ಹಿಡಿದು “ಹೇಗಾಯಿತು ನಮ್ಮ ಇಂದಿನ ಸಭೆ?” ಎಂದು ಕೇಳಿದೆ.

“ನೀನು ನಿನ್ನಷ್ಟಕ್ಕೆ ಹೋಗು. ನನ್ನ ಗೋಜಿಗೆ ಬರಬೇಡ” ಎನ್ನುತ್ತ ಭಾಸ್ಕರ ವೇಗದಿಂದ ನನ್ನನ್ನು ತಪ್ಪಿಸಿಕೊಂಡು ಮುಂದೆ ಮುಂದೆ ಹೋದ.

ಆದರೂ ನಾನು ಬೆನ್ನು ಬಿಡಲಿಲ್ಲ. “ ಸ್ವಾತಂತ್ರ್ಯವೆಂದರೆ ಇಂದಿನ ಸಭೆಯಷ್ಟು ಸುಲಭವಲ್ಲ ಭಾಸ್ಕರ. ಅದಕ್ಕೆ ನಮ್ಮ ಜೀವವನ್ನೇ ಪಣಕಟ್ಟಬೇಕು” ಎಂದು ಬುದ್ಧಿ ಹೇಳುವ ಹಾಗೆ ನಟಿಸುತ್ತ ನುಡಿದೆ.

ಭಾಸ್ಕರ ಇದನ್ನು ಕಿವಿಗೆ ಹಾಕಿಕೊಳ್ಳಲೇ ಇಲ್ಲ!

ನಾನು ಮುಂದೆ ಮಾತನಾಡದೆ ಅವನನ್ನೇ ಹಿಂಬಾಲಿಸಿದೆ. ಅವನು ನೇರವಾಗಿ ಹೋಗಿ ಒಂದು ದೊಡ್ಡ ಹೊಟೇಲನ್ನು ಹೊಕ್ಕ. ನಾನೂ ಹೊಕ್ಕೆ.

“ನಾಲ್ಕು ತುಪ್ಪದೊಸೆ; ಎರಡು ಇಡ್ಲಿ; ಒಂದು ಕಪ್ಪು ಕಾಫಿ” ಎಂದು ಭಾಸ್ಕರನು ಹುಡುಗನಿಗೆ ಹೇಳುತ್ತ ಕಡೆಗೆ “ಬೇಗ ತಾ” ಎಂದು ಕಣ್ಣರಳಿಸಿದ.

ನಾನೂ ಭಾಸ್ಕರನ ಬಳಿಯಲ್ಲಿ ಕುಳಿತುಕೊಂಡೆ. ನನ್ನೊಡನೆ ಮತ್ತೆ ಮಾತನಾಡಲೂ ಇಲ್ಲ- ನೋಡಲೂ ಇಲ್ಲ.

ತಿಂಡಿ ಬಂತು. ಗವಗವನೆ ಭಾಸ್ಕರ ತಿನ್ನಲು ಸುರು ಮಾಡಿದ.

“ನನಗೇನೂ ಹೇಳಲಿಲ್ಲವೇ ಭಾಸ್ಕರ ?” ಎಂದು ಕಣ್ಣೊತ್ತುತ್ತ ಕೇಳಿದೆ- ಮತ್ತೂ ಉತ್ತರವಿಲ್ಲ!

ಅವನು ಕಾಫಿ ಕುಡಿದಾಯಿತು. ಹಣ ಕೊಟ್ಟು ಹೊರಟ. ನಾನು ಮತ್ತೂ ಅವನ ಬೆನ್ನು ಬಿಡಲಿಲ್ಲ. ನನ್ನ ಈ ಅಹಿಂಸಾತ್ಮಕ ಉಪಾಯದಿಂದ ಅವನ ಮನಸ್ಸು, ಹೊಟ್ಟೆ ತಣಿದ ಮೇಲೆ ಸ್ವಲ್ಪ ತಿಳಿಯಾಯಿತು. “ನನಗೇಕೆ ಹೀಗೆ ಉಪದ್ರವ ಕೊಡುತ್ತಿರುವೆ ಮಹಾರಾಯಾ? ” ಎಂದು ನನ್ನನ್ನುದ್ದೇಶಿಸಿ ಕೇಳಿದ.

“ನಿನ್ನ ಮನಸ್ಸಿನ ಆಳವನ್ನು ಶೋಧಿಸಲಿಕ್ಕಾಗಿ” ಎಂದೆ ನಾನು.

. . . ಆಗ ಭಾಸ್ಕರನಿಗೆ ನಾಚಿಕೆಯಾಗಿರಲೂ ಬಹುದು !

ಮುಂದುವರಿಸುತ್ತ ನಾನೆಂದೆ “ಜನವರಿ ಇಪ್ಪತ್ತಾರೆಂದು ಯಾರ ಯಾರ ಕೆಲೆಂಡರುಗಳಲ್ಲಿ ಗುರುತು ಹಾಕಿ, ಎಲ್ಲರನ್ನೂ ಆಮಂತ್ರಿಸಿದ್ದೀ ಅವರೆಲ್ಲ

-೧೬ನೇ ಪುಟ ನೋಡಿರಿ



ಜ್ಯೋತಿಷಿ:-ಕೃಷ್ಣಶಾಸ್ತ್ರಿ ಭಿಡೆ, ಭವಿಷ್ಯಕಥನ ಕಾರ್ಯಾಲಯ, ಖಡೇಬಜಾರ ಬೆಳಗಾವಿ

ಫೆಬ್ರುವರಿ ೧೮ ರಿಂದ ೨೪ ರ ವರೆಗೆ

ಮೇಷ

ನಿಮ್ಮ ಮತ್ತು ನಿಮ್ಮ ಕುಟುಂಬದ ಪ್ರಕೃತಿ ನೆಟ್ಟಗೆ. ನಿಮ್ಮಲ್ಲಿಪ್ರೀತಿ,ಮತ್ತೈಕ್ಯ ಕಂಡುಬರುವದು. ಇತರ ಪ್ರಾಪಂಚಿಕ ಸುಖವೂ ನೆಟ್ಟಗೆ. ಆದರೆ ಆಪ್ತರೂ ನೆರೆ ಹೊರೆಯವರೂ ವಿಪರೀತ ವಿಚಾರಣೆ ನಡಿಸಿ ಉಪದ್ರವ ಕೊಡುವರು. ಅಪ್ರಿಯ ಸಂಗತಿಗಳನ್ನು ವಿಚಾರಿಸುವರು. ಉದ್ಯೋಗದಲ್ಲಿ ಪ್ರಗತಿ ಉತ್ತಮ ಲಾಭ ಮತ್ತು ಪ್ರತಿಷ್ಠೆ ಬಯಸಿದಂತೆ. ವಾಹನಗಳಿಂದ ತೊಂದರೆ. ವಾದ ಮತ್ತು ಸ್ಪರ್ಧೆಯಲ್ಲಿ ಯಶಸ್ಸು. ಮುಂದಿನ ಏಳಿಗೆಗೆ ಕಾರಣವಾಗುವ ಸಂಗತಿಗಳಿಗೆ ಚಾಲನೆ ದೊರೆಯುವದು. ಭೆಟ್ಟಿಗಿಂತ ಪತ್ರವ್ಯವಹಾರ ಪ್ರವಾಸ ನೆಟ್ಟಗೆ. ಅಶ್ವಿನಿಯು ೧ ನೇ ಮತ್ತು ೩ ನೇ ಹಾಗೂ ಭರಣಿಯ ೧, ೨, ೪ ನೇ ಚರಣಗಳಿಗೆ ಹೆಚ್ಚು ನೆಟ್ಟಗೆ. ತಾ. ೨೧,೨೨ ನೆಟ್ಟಗೆ.

ವೃಷಭ

ಪ್ರಕೃತಿ ನೆಟ್ಟಗೆ. ಆದರೆ ಸ್ತ್ರೀಸುಖದಲ್ಲಿ ಅಸಮಾಧಾನವೆನಿಸುವ ಸ್ಥಿತಿ. ಇತರ ಪ್ರಾಪಂಚಿಕ ಸುಖದಲ್ಲಿಯೂ ತ್ರಾಸ ಇದ್ದದ್ದೆ. ಉದ್ಯೋಗದಲ್ಲಿ ಪ್ರಗತಿ ಮತ್ತು ಪ್ರತಿಷ್ಠೆ ಉತ್ತಮ. ಆದರೆ ಲಾಭ ಕಡಮೆ. ಉಳಿಕೆಯಲ್ಲಿ ಬಹಳ ಹಣ ವೆಚ್ಚ ಮಾಡುದ ಅಪರಿಹಾರ್ಯ ಪ್ರಸಂಗ. ವಾದದಲ್ಲಿ ಇಲ್ಲವೆ ಸ್ಪರ್ಧೆಯಲ್ಲಿ ಹಿಮ್ಮೆಟ್ಟುವಿಕೆ. ಪ್ರವಾಸಕ್ಕಿಂತ ಭೆಟ್ಟಿ ಮತ್ತು ಪತ್ರವ್ಯವಹಾರ ಸ್ವಲ್ಪ ನೆಟ್ಟಗೆ. ರೋಹಿಣಿ ನಕ್ಷತ್ರಕ್ಕೆ ತ್ರಾಸ ಕಡಿಮೆ. ತಾ. ೧೯, ೨೦ ಮತ್ತು ೨೪ ನೆಟ್ಟಗೆ.

ಮಿಥುನ

ಪ್ರಕೃತಿ ಮತ್ತು ಸ್ತ್ರೀಸುಖ ಉತ್ತಮ. ಪ್ರಾಪಂಚಿಕ ಸುಖವೂ ನೆಟ್ಟಗೆ. ಉದ್ಯೋಗದಲ್ಲಿ ಪ್ರಗತಿ, ಪ್ರತಿಷ್ಠೆ ಲಾಭಗಳೂ ಉತ್ತಮ. ಸಂತತಿಗೆ ಹಿತವಾಗುವ ಸಂಗತಿಗಳು ಸಂಭವಿಸುವವು. ಧರ್ಮಾಭಿಮಾನದ ಸಾರ್ವಜನಿಕ ಕೆಲಸಗಳನ್ನು ಮಾಡುವದಕ್ಕಾಗಿ ಮುಂದರಿಯುವದು. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಒಳ್ಳೆಯ ಯಶಸ್ಸು. ಪ್ರವಾಸಕ್ಕಿಂತ ಭೆಟ್ಟಿ ಪತ್ರವ್ಯವಹಾರ ಹೆಚ್ಚು ನೆಟ್ಟಗೆ. ಆರ್ದ್ರಾಕ್ಕೆ ಹೆಚ್ಚು ನೆಟ್ಟಗೆ. ತಾ. ೧೮, ೨೧ ಮತ್ತು ೨೨ ನೆಟ್ಟಗೆ.

ಕರ್ಕ

ಪ್ರಕೃತಿ ಉತ್ತಮ. ಪ್ರಾಪಂಚಿಕ ಸುಖ ಸಾಧಾರಣ, ಆದರೆ ಸ್ತ್ರೀಸುಖದಲ್ಲಿ ವಿರಸ. ಸ್ಥಾವರ ಆಸ್ತಿಯಲ್ಲಿ ಮುಂದೆ ಹಿತವಾಗುವ ಅನೇಕ ಬದಲಾವಣೆಗಳು ಸಂಭವಿಸುವವು. ಉದ್ಯೋಗದಲ್ಲಿ ಪ್ರಗತಿ ಮತ್ತು ಲಾಭ ಸಾಧಾರಣವಾದರೂ ಪ್ರತಿಷ್ಠೆ ಕಡಿಮೆಯಾಗುತ್ತಿರುವದು. ಮಿತ್ರಸುಖದಲ್ಲಿ ತೊಂದರೆ. ವಿಶೇಷ ವೆಚ್ಚ ಮತ್ತು ವಿರೋಧ. ವಾದ, ಸ್ಪರ್ಧೆಗಳಲ್ಲಿ ಪ್ರತಿಕೂಲ. ಪ್ರವಾಸ ನೆಟ್ಟಗೆ ಆದರೆ ಭೆಟ್ಟಿ, ಪತ್ರವ್ಯವಹಾರ ತ್ರಾಸದ್ದು. ಪುಷ್ಯಾಕ್ಕೆ ತ್ರಾಸ ಕಡಿಮೆ. ತಾ. ೧೮,೧೯, ೨೦ ಮತ್ತು ೨೪ ನೆಟ್ಟಗೆ.

ಸಿಂಹ

ಪ್ರಕೃತಿ ಮತ್ತು ಸ್ತ್ರೀಸುಖ ಉತ್ತಮ. ಸಂತತಿಯಲ್ಲಿ ಒಬ್ಬನಿಗೆ ಕ್ಲೇಶ. ಇತರ ವಿಷಯಗಳಲ್ಲಿ ಪ್ರಾಪಂಚಿಕ ಸುಖ ಮಧ್ಯಮ. ಉದ್ಯೋಗದಲ್ಲಿ ಪ್ರಗತಿ, ಪ್ರತಿಷ್ಠೆ ಮತ್ತು ಲಾಭ ಉತ್ತಮ. ಸ್ಥಾವರ ಜಂಗಮ ಆಸ್ತಿಯಲ್ಲಿ ಸ್ವಲ್ಪ ಹೆಚ್ಚಳ. ಮಿತ್ರಸುಖ ನೆಟ್ಟಗೆ. ಆದರೆ ಅವರಲ್ಲೊಬ್ಬರಿಗೆ ಭಯಂಕರ ಗಂಡಾಂತರದ ಹೆದರಿಕೆ. ವಾದ ಸ್ಪರ್ಧೆಗಳಲ್ಲಿ ಎರಡೂ ಪಕ್ಷಗಳಲ್ಲಿ ಸರಿಸಮಾನತೆ. ಪ್ರವಾಸಾದಿ ಕೆಲಸಗಳು ಮನಸ್ಸಿನಂತೆ ಮಘಾದ ೧ ನೇ ೩ ನೇ, ಪೂರ್ವಾದ ೧ ನೇ ೩ ನೇ ೪ ನೇ ಚರಣಗಳಿಗೆ ಹೆಚ್ಚು ನೆಟ್ಟಗೆ. ತಾ. ೧೮,೧೯, ೨೦ ಮತ್ತು ೨೧ ನೆಟ್ಟಗೆ.

ಕನ್ಯಾ

ಪ್ರಕೃತಿ ಬಹಳ ಕೆಡುವದು. ಪ್ರಾಪಂಚಿಕ ತ್ರಾಸವೂ ವಿಪರೀತ. ಉದ್ಯೋಗದಲ್ಲಿ ಪ್ರಗತಿ, ಪ್ರತಿಷ್ಠೆ ಬಹಳ ಕಡಿಮೆ. ಆ ಮಾನದಿಂದ ಲಾಭ ನೆಟ್ಟಗೆ. ವಾದದಲ್ಲಿ, ಸ್ಪರ್ಧೆಯಲ್ಲಿ ಇಬ್ಬರಲ್ಲಿಯೂ ಸರಿಸಮಾನತೆ. ಮಿತ್ರಸುಖ ನೆಟ್ಟಗೆ, ಪರಸ್ತ್ರೀಯರ ಬಗ್ಗೆ ದುಷ್ಟಬುದ್ಧಿ. ಪ್ರವಾಸಾದಿ ಕೆಲಸಗಳು ನಿರುಪಯೋಗಿಯಾಗುವವು. ಹಸ್ತಾಕ್ಕೆ ತ್ರಾಸ ಕಡಿಮೆ. ತಾ. ೧೯,೨೦,೨೧ ಮತ್ತು ೨೨ ನೆಟ್ಟಗೆ.

ತುಲಾ

ಪ್ರಕೃತಿ ಉತ್ತಮ. ಸ್ತ್ರೀ ಮತ್ತು ಪ್ರಾಪಂಚಿಕ ಸುಖ ಸಾಮಾನ್ಯ. ಮಿತ್ರ ಸುಖ ಉತ್ತಮ. ಸಂಗ್ರಹದಲ್ಲಿ ಹೆಚ್ಚಳ. ಉದ್ಯೋಗದಲ್ಲಿ ಪ್ರಗತಿ ಮತ್ತು ಲಾಭ ಬಹಳ ಚೆನ್ನಾಗಿದ್ದರೂ ಪ್ರತಿಷ್ಠೆ ಅಷ್ಟಕ್ಕಷ್ಟೇ. ವಾದದಲ್ಲಿ ಸ್ಪರ್ಧೆಯಲ್ಲಿ ಒಳ್ಳೆಯ ಯಶಸ್ಸು. ಭೆಟ್ಟಿಗಿಂತ ಪ್ರವಾಸ ಮತ್ತು ಪತ್ರವ್ಯವಹಾರ ನೆಟ್ಟಗೆ. ಸ್ವಾತಿಗೆ ತ್ರಾಸ ಕಡಿಮೆ. ತಾ. ೨೧, ೨೨, ೨೩, ಮತ್ತು ೨೪ ನೆಟ್ಟಗೆ.

ವೃಶ್ಚಿಕ

ಪ್ರಕೃತಿ ಸಾಧಾರಣ. ಪ್ರಾಪಂಚಿಕ ಸುಖವೂ ಹಾಗೆಯೆ. ಆದರೆ ಸ್ತ್ರೀ ಸುಖ ಉತ್ತಮ, ಉದ್ಯೋಗದಲ್ಲಿ ಪ್ರಗತಿ ಪ್ರತಿಷ್ಠೆ ಲಾಭ ಚೆನ್ನಾಗಿದ್ದರೂ ತಲೆಭಾರ ಖರ್ಚು ಸಂಭವಿಸುವದು. ಪ್ರತಿಯೊಂದು ಕೆಲಸವೂ ಅನಿಶ್ಚಿತ. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಒಳ್ಳೆ ಯಶಸ್ಸು. ಮಿತ್ರರಿಗೆ ಪೀಡೆ. ಪ್ರವಾಸಾದಿ ಕೆಲಸಗಳು ಸುಖಕರ. ಅನುರಾಧಾಕ್ಕೆ ತ್ರಾಸ ಕಡಿಮೆ. ತಾ. ೧೮, ೧೯, ೨೦ ಮತ್ತು ೨೪ ನೆಟ್ಟಗೆ.

ಧನು

ಪ್ರಕೃತಿ ಉತ್ತಮ. ಸ್ತ್ರೀಗೆ ಸ್ವಲ್ಪ ತೊಂದರೆ. ಇತರ ವಿಷಯಗಳಲ್ಲಿಯೂ ಪ್ರಾಪಂಚಿಕ ತ್ರಾಸ. ಉದ್ಯೋಗದಲ್ಲಿ ಪ್ರಗತಿ ಉತ್ತಮ, ಲಾಭ ಬೇಕಾದಷ್ಟು ಪ್ರತಿಷ್ಠೆಯೂ ನೆಟ್ಟಗೆ. ವಾದ ಸ್ಪರ್ಧೆಗಳಲ್ಲಿ ಯಶಸ್ಸು. ಭೆಟ್ಟಿಗಿಂತ ಪ್ರವಾಸ, ಪತ್ರವ್ಯವಹಾರ ನೆಟ್ಟಗೆ. ಮೂಲಾದ ೧ ನೇ, ೩ ನೇ, ಮತ್ತೂ ಪೂರ್ವಾಷಾಢಾದ ೧, ೩, ೪ ನೇ ಚರಣಗಳಿಗೆ ತ್ರಾಸ ಕಡಿಮೆ. ತಾ. ೧೯, ೨೦, ೨೧ ಮತ್ತು ೨೨ ನೆಟ್ಟಗೆ.

ಮಕರ

ಪ್ರಕೃತಿಗೆ ಅಸ್ವಾಸ್ಥ್ಯ. ಪ್ರಾಪಂಚಿಕ ತ್ರಾಸವೂ ಇದ್ದದ್ದೆ. ಆದರಲ್ಲಿಯೂ ಬೇಡಾದ ಆಪ್ತರು ಬಂದು ತುಂಬುವರು. ಉದ್ಯೋಗದಲ್ಲಿ ಪ್ರಗತಿ ಪ್ರತಿಷ್ಠೆ ನೆಟ್ಟಗೆ. ಆದರೆ ಲಾಭವೇನೂ ಇಲ್ಲ. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಅನುಕೂಲವಿದ್ದರೂ ವೈರಿಯು ತಲೆಕೆಟ್ಟವನಂತೆ ಹುಡುಗಾಟಿಕೆ ನಡಿಸಿ ನಿಮ್ಮ ಅಪಮಾನಕ್ಕಾಗಿ ಪ್ರಯತ್ನಿಸುವನು. ಗೆಳೆತನದಲ್ಲಿ ವಿರೋಧ. ಗೆಳೆಯರು ಒಡೆದು ಶತ್ರುಗಳನ್ನು ಕೂಡಿಕೊಳ್ಳುವರು. ಪ್ರವಾಸಕ್ಕಿಂತ ಭೆಟ್ಟಿ ಮತ್ತು ಪತ್ರವ್ಯವಹಾರ ಹೆಚ್ಚು ನೆಟ್ಟಗೆ. ಶ್ರವಣಾಕ್ಕೆ ತ್ರಾಸ ಕಡಿಮೆ. ತಾ. ೧೯, ೨೦, ೨೧ ಮತ್ತು ೨೨ ನೆಟ್ಟಗೆ.

ಕುಂಭ

ಪ್ರಕೃತಿ ಸ್ತ್ರೀಸುಖ ನೆಟ್ಟಗೆ. ಇತರ ಪ್ರಾಪಂಚಿಕ ಸುಖ ಸಾಧಾರಣ. ಉದ್ಯೋಗದಲ್ಲಿ ಪ್ರತಿಷ್ಠೆಗಿಂತ ಪ್ರಗತಿ ಮತ್ತು ಲಾಭ ಹೆಚ್ಚು ನೆಟ್ಟಗೆ. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಒಳ್ಳೆ ಯಶಸ್ಸು. ಭೆಟ್ಟಿಗಿಂತ ಪ್ರವಾಸ ಮತ್ತು ಪತ್ರವ್ಯವಹಾರ ಹೆಚ್ಚು ನೆಟ್ಟಗೆ. ಸಂತತಿಯಲ್ಲಿ ಒಬ್ಬನ ಏಳಿಗೆ. ಶತತಾರಿಕೆಗೆ ಹೆಚ್ಚು ನೆಟ್ಟಗೆ. ತಾ॥ ೨೧, ೨೨, ೨೩ ಮತ್ತು ೨೪ ನೆಟ್ಟಗೆ.

ಮೀನ

ಪ್ರಕೃತಿಗೂ ಸ್ತ್ರೀಗೂ ಸ್ವಲ್ಪ ಕ್ಲೇಶ. ಉದ್ಯೋಗದಲ್ಲಿ ಪ್ರಗತಿ ಮತ್ತು ಲಾಭ ಸಾಧಾರಣವಾದರೂ ಪ್ರತಿಷ್ಠೆ ನೆಟ್ಟಗೆ. ಶುಭ ಕಾರ್ಯಕ್ಕಾಗಿ ತಲೆಭಾರ ವೆಚ್ಚ ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಹಿಮ್ಮೆಟ್ಟುವಿಕೆ. ಸರಳ ರೀತಿಯಿಂದ ಮಾತಾಡಿದರೂ ತಪ್ಪುತಿಳಿದುಕೊಳ್ಳುವರು. ಪ್ರವಾಸಾದಿ ಕೆಲಸಗಳು ತ್ರಾಸದಾಯಕ. ಆದರೆ ಉತ್ತರಾಭಾದ್ರಪದಕ್ಕೆ ತ್ರಾಸ ಕಡಿಮೆ. ತಾ॥ ೧೯, ೨೦, ೨೩, ಮತ್ತೂ ೨೪ ನೆಟ್ಟಗೆ.

ಜ್ಞಾನ-ವಿಜ್ಞಾನ ಪ್ರಪಂಚದ ಪ್ರದಕ್ಷಿಣೆ

(೨ನೇ ಪುಟದಿಂದ ಮುಂದುವರಿದುದು)

ಇಂದು, ನಾಳೆ” ಎಂಬ ವಿಷಯದ ಮೇಲೆ ಅಮೋಘವಾದ ಉಪನ್ಯಾಸ ಮಾಡಿದರು. ಬಹಳ ವ್ಯಾಪಕವಾದ ಅವರ ಭಾಷಣದ ಪ್ರಾರಂಭದಲ್ಲಿ ವ್ಯಕ್ತಿ ಹಾಗು ಸಂಘ, ಈ ಎರಡೂ ದೃಷ್ಟಿಗಳಿಂದ ಪ್ರಜಾಪ್ರಭುತ್ವದ ಧ್ಯೇಯಗಳು ಸ್ಪಷ್ಟವಾದವು. ಅನಂತರ ಭಾಷಣಕಾರರು ಹಿಂದಿನ ಪ್ರಜಾಪ್ರಭುತ್ವಗಳನ್ನು ಉಲ್ಲೇಖಿಸಿ ಅವು ವಿಫಲವಾದುದಕ್ಕೆ ಐದು ಕಾರಣಗಳನ್ನು ಹೇಳಿದರು. ಪ್ರತಿನಿಧಿಗಳ ಚುನಾವಣೆ ಆಡಳಿತೆ ಕ್ರಮ, ಆರ್ಥಿಕ ಸ್ಥಿತಿಯಲ್ಲಿರುವ ಮಹದಂತರಗಳು, ದೇಶವಿದೇಶಗಳಿಗೆ ಸಂಬಂಧಿಸಿದ ರಾಜ್ಯನೀತಿ, ರಕ್ಷಣೆ, ಈ ಐದರಲ್ಲೂ ಲೋಪಗಳು ಇದ್ದುದನ್ನು ಎತ್ತಿ ತೋರಿಸಿದರು. ಪಕ್ಷ ಪ್ರಭುತ್ವಕ್ರಮದಲ್ಲಿ ಬಹಳ ತೊಂದರೆಗಳಿರುವದರಿಂದ ಭವಿಷ್ಯದ ಪ್ರಜಾಪ್ರಭುತ್ವಗಳು ಈ ಪಕ್ಷ ಪ್ರಾಬಲ್ಯವನ್ನು ಕಡಿಮೆ ಮಾಡಿ, ಸಾಧ್ಯವಾದಷ್ಟು ಸಮತಾನೀತಿಯನ್ನನುಸರಿಸಿ, ಕಾರ್ಯಕಾರಿಯಾದ ದೇಶರಕ್ಷಣೆಗೆ ವ್ಯವಸ್ಥೆ ಮಾಡಬೇಕೆಂದು ಪ್ರತಿಪಾದಿಸಿದರ.. ಹಿಂದಿನ ಪ್ರಜಾಪ್ರಭುತ್ವಗಳೆಲ್ಲ ವಿಫಲವಾಗಿದ್ದರೂ ಭವಿಷ್ಯದ ಬಗ್ಗೆ ನಿರಾಶೆಗೆ ಅವಕಾಶವಿಲ್ಲವೆಂದರು. ಸಹನೆಯಿಂದಲೂ ಸಹಾನುಭೂತಿಯಿಂದಲೂ ನಾವು ಕೆಲಸ ಮಾಡಿದರೆ ವ್ಯಕ್ತಿಯ ವಿಕಾಸಕ್ಕೂ ಆಡಳಿತದ ವ್ಯವಸ್ಥೆಗೂ ಅಡ್ಡಿ ಬರದಂತಹ ಸಂಪೂರ್ಣ ಸ್ವಾತಂತ್ರ್ಯದ ಪ್ರತೀಕವಾದ ಪ್ರಜಾಪ್ರಭುತ್ವವನ್ನು ಆಚರಣೆಗೆ ತರಬಹುದೆಂದು ತಿಳಿಸಿ ಅದರಲ್ಲಿ ಅಧಿಕಾರವನ್ನು ವಹಿಸಲು ಎಲ್ಲರಿಗೂ ಸಮಾನ ಹಕ್ಕಿರಬೇಕೆಂದು ಮುಗಿಸಿದರು.

ಭಾರತದ ಭವಿತವ್ಯ

ಜನವರಿ ೩೧ನೆಯ ತಾರೀಖು 'ಭಾರತದ ಭವಿಷ್ಯ ರಾಜವ್ಯವಸ್ಥೆ' ಎಂಬ ವಿಷಯವಾಗಿ ಪ್ರೊ. ಆರ್. ಜಿ. ವೆಂಕಟೇಶ್ವರನ್, ಎಂ. ಎ., ಅವರು ಉಪನ್ಯಾಸ ಮಾಡಿದರು. ೧೯೩೫ನೆಯ ಇಸವಿಯಲ್ಲಿ ಜಾಹೀರಾದ ಗೌರ್ನಮೆಂಟ ಆಫ್ ಇಂಡಿಯಾ ಆ್ಯಕ್ಟಿನಿಂದ ಆರಂಭಿಸಿ ರಾಜವ್ಯವಸ್ಥಾ ಕ್ಷೇತ್ರದಲ್ಲಿ ಇಂದಿನ ವರೆಗೆ ನಡೆದ ಇತಿಹಾಸವನ್ನು ವಿವರಿಸಿದರು. ಪ್ರಾಂತೀಯ ಪ್ರಾತಿನಿಧಿಕ ಸರಕಾರಗಳು, ಕಾಂಗ್ರೆಸ್ ಮಂತ್ರಿಮಂಡಳಗಳ ರಾಜೀನಾಮೆ, ೧೯೪೦ನೇ ಆಗಸ್ಟ ಕೊಡುಗೆ, ಪಾಕಿಸ್ತಾನಕ್ಕಾಗಿ ಕೂಗು, ಕ್ರಿಪ್ಸ ಸಲಹೆ, ಕೂಪಲ್ಯಾಂಡ್ ಯೋಜನೆ, ಸಪ್ರೂ ಕಮಿಟಿಯ ಶಿಫಾರಸುಗಳು, ೧೯೪೫ರಲ್ಲಿ ನಡೆದ ಸಿಮ್ಲಾ ಸಮ್ಮೇಳನ— ಎಲ್ಲವನ್ನೂ ಸ್ಪಷ್ಟಗೊಳಿಸಿದರು. ಭಾರತದ ಐಕ್ಯವನ್ನು ಸರ್ವ ವಿಧದಿಂದಲೂ ರಕ್ಷಿಸಿಕೊಳ್ಳಬೇಕೆಂದು ವಾದಿಸಿದರು. ಮುಸಲ್ಮಾನರ ಸಂದೇಹ ನಿವೃತ್ತಿಗೋಸ್ಕರ ಅವರಿಗೂ ರಾಜ್ಯಾಂಗ ಸಭೆ ಮತ್ತು ಮಂತ್ರಿಮಂಡಳಗಳಲ್ಲಿ ಹಿಂದುಗಳಂತೆಯೇ ನಿರ್ದಿಷ್ಟಸ್ಥಾನಗಳು ಸಿಕ್ಕುವಂತೆ ಏರ್ಪಡಿಸಬೇಕೆಂದು ಅವರು ಅಭಿಪ್ರಾಯಪಟ್ಟರು. ದೇಶೀಯ ಸಂಸ್ಥಾನಗಳು, ಭಾಷಾವಾರು ಪ್ರಾಂತ ವಿಭಜನೆ, ಈ ಸಮಸ್ಯೆಗಳನ್ನೂ ಎತ್ತಿ ಕರ್ನಾಟಕ ಏಕೀಕರಣವು ಶೀಘ್ರದಲ್ಲೇ ಸಿದ್ಧವಾಗಲೆಂಬ ಆಶೆಯಿಂದ ಮುಕ್ತಾಯಗೊಳಿಸಿದರು.

ಕೊನೆಯಲ್ಲಿ ಒಂದೆರಡು ಮಾತುಗಳನ್ನು ಹೇಳುತ್ತಾ ಪ್ರೊ. ಡಾ. ಕೆ. ಆರ್. ಶ್ರೀನಿವಾಸ ಅಯ್ಯಂಗಾರರು ಭಾಷಣಗಳಲ್ಲಿ ಯಶಸ್ವಿಯಾಗಿ ಭಾಗ ತೆಗೆದುಕೊಂಡ ಪ್ರಿ. ಡಾ. ನಂದಿಮಠರಿಗೂ ಇತರ ಉಪನ್ಯಾಸಕರಿಗೂ ಧನ್ಯವಾದಗಳನ್ನು ಸಮರ್ಪಿಸಿದರು. ಈ ಹನ್ನೊಂದು ಉಪನ್ಯಾಸಗಳು ಇಡಿಯ ಜ್ಞಾನಪ್ರಪಂಚವನ್ನೇ ವ್ಯಾಪಿಸುವಂತಿದ್ದು ಭೂತ ಭವಿಷ್ಯದ್ವರ್ತಮಾನಗಳನ್ನೆಲ್ಲಾ ಕ್ರೋಡೀಕರಿಸಿರುವುವೆಂದರು. ಊರಿನ ಸಭ್ಯಗೃಹಸ್ಥರನೇಕರು ಈ ಭಾಷಣಗಳಿಗೆ ಪ್ರತಿದಿನವೂ ಬಂದು ಪ್ರಸಾರೋಪನ್ಯಾಸಗಳನ್ನು ಏರ್ಪಡಿಸಿದ್ದರ ಉದ್ದೇಶವನ್ನು ಸಾರ್ಥಕಪಡಿಸಿದರು. ಇದೇ ಬಗೆಯಿಂದ ಸರ್ವತೋಮುಖವಾದ ಉತ್ಸಾಹವು ವರ್ಧಿಸಲೆಂದೂ ಬಸವೇಶ್ವರ ಕಾಲೇಜವು ಭವಿಷ್ಯದಲ್ಲಿ ಹೆಚ್ಚು ಹೆಚ್ಚು ಪ್ರಯೋಜನಕಾರಿಯಾಗಲೆಂದೂ ಡಾ॥ ಅಯ್ಯಂಗಾರರು ಹಾರೈಸಿದರು.

(೧೫ನೇ ಪುಟದಿಂದ ಮುಂದುವರಿದುದು)

ಎಷ್ಟು ತ್ಯಾಗ ಮಾಡಿ ಇಲ್ಲಿಗೆ ಬಂದಿದ್ದರೊ ಏನೋ! ಆ ಕೂಲಿಯಾಳುಗಳನ್ನು ನೋಡಿದೆಯಾ? ಅವರ ಆರ್ಥಿಕ ಸ್ಥಿತಿ ಸಂಕ್ಷಿಪ್ತವಾಗಿ ಹೇಳುವದಾದರೆ ಇಂದು ದುಡಿಯದಿದ್ದರೆ ನಾಳೆ ಅನ್ನವಿಲ್ಲೆಂದು. ಹೀಗಿರುವಾಗ ಅವರ ಮನೆಯೇ ಇಂದು ಹಸಿವಿನ ಸಾಮ್ರಾಜ್ಯವಾಗಿರಬಹುದು! ನಿನಗೇನು? ಮನೆಯಿದೆ, ಜನವಿದೆ, ಆಹಾರವಿದೆ; ಒಂದೆರಡು ತಾಸುಗಳ ಕಾಲ ನಿನಗೆ ನಿನ್ನ ಹಸಿವನ್ನು ತಡೆದುಕೊಳ್ಳಲು ಸಾಮರ್ಥ್ಯವಿಲ್ಲ! ಅಂದಮೇಲೆ ನಿನಗೆ ಮತ್ತೇನನ್ನು ತ್ಯಾಗ ಮಾಡುವ ಶಕ್ತಿಯಿದೆ?''

ಭಾಸ್ಕರನು ಸುಮ್ಮನೆ ಆಲಿಸುತಿದ್ದ.

ಕೊನೆಗೆ ನಾನು “ಮನೋವಾಕ್‌ಕಾಯಪೂರ್ವಕವಾಗಿ ನಾವು ದುಡಿಯಲು ಸಿದ್ಧರಿರಬೇಕು; ಅಂದೇ ನಮ್ಮ ಸ್ವಾತಂತ್ರ್ಯಸಮರವು ತನ್ನ ಯಥಾರ್ಥ ಗುರಿಯನ್ನು ಸಾಧಿಸಲು ಶಕ್ತವಾಗುವದು. ನೋಡಿದರೆ ನಿನ್ನದೀಗ ಬಾಯಿಯ ಬಡಾಟ! ಮನಸ್ಸಿನಲ್ಲಿ ಎಳ್ಳಷ್ಟೂ ನಿನಗೆ ಬೇಗುದಿಯಿಲ್ಲ! ಮತ್ತೆ ಕಾಯ? ....ಅದು ಹಸಿವಿನ ತವರುಮನೆ! ....ನೀನೇಕೆ ಮತ್ತೆ ಇತರರೆದುರು ಜಂಭ ಕೊಚ್ಚಿಕೊಳ್ಳುವೆ?” ಎಂದು ಮುಕ್ತಾಯಗೊಳಿಸಿದೆ.

....ಕಲ್ಲಿದ್ದಲಿನ ಬಣ್ಣವನ್ನೂ ಸೋಲಿಸುತಿತ್ತು ಆಗ ಭಾಸ್ಕರನ ಮುಖದ ಬಣ್ಣ!

—ಮರುದಿನ ಅವನಣ್ಣ ನೋಡಸಿಕ್ಕಿದ[illegible] ನನ್ನೊಡನೆ, ಭಾಸ್ಕರನು ಮುಂಚಿನ ದಿನ ಊಟ ಮಾಡದೆ ಉಪವಾಸವಿದ್ದನೆಂದು ತಮ್ಮ ಆಶ್ಚರ್ಯವನ್ನು ವ್ಯಕ್ತಪಡಿಸಿದರು. ನಾನದಕ್ಕೆ “ನಿನ್ನೆ ಜನೆವರಿ ಇಪ್ಪತ್ತಾರಲ್ಲವೇ ?” ಎಂದು ನಕ್ಕೆ.

ಈ ಪತ್ರಿಕೆಯು ಹುಬ್ಬಳ್ಳಿಯ ಸಂಯುಕ್ತ-ಕರ್ನಾಟಕ ಮುದ್ರಣಾಲಯದಲ್ಲಿ ರಾಷ್ಟ್ರೀಯ ವಾಙ್ಮಯ ಪ್ರಕಾಶನ ಟ್ರಸ್ಟಿನ ಪರವಾಗಿ ಹ. ರಾ. ಮೋಹರೆಯವರಿಂದ ಮುದ್ರಿಸಿ ಪ್ರಕಟವಾಯಿತು.